75
1948-2022
ಅಮೃತ ಮಹೋತ್ಸವ ವರ್ಷ

ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಗಸ್ಟ್ 2023
ಬೆಲೆ ರೂ.1




**ಸಂಘದ ಸಭಾಂಗಣದಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ಕ.ರಾ. ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಸಹಯೋಗದಲ್ಲಿ ಆಯೋಜನೆಗೊಂಡ ಚಿತ್ರಕಲೆ, ಸಾಹಿತ್ಯ, ಅಭಿನಯ ಮತ್ತು ಸಂಗೀತ ಕಾರ್ಯಾಗಾರದಲ್ಲಿ ಭಾಗವಹಿಸಿದ ಮಕ್ಕಳೊಂದಿಗೆ ದೃಶ್ಯ ಸಂಭ್ರಮ**




**ಸಂಘದಲ್ಲಿ ಏರ್ಪಡಿಸಿದ ಆರೋಗ್ಯ ಮೇಳ ಮತ್ತು ರಕ್ತದಾನ ಶಿಬಿರ ಉದ್ಘಾಟನೆಗೊಂಡ ಸಂದರ್ಭ**



**ಸಂಘದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾದ ಹಿರಿಯ ದೆಹಲಿ ಕನ್ನಡಿಗರು**

## "ಕರ್ನಾಟಕ ರಾಜ್ಯದ ಜನಪ್ರಿಯ ನಾಯಕರೂ ಹಾಗು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಗೌರವ ಡಾಕ್ಟರೇಟ್ ಪ್ರದಾನ"




ಜುಲೈ 21ರಂದು ನಡೆದ ತನ್ನ ಎಂಟನೇ ಘಟಿಕೋತ್ಸವದಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು **ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ** ಕೃಷಿ ಮತ್ತು ಗ್ರಾಮಾಭಿವೃದ್ಧಿ ಕ್ಷೇತ್ರಗಳಲ್ಲಿ ನೂತನ ಯೋಜನೆಗಳನ್ನು ಸಾಕಾರಗೊಳಿಸಿದ ಅವರ ಸಾಧನೆಯನ್ನು ಪರಿಗಣಿಸಿ **'ಗೌರವ ಡಾಕ್ಟರೇಟ್'** ಪ್ರಶಸ್ತಿ ಪ್ರದಾನ ಮಾಡಿದೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ರಾಜ್ಯ ಕಂಡ ಧೀಮಂತ ರಾಜಕಾರಣಿ, ಕನ್ನಡಿಗರ ಕಣ್ಮಣಿ, ಬಹುಮುಖಿ ಚಿಂತಕ, ರೈತ ನಾಯಕ, ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ ಮಾದರಿಯಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಹಾರ್ದಿಕ ಅಭಿನಂದನೆಗಳು.

2011ರಲ್ಲಿ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕಾರ್ಯಕಾಲದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಕೋಟಿ ರೂಪಾಯಿಗಳ ಅನುದಾನ ನೀಡಿಕೆ ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಕರ್ನಾಟಕ ಸರ್ಕಾರದಿಂದ 2 ಬಸ್ಸುಗಳನ್ನು ಕೊಡುಗೆಯಾಗಿ ಕೊಟ್ಟಿರುವುದನ್ನು ಸ್ಮರಿಸುತ್ತಾ ಅವರಿಗೆ ಅಭಿಮತ ಓದುಗರ ಪರವಾಗಿ ಅನಂತಾನಂತ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ಅರ್ಪಿಸುತ್ತಿದ್ದೇವೆ.

## "ಅಮೇರಿಕಾದಲ್ಲಿ ನಡೆದ ಜಿ-20 ಸಭೆಯಲ್ಲಿ ಭಾಗವಹಿಸಿದ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು"




ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಇತ್ತೀಚೆಗೆ ಜುಲೈ 23, 2023 ರಂದು ಇಂಡಿಯನ್ ಅಮೇರಿಕನ್ ಲೀಡರ್ ಶಿಪ್ ಕಮಿಟಿಯ ಆಹ್ವಾನದ ಮೇರೆಗೆ ವಾಷಿಂಗ್ಟನ್ ಡಿಸಿಯಲ್ಲಿರುವ ಕ್ಯಾಪಿಟಲ್ ಹಿಲ್‌ನ ಅಮೇರಿಕದ ಸಂಸದ ಭವನದಲ್ಲಿ ಜಿ–20 ಸಭೆಯನ್ನುದ್ದೇಶಿಸಿ ಮಾತನಾಡಿ, ನೆರೆದಿದ್ದವರಿಗೆ ಆಶೀರ್ವಚನ ನೀಡಿದ್ದಾರೆ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಪೂರ್ವಕ ಅಭಿನಂದನೆಗಳು.

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಚುಂಚಶ್ರೀಗಳಿಗೆ ಗೌರವ ಡಾಕ್ಟರೇಟ್



ಬೆಳಗಾವಿಯಲ್ಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯು (VTU)ವು ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿಗಳು, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರಿಗೆ ಅವರು ಶಿಕ್ಷಣ ಕ್ಷೇತ್ರದಲ್ಲಿ ನೀಡಿರುವ ಸೇವೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್ ನೀಡಲಿದೆ. ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಈ ಪದವಿಯನ್ನು ಶ್ರೀಗಳಿಗೆ ಪ್ರದಾನ ಮಾಡಲಿದ್ದಾರೆ.

ನಾಡಿನ ಏಳು ಕೋಟಿ ಕನ್ನಡ ಜನತೆ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳಿಗೆ ಗೌರವ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 33 । ಸಂಚಿಕೆ 11
ಅಗಸ್ಟ್ 2023

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ
ಸದಸ್ಯರು
ಎಸ್. ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ
ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್
ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್
ಕೋಶಾಧಿಕಾರಿ
ರಾಧಾಕೃಷ್ಣ
ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ
ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಎಸ್. ಕೃಷ್ಣ ಭಟ್

**ಕಾವಲು ಸಮಿತಿ**

ಅನಂತರಾಮು ಅರಳ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ

## ಸಂಪಾದಕೀಯ ಮನದಾಳದಿಂದ...

# ‘ಕಾರ್ಗಿಲ್ ಯುದ್ಧ "ಆಪರೇಷನ್ ವಿಜಯ್" ಹುತಾತ್ಮರಿಗೆ ನಮನ'

## 'ಸಫಲವಾಗಿ ಬಾಹ್ಯಾಕಾಶಕ್ಕೆ ಚಿಮ್ಮಿದ ಚಂದ್ರಯಾನ-3, ಯಶಸ್ವಿಯಾಗಲಿ ಚಂದ್ರಮನ ಈ ಪರಿಶೋಧನ ಅಭಿಯಾನ'

ಆತ್ಮೀಯ ಎಲ್ಲ ಕನ್ನಡಿಗರಿಗೆ ಹಾಗು ಓದುಗ ಬಂಧುಗಳಿಗೆ ನಮಸ್ಕಾರ, ಕಳೆದ ಜುಲೈ 26ರಂದು ಆಚರಿಸಿದ **ಕಾರ್ಗಿಲ್ ವಿಜಯ್ ದಿವಸದ** ಅಭಿನಂದನೆಗಳು ಮತ್ತು ಜುಲೈ 29 ರಂದು ಆಚರಣೆಯಾದ **ಅಂತರರಾಷ್ಟ್ರೀಯ ಹುಲಿ** ದಿನ ಹಾಗೂ ಜುಲೈ 30ರಂದು ಸಂಭ್ರಮಿಸಿದ **ಅಂತರರಾಷ್ಟ್ರೀಯ ಸ್ನೇಹ** ದಿನದ ಹಾರ್ದಿಕ ಶುಭಾಶಯಗಳು.

24 ವರ್ಷಗಳ ಹಿಂದೆ, 1999ರ ಕಾರ್ಗಿಲ್ ಯುದ್ಧದಲ್ಲಿ, 12000 ಅಡಿ ಎತ್ತರದ ಡ್ರಾಸ್, ಕಕ್ಸರ್, ಬಟಾಲಿಕ್ ಮತ್ತು ತುರ್ಟುಕ್ ಸೆಕ್ಟರ್‌ನ ದುರ್ಗಮ ಪ್ರದೇಶಗಳಲ್ಲಿ ಪಾಕಿಸ್ತಾನದ ಅತಿಕ್ರಮಣಕಾರರನ್ನು ಸದೆ ಬಡಿದು ಹಿಂದಟ್ಟಿದ ನಮ್ಮ ಸೈನ್ಯದ ವೀರರನ್ನು ಅಭಿನಂದಿಸುತ್ತಾ, ಭಾರತ ಮಾತೆಯ ಗಡಿ ರಕ್ಷಣೆ ಕರ್ತವ್ಯದಲ್ಲಿ ತಮ್ಮ ಪ್ರಾಣವನ್ನು ಬಲಿದಾನ ನೀಡಿ ಹುತಾತ್ಮರಾದ ವೀರಯೋಧರಿಗೆ ಶಿರಬಾಗಿ ನಮಿಸುತ್ತೇನೆ. ‘ಅಮರ್ ರಹೇ ಹಮಾರಾ ಶಹೀದ್ ಜವಾನ್’.

ಇನ್ನು, **ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ** (ISRO)ಯ ಯೋಜಿತ ಚಂದ್ರನ ಪರಿಶೋಧನಾ ಕಾರ್ಯಾಚರಣೆಯಲ್ಲಿ, ಇದೇ ಜುಲೈ 14ರಂದು ಯಶಸ್ವಿಯಾಗಿ ನಡೆದ ಚಂದ್ರಯಾನ–3 ರಾಕೇಟ್‌ನ ಅಂತರಿಕ್ಷ ಉಡಾವಣೆಯು ಜಾಗತಿಕ ಮಟ್ಟದಲ್ಲಿ ಭಾರತೀಯರ ಮತ್ತೊಂದು ಮಹತ್ತರ ಸಾಧನೆಯಾಗಿದೆ. ಈ ಯಶಸ್ಸಿನಲ್ಲಿ ಭಾಗಿಯಾದ ಬೆಂಗಳೂರಿನಲ್ಲಿರುವ ಇಸ್ರೋ ಸಂಸ್ಥೆಯ ಚೇರ್ಮನ್ ಶ್ರೀ ಎಸ್. ಸೋಮನಾಥ್, ಶ್ರೀಹರಿಕೋಟದಲ್ಲಿರುವ **ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ** (SDSC)ದ ನಿರ್ದೇಶಕ ಶ್ರೀ ಎ. ರಾಜರಾಮನ್ ಹಾಗೂ ನಮ್ಮ ರಾಜ್ಯದ ಮತ್ತು ದೇಶದ ಹೆಮ್ಮೆಯ ವಿಜ್ಞಾನಿಗಳಿಗೆ ಅಭಿನಂದನೆಗಳು.

ಆಂಧ್ರಪ್ರದೇಶದ ಶ್ರೀಹರಿಕೋಟ ಶ್ರೇಣಿ (SHAR) ರಾಕೆಟ್ ಉಡಾವಣಾ ಕೇಂದ್ರದಿಂದ ಚಂದ್ರಯಾನ–3 ಮೋಡುಲ್ ವಿಕ್ರಮ್ ಲ್ಯಾಂಡರ್ ಮತ್ತು ಪ್ರಗ್ಯಾನ್ ರೋವರ್ ಅನ್ನು ಹೊತ್ತ LMV3 M4 ರಾಕೇಟ್ ಜುಲೈ 14, 2023 ರಂದು ಮಧ್ಯಾಹ್ನ 2.35ಕ್ಕೆ ಯಶಸ್ವಿಯಾಗಿ ಉಡಾವಣೆಗೊಂಡು ಅಬ್ಬರಿಸುತ್ತಾ ಚಂದ್ರನತ್ತ ಸಾಗಿದೆ. ಈಗಾಗಲೇ ಚಂದ್ರನ ಆರ್ಬಿಟ್ ತಲುಪಿ ಚಂದಿರನ ಸುತ್ತ ಪ್ರದಕ್ಷಿಣೆ ಆರಂಭಿಸಿದ್ದು ಆಗಸ್ಟ್ 23 ರಂದು ಸಂಜೆ 5.47 ಕ್ಕೆ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲಿದೆ. ಈ ಹಿಂದೆ ಕೈಗೊಂಡ ಚಂದ್ರಯಾನ–2ರ ಅಭಿಯಾನ ಕೊನೆಗಳಿಗೆಯಲ್ಲಿ ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಪೂರ್ವ ನಿಯೋಜಿತವಾದಂತೆ ಇಳಿಯಲು ವಿಫಲವಾದ ಹಿನ್ನೆಲೆಯಲ್ಲಿ ಧೃತಿಗೆಡದೆ ಮರಳಿ ಯತ್ನವನ್ನು ಮಾಡಿ ಚಂದ್ರಯಾನ–3 ಅಭಿಯಾನವನ್ನು ಸಾಕಾರಗೊಳಿಸುತ್ತಿರುವ ನಮ್ಮ ವಿಜ್ಞಾನಿಗಳು ಪ್ರಶಂಸಾರ್ಹರು. ಅವರ ಈ ಪ್ರಯತ್ನದಲ್ಲಿ ಎಲ್ಲಾ ಯೋಜಿತ ಉದ್ದೇಶಗಳು ಪೂರ್ಣಗೊಂಡು ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಇಳಿಯುವ ಕಾರ್ಯ ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇನೆ.

ಇತ್ತೀಚೆಗಷ್ಟೇ ಅಂತರರಾಷ್ಟ್ರೀಯ ಹುಲಿ ದಿನವನ್ನು ಆಚರಿಸಿದ್ದೇವೆ. ನಮಗೆ ಲಭ್ಯವಿರುವ ಈಗಿನ ಮಾಹಿತಿ ಪ್ರಕಾರ ವಿಶ್ವದಲ್ಲಿರುವ ಹುಲಿಗಳ ಸಂಖ್ಯೆಯಲ್ಲಿ ಶೇಕಡಾ 75 ರಷ್ಟು ಭಾರತದಲ್ಲಿದ್ದು, ಪ್ರಸ್ತುತ, 3682 ಹುಲಿಗಳು ನಮ್ಮ ದೇಶದಲ್ಲಿವೆ ಎಂದು ಅಂದಾಜಿದೆ. ಮಧ್ಯಪ್ರದೇಶದ ನಂತರ ಎರಡನೇ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಒಟ್ಟು 563 (ಅದರಲ್ಲಿ ಬಂಡಿಪುರದಲ್ಲಿ 150, ನಾಗರಹೊಳೆಯಲ್ಲಿ 141) ಹುಲಿಗಳಿರುವುದು ನಾವೆಲ್ಲಾ ಹೆಮ್ಮೆ ಪಡುವ ವಿಷಯ. **‘ಪ್ರಾಜೆಕ್ಟ್ ಟೈಗರ್’** ಕ್ರಿಯಾಯೋಜನೆಯಲ್ಲಿ ಹುಲಿಗಳ ಸಂಖ್ಯೆ ಏರಿಕೆಯಾಗಿರುವುದು ಗಮನಾರ್ಹ ಹಾಗೂ ನಮ್ಮ ರಾಷ್ಟ್ರ ಪ್ರಾಣಿಯ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ.

ಬಂಧುಗಳೇ, ಈಗಾಗಲೇ ರಜಾ ದಿನಗಳು ಮುಗಿದು ಶಾಲಾ ಕಾಲೇಜುಗಳು ಪುನಾರಂಭವಾಗಿವೆ. ರಾಜ್ಯದ ಹಲವೆಡೆ, ದೇಶದಾದ್ಯಂತ ಜೋರಾಗಿ ಮುಂಗಾರು ಮಳೆಯಾಗುತ್ತಿದೆ, ದೆಹಲಿಯಲ್ಲಿ ಯಮುನೆ ಮತ್ತು ಕರ್ನಾಟಕದಲ್ಲಿ ಎಲ್ಲಾ ನದಿಗಳು ಉಕ್ಕಿ ಹರಿದಿವೆ, ಜಲಾಶಯಗಳು ತುಂಬಿವೆ.ಮಲೆನಾಡಿನ ಪರಿಸರದಲ್ಲಿ ಕಳೆದ ಬಾಲ್ಯದ ಮಳೆಗಾಲದ ದಿನಗಳು ನೆನಪಾಗುತ್ತಿವೆ. ಜೂನ್ ತಿಂಗಳಲ್ಲಿ ಸ್ವಲ್ಪ ತಗ್ಗಿದ ಸಂಘದ ಕಾರ್ಯಕ್ರಮಗಳೂ ಸಹ ಜುಲೈನಲ್ಲಿ ಪ್ರತಿ ವಾರಾಂತ್ಯ ಮತ್ತೆ ನಡೆಯಲು ಶುರುವಾಗಿವೆ. ಕನ್ನಡ ಕಲಿಕೆ, ಸಂಗೀತ ಮತ್ತು ನೃತ್ಯ ತರಬೇತಿ ಶಿಬಿರಗಳು ಸಂಘದಲ್ಲಿ ನಿರಂತರವಾಗಿ ನಡೆಯುತ್ತಿವೆ. **ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು** ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು 10ನೇ ಮತ್ತು 12ನೇ ತರಗತಿ ಮುಗಿಸುತ್ತಿರುವ ಹಾಗೂ ಮುಂದಿನ ಶೈಕ್ಷಣಿಕ ವರ್ಷದ ಹೊಸ್ತಿಲಲ್ಲಿರುವ ನಮ್ಮ ಸದಸ್ಯರ ಮಕ್ಕಳಿಗೆ ಅನುಕೂಲವಾಗಲು ಸಂಘದಲ್ಲಿ ಕಳೆದ ಜುಲೈ 2 ರಂದು ಪೋಷಕರು ಮತ್ತು ಮಕ್ಕಳೊಂದಿಗೆ ಉನ್ನತ ಶಿಕ್ಷಣ ಕೋರ್ಸ್‌ಗಳ ಕುರಿತು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡಿ ಸಮಾಲೋಚನೆ ನಡೆಸಲಾಗಿದೆ. ಜುಲೈ 16 ರಂದು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ, ದೆಹಲಿ ಘಟಕದ ಸಹಯೋಗದೊಂದಿಗೆ, ಕನ್ನಡಿಗರ ಮಕ್ಕಳಿಗಾಗಿ ಚಿತ್ರಕಲೆ, ಸಾಹಿತ್ಯ ಸಂಗೀತ ಮತ್ತು ಅಭಿನಯ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡುವ ನಿಟ್ಟಿನಲ್ಲಿ ಆಯೋಜಿಸಿದ ಕಾರ್ಯಾಗಾರವು, 101 ಸ್ಥಳೀಯ ಮಕ್ಕಳು ಪಾಲ್ಗೊಳ್ಳುವುದರೊಂದಿಗೆ ಅತ್ಯಂತ ಯಶಸ್ವಿಯಾಗಿದೆ.

ಕಳೆದ ಜುಲೈ 23 ರಂದು ಸಂಘದಲ್ಲಿ ಆಯೋಜನೆಗೊಂಡ ಆರೋಗ್ಯ ಮೇಳ, ರಕ್ತದಾನ ಶಿಬಿರ ಮತ್ತು ರಕ್ತ ಪರೀಕ್ಷೆಯ ಪ್ರಯೋಜನವನ್ನು ಭಾಗವಹಿಸಿದ ದೆಹಲಿ ಕನ್ನಡಿಗರು ಪಡೆದುಕೊಂಡಿದ್ದಾರೆ. ಜುಲೈ 30ರಂದು ಸಂಘದ ಹಿರಿಯರೊಂದಿಗೆ ನಡೆದ ಸಂವಾದದಲ್ಲಿ, ಕಾರ್ಯಕಾರಿ ಸಮಿತಿಯಲ್ಲಿ ಈ ಹಿಂದೆ ಕಾರ್ಯ ನಿರ್ವಹಿಸಿದ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿಗಳು ಹಿರಿಯ ದೆಹಲಿ ಕನ್ನಡಿಗರು ತಮ್ಮ ಅನುಭವಗಳನ್ನು ಹಂಚಿಕೊಂಡು, ಮುಂದಿನ ಕಾರ್ಯಗಳಿಗೆ ಸೂಕ್ತ ಸಲಹೆ, ಕಿವಿಮಾತುಗಳನ್ನು ನೀಡಿದ್ದಾರೆ. ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದ ತಂಡದಿಂದ ಅದೇ ಸಂಜೆ ಸಾಣೇಹಳ್ಳಿ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರ ದಿವ್ಯ ಸಾನಿಧ್ಯದಲ್ಲಿ ಪ್ರಸ್ತುತಿಗೊಂಡ ಬಸವಣ್ಣನವರ ವಚನಗಳನ್ನು ಆಧಾರಿತ ನೃತ್ಯರೂಪಕ ಕಾರ್ಯಕ್ರಮ ‘ನೀನಲ್ಲದೆ ಮತ್ತಾರೂ ಇಲ್ಲವಯ್ಯ’ ದೆಹಲಿ ಕನ್ನಡಿಗರ ಮನಸೂರೆಗೊಂಡಿದೆ. ಸಂಘದಲ್ಲಿ ನಡೆದ ಈ ಎಲ್ಲಾ ವೈವಿಧ್ಯಮಯ ಕಾರ್ಯಕ್ರಮಗಳ ವರದಿಗಳು, ಆಯ್ದ ಛಾಯಾ ಚಿತ್ರಗಳು, ಆರೋಗ್ಯ ಭಾಗ್ಯ ವಿಶೇಷ ವೈದ್ಯಕೀಯ ಅಂಕಣ, ಇಮ್ಮಡಿ ಪುಲಿಕೇಶಿ ಕುರಿತು ಲೇಖನ, ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿಯವರ ಕೃತಿ ಅವಲೋಕನ, ಅಗಲಿದ ಶ್ರೀ ಹರಿಶ್ಚಂದ್ರ ಬಂಟ್ವಾಳ್ ಮತ್ತು ಶ್ರೀ ಶಿವಾನಂದ ಹೆಬ್ಬಾರ್‌ರವರಿಗೆ ನೀಡಿದ ನುಡಿನಮನ ಶ್ರದ್ಧಾಂಜಲಿ, ಸ್ಥಳೀಯ ಸಂಘ ಸಂಸ್ಥೆಗಳ ಮತ್ತಿತರ ಕಾರ್ಯಕ್ರಮಗಳ ವರದಿಗಳನ್ನೊಳಗೊಂಡು ಹೊರ ಬರುತ್ತಿದೆ ಅಭಿಮತದ ಈ ತಿಂಗಳ ಸಂಚಿಕೆ. ಇದು ನಿಮಗೆಲ್ಲರಿಗೂ ಮೆಚ್ಚುಗೆಯಾಗಬಹುದೆಂದು ನನ್ನ ಭಾವನೆ. ಕಳೆದ ಸಂಚಿಕೆಗೆ ಬಂದಿರುವ ಉತ್ತಮ ಪ್ರತಿಕ್ರಿಯೆ ನಮ್ಮ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ.

**ಆತ್ಮೀಯರೇ, ಇತ್ತೀಚಿನ ದಿನಗಳಲ್ಲಿ ವಾಟ್ಸಾಪ್, ಫೇಸ್‌ಬುಕ್, ಮತ್ತಿತರ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ನಮ್ಮ ದೆಹಲಿ ಕನ್ನಡಿಗರಲ್ಲಿ ಓದುವ, ಬರೆಯುವ ಹವ್ಯಾಸ ಗಣನೀಯವಾಗಿ ಕಡಿಮೆಯಾಗಿರುವುದು ಕಾಳಜಿಯ ವಿಷಯ. ಸಂಘದ ಸದಸ್ಯರಲ್ಲಿ ವೈಚಾರಿಕ, ಸೃಜನಾತ್ಮಕ, ರಚನಾತ್ಮಕ ಬರವಣಿಗೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮತ್ತು ಅಭಿಮತಕ್ಕೆ ಹೊಸ ಆಯಾಮವನ್ನು ನೀಡಲು, ಹಿರಿಯರಿಂದ, ಮಕ್ಕಳಿಂದ, ಮಹಿಳೆಯರಿಂದ, ತಜ್ಞರಿಂದ, ಸಾಹಿತ್ಯಿಕ, ವೈಜ್ಞಾನಿಕ, ವೈದ್ಯಕೀಯ, ಶೈಕ್ಷಣಿಕ, ಸಾಮಾಜಿಕ, ಐತಿಹಾಸಿಕ, ರಂಗಭೂಮಿ ಮುಂತಾದ ವಿಷಯಗಳ ಕುರಿತು ಲೇಖನಗಳು, ಕವಿತೆಗಳು, ಹನಿಗವನ, ಸಣ್ಣ ಕಥೆ, ನಗೆ ಬರಹ, ಚುಟುಕುಗಳು, ವ್ಯಂಗ್ಯ ಚಿತ್ರಗಳು, ಧಾರವಾಹಿ ಸರಣಿಗಳು, ಪರಿಸರ ಫೋಟೋಗ್ರಫಿ, ಹಬ್ಬಗಳ ವಿಶೇಷತೆ, ಪ್ರವಾಸ ಕಥನ, ದೆಹಲಿಯ ಜೀವನದ ಅನುಭವಗಳು, ವ್ಯಕ್ತಿ ವಿಶೇಷ, ಸ್ಥಳ ಮಹತ್ವ, ಪುಸ್ತಕ ವಿಮರ್ಶೆ ಮುಂತಾದವುಗಳನ್ನು ಆಹ್ವಾನಿಸುತ್ತಿದ್ದೇನೆ.** ನಮಗೆ ಬಂದವುಗಳಲ್ಲಿ ಆಯ್ದ ಲೇಖನಗಳನ್ನು ಅಭಿಮತದ ಮುಂದಿನ ಸಂಚಿಕೆಗಳಲ್ಲಿ ಹಾಗು ದೀಪಾವಳಿ/ಯುಗಾದಿ ವಿಶೇಷಾಂಕಗಳಲ್ಲಿ ಪ್ರಕಟಿಸಲಾಗುವುದು. ಇದಕ್ಕೆ ಪೂರಕವಾಗಿ ನೀವೆಲ್ಲರೂ ಸ್ಪಂದಿಸುವಿರೆಂದು ಭಾವಿಸುತ್ತಾ ನಿಮ್ಮ ಸಕಾರಾತ್ಮಕ ಸಲಹೆಗಳನ್ನು ಮತ್ತು ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತೇನೆ. ಧನ್ಯವಾದಗಳು.

ಮುಂಬರುವ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳೊಂದಿಗೆ,

**ಕೆ. ಶ್ರೀನಿವಾಸ ಮೂರ್ತಿ**
**ಪ್ರಧಾನ ಸಂಪಾದಕರು**

## ಅಧ್ಯಕ್ಷರ ನುಡಿ



ಆತ್ಮೀಯ ಕನ್ನಡ ಬಂಧುಗಳೇ,

ಮೊಟ್ಟ ಮೊದಲಿಗೆ ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ISRO)ಯು ಯೋಜಿತ ಚಂದ್ರಯಾನ–3 ಕಾರ್ಯಾಚರಣೆಗೆ ಜುಲೈ 14ರಂದು ಯಶಸ್ವಿಯಾಗಿ ನಭಕ್ಕೆ ಹಾರಿಸಿದ ಇಸ್ರೋ ಸಂಸ್ಥೆಯ ಮುಖ್ಯಸ್ಥ ಶ್ರೀ ಎಸ್. ಸೋಮನಾಥರಿಗೆ ಹಾಗೂ ನಮ್ಮ ರಾಜ್ಯದ ಮತ್ತು ದೇಶದ ಹೆಮ್ಮೆಯ ವಿಜ್ಞಾನಿಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ದೆಹಲಿ ಕರ್ನಾಟಕ ಸಂಘದ ಇತಿಹಾಸದ ಈ ಅಮೃತ ಮಹೋತ್ಸವ ಕಾಲದಲ್ಲಿ ನಾನು ಅಧ್ಯಕ್ಷನಾಗಿ ಬಂದಿರುವುದು ನನ್ನ ಸೌಭಾಗ್ಯ. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ಇನ್ನೊಂದು ಜಾಗವನ್ನು ತೆಗೆದುಕೊಳ್ಳಬೇಕು, ಆ ಜಾಗದಲ್ಲಿ ಇನ್ನೂ ಅತಿ ಹೆಚ್ಚು ಕನ್ನಡದ ಕಾರ್ಯಗಳು ನಡೆಯಬೇಕೆಂದು ನಮ್ಮ ಅಭಿಲಾಷೆ ಇದೆ.

ಬಂಧುಗಳೇ, **ನನ್ನ ಅಧ್ಯಕ್ಷೀಯ ಕಾರ್ಯಾವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಖಜಾನೆಯಿಂದ ಹಣ ತೆಗೆಯದೆ ನನ್ನ ಸ್ನೇಹಿತರು, ಬಂಧುಗಳು, ಪರಿಚಿತರ ಉದಾರ ದೇಣಿಗೆಯಿಂದ ಈ ಅಮೃತ ಮಹೋತ್ಸವದ ವರ್ಷವಿಡೀ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದೇವೆ. ಸಮಾರೋಪ ಸಮಾರಂಭವೂ ಸೇರಿದಂತೆ ಸುಮಾರು 2500ಕ್ಕೂ ಹೆಚ್ಚು ಕಲಾವಿದರು ಪೂರ್ತಿ ವರ್ಷವಿಡೀ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜೊತೆಗೆ ಸಂಘಕ್ಕೆ ಹಣಕಾಸಿನ ಹೊರೆ ಬೀಳದಂತೆ ಸ್ನೇಹಿತರುಗಳ ಜೊತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಲೂ ಹಣವನ್ನು ಸಂಗ್ರಹಿಸಿ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಯಶಸ್ವಿಯಾಗಿದ್ದೇವೆ. ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಹೊಸ ಜಾಗಕ್ಕೆ ಒಂದು ಕೋಟಿ ರೂಪಾಯಿ ಸಂಘಕ್ಕೆ ಉಳಿಸಿ ಆ ಹಣವನ್ನ ಬ್ಯಾಂಕಿನಲ್ಲಿ ಎಫ್‌ಡಿ ಯನ್ನಾಗಿ ಸಹಾ ಮಾಡಲಾಗಿದೆ.**

ದೆಹಲಿ ಕರ್ನಾಟಕ ಸಂಘದ ಹಿರಿಯರು ಮತ್ತು ಮಾಜಿ ಪದಾಧಿಕಾರಿಗಳನ್ನು ಜೊತೆಗೂಡಿಸಿಕೊಂಡು ಅಮೃತ ಮಹೋತ್ಸವ ವರ್ಷದ ಕಾರ್ಯಕಾಲದಲ್ಲಿ ಜುಲೈ 30ರಂದು ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಅವರ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆದುಕೊಂಡಿದ್ದೇವೆ. ಇನ್ನು ಅನೇಕ ಕೆಲಸಗಳು ನಮ್ಮ ಮುಂದೆ ಇವೆ. ಪ್ರತಿ ಭಾನುವಾರ ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿದ್ದೇವೆ. ಆಗಸ್ಟ್ ತಿಂಗಳ 19ನೇ ತಾರೀಕು ಅಹೋರಾತ್ರಿ ಯಕ್ಷಗಾನ ನಡೆಯಲಿದೆ. ಹನುಮಗಿರಿ ಮೇಳದ ನುರಿತ ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. **ಇದರ ಜೊತೆಯಲ್ಲಿ ಸ್ಥಳೀಯ ಸಂಘ ಸಂಸ್ಥೆಗಳ ಎಲ್ಲ ಪದಾಧಿಕಾರಿಗಳ ಜೊತೆಗೂಡಿ ಆಗಸ್ಟ್ 26, 27ರಂದು ಸ್ಥಳೀಯ ಸಂಘ ಸಂಸ್ಥೆಗಳ ಕಲಾವಿದರಿಂದ ನೃತ್ಯರೂಪಕ, ಪ್ರಹಸನ, ಹಾಡು, ಕಿರು ನಾಟಕಗಳು ಮುಂತಾದ ಪ್ರಕಾರಗಳನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮ ಎರಡು ದಿನಗಳ ಕಾಲ ನಡೆಯಲಿವೆ.** ಈಗಾಗಲೇ ಸುಮಾರು 17 ಸಂಘ ಸಂಸ್ಥೆಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಆಸಕ್ತರಾಗಿ ಮುಂದೆ ಬಂದಿದ್ದಾರೆ. ಭಾಗಿಯಾಗುವ ಕಲಾವಿದರಿಗೆ ಅನುಕೂಲವಾಗಲು ಸಂಘ ಸಂಸ್ಥೆಗಳಿಗೆ ಧನ ಸಹಾಯವನ್ನೂ ಸಹ ನೀಡುತ್ತಿದ್ದೇವೆ. ಸಂಘದ ಈ ಎಲ್ಲಾ ಕೆಲಸಗಳು, ಕಾರ್ಯಕ್ರಮಗಳು ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ನಡೆಯುತ್ತಿವೆ. ಬರುವ ಸೆಪ್ಟೆಂಬರ್ ತಿಂಗಳು ನಡೆಯುವ ನಾಟಕೋತ್ಸವದಲ್ಲಿ ನಾಡಿನ ಪ್ರಸಿದ್ಧ ಕಲಾ ಸಂಸ್ಥೆಗಳಿಂದ 5 ನಾಟಕಗಳ ಪ್ರದರ್ಶನ ಮತ್ತು ಅಹೋರಾತ್ರಿ ಕುರುಕ್ಷೇತ್ರ ನಾಟಕವನ್ನು ಸಹ ಆಯೋಜನೆ ಮಾಡುತ್ತಿದ್ದೇವೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಶಿವರಾಜ್ ಎಸ್. ತಂಗಡಗಿ ಭಾಗವಹಿಸಲಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಹೊಸ ಕಟ್ಟಡ ಉದ್ಘಾಟನೆಗೊಂಡು ಸರಿಸುಮಾರು 18 ವರ್ಷಗಳು ಕಳೆದಿವೆ. ಇದಕ್ಕೆ ಕೆಲವೊಂದು ಕಟ್ಟಡದ ನಿರ್ವಹಣೆ ಕೆಲಸಗಳು ಅವಶ್ಯಕತೆ ಇದ್ದು ಆ ಕೆಲಸಗಳೂ ಸಹಾ ಈ ಸಮುಚ್ಚಯದಲ್ಲಿ ನಡೆಯುತ್ತಿವೆ. ಜುಲೈ 23 ರಂದು ಆಯೋಜಿಸಿದ ಆರೋಗ್ಯ ಮೇಳ ಯಶಸ್ವಿಯಾಗಿ ಮೂಡಿ ಬಂದಿದ್ದು ಏಮ್ಸ್ ಸಹಯೋಗದಲ್ಲಿ ರಕ್ತದಾನ ಶಿಬಿರವು ಸಹ ನಡೆಯಿತು. 37 ಜನ ದೆಹಲಿ ಕನ್ನಡಿಗರು ರಕ್ತದಾನವನ್ನು ಸಹ ಮಾಡಿ ಧನ್ಯರಾಗಿದ್ದಾರೆ. ವಿವಿಧ ವೈದ್ಯಕೀಯ ವಿಭಾಗಗಳ ನುರಿತ ಹಿರಿಯ ಕನ್ನಡಿಗ ವೈದ್ಯರು ಆರೋಗ್ಯ ಮೇಳದಲ್ಲಿ ಬಂದು ನಮ್ಮ ಸಂಘದ ಸದಸ್ಯರುಗಳಿಗೆ ಉಚಿತವಾಗಿ ವೈದ್ಯಕೀಯ ಪರಾಮರ್ಶೆ ಮಾಡಿ ಸೂಕ್ತ ಆರೋಗ್ಯ ಸಲಹೆಗಳನ್ನು ನೀಡಿದ್ದಾರೆ. ಸಂಘದ ವತಿಯಿಂದ ಭಾಗವಹಿಸಿದ ಸದಸ್ಯರು ಮತ್ತು ಕುಟುಂಬದವರಿಗೆ ಉಚಿತವಾಗಿ ರಕ್ತಪರೀಕ್ಷೆಗಳನ್ನು ಸಹ ಮಾಡಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲಾ ವೈದ್ಯರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅನಂತಾನಂತ ಧನ್ಯವಾದಗಳು.

ಆತ್ಮೀಯರೇ, ದೇಶದ ಪ್ರಥಮ ವಚನ ಸಂಸ್ಕೃತಿ ಅಭಿಯಾನದಲ್ಲಿ ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾ ಸಂಘದ 30 ಕಲಾವಿದರು ನಮ್ಮ ದೇಶವನ್ನು ಪೂರ್ತಿ ಸುತ್ತಿ ಬಸವಣ್ಣನವರ ವಚನಗಳನ್ನು ಕನ್ನಡೇತರರಿಗೆ ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಸಂಘದಲ್ಲಿಯೂ ಸಹ ಇಂತಹ ಒಂದು ಕಾರ್ಯಕ್ರಮವನ್ನು ಕಳೆದ ಜುಲೈ 30ನೇ ತಾರೀಕು ಸಾಣೇಹಳ್ಳಿಯ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಪಟ್ಟಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಮೂಡಿ ಬಂದು ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿದೆ. ಈ ಕಾರ್ಯಕ್ರಮವನ್ನು ನಮಗೆ ನೀಡಿದ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳಿಗೆ ಗೌರವಪೂರ್ವಕ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯಮಂತ್ರಿಗಳಾದ ಶ್ರೀ ಎ. ನಾರಾಯಣ ಸ್ವಾಮಿಯವರು ಸಹ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಕಲಾವಿದರಿಗೆ ಪ್ರೋತ್ಸಾಹ ನೀಡಿದ್ದಾರೆ ಅವರಿಗೂ ನಮ್ಮ ಸಂಘದ ಪರವಾಗಿ ಧನ್ಯವಾದಗಳು

ಬಂಧುಗಳೇ, ವಿಶೇಷವಾಗಿ ಸದಸ್ಯರಿಗೆ ಯಾವ ರೀತಿ ಅನುಕೂಲವಾಗಬಹುದು, ಯಾವ ರೀತಿ ಸದಸ್ಯರಿಗೆ ಪ್ರಯೋಜನ ಸಿಗಬೇಕು, ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಾಗದೆ ಸದಸ್ಯರುಗಳ ಮಕ್ಕಳ ಬಗ್ಗೆ ಗಮನದಲ್ಲಿಟ್ಟುಕೊಂಡು ನಮ್ಮ ಕಾರ್ಯಕಾಲ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ಕಲಿಕಾ ಕಾರ್ಯಕ್ರಮ ಪ್ರಾರಂಭವಾಗಿದ್ದು ಅತೀ ಹೆಚ್ಚು ಕನ್ನಡ ಮಕ್ಕಳು ಕನ್ನಡವನ್ನು ಕಲಿಯುತ್ತಿದ್ದಾರೆ ಇದು ನಮಗೆಲ್ಲ ಹರ್ಷ ತಂದಿದೆ. ಜೊತೆಗೆ ಹಿಂದೂಸ್ತಾನಿ ಗಾಯನ, ಶಾಸ್ತ್ರೀಯ ನೃತ್ಯ ಮತ್ತು ಕಥಕ್ ಮುಂತಾದ ನೃತ್ಯ ಪ್ರಕಾರಗಳನ್ನು ಸಹ ನಮ್ಮ ಸದಸ್ಯರ ಮಕ್ಕಳಿಗೆ ಉಚಿತವಾಗಿ ಕಲಿಸುವ ಕಾರ್ಯಾಗಾರ ದೆಹಲಿ ಕರ್ನಾಟಕ ಸಂಘದಲ್ಲಿ ನಿರಂತರವಾಗಿ ನಡೆಯುತ್ತಿದೆ. ಅತೀ ಹೆಚ್ಚು ಕನ್ನಡಿಗರು ಇರುವ ಲಾಜಪತ್ ನಗರ, ಆರ್.ಕೆ. ಪುರಂ ಮುಂತಾದ ದೆಹಲಿಯ ಇತರ ಜಾಗಗಳಲ್ಲಿ ಕಲಿಕೆ ಕೇಂದ್ರ ಪ್ರಾರಂಭ ಮಾಡಿ ಕನ್ನಡವನ್ನು ಕಲಿಸುವ ಕಾರ್ಯಕ್ರಮವೂ ಸಹ ನಡೆಯುತ್ತಿದೆ. ಇದೇ ತಿಂಗಳು ಆಗಸ್ಟ್ 6 ರಂದು ನಮ್ಮ ಸದಸ್ಯರ ಮಕ್ಕಳಿಗೆ ಒಳಾಂಗಣ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ಮುಂದಿನ ದಿನಗಳಲ್ಲಿ ಈ ವರ್ಷದ ವಾಲಿಬಾಲ್, ಥ್ರೋಬಾಲ್, ಕಬಡ್ಡಿ ಮುಂತಾದ ಹೊರಾಂಗಣ ಆಟೋಟ ಸ್ಪರ್ಧೆಗಳು ಹಾಗೂ ಕ್ರಿಕೆಟ್ ಪಂದ್ಯಾವಳಿಯನ್ನು ಸಹಾ ಆಯೋಜನೆ ಮಾಡುತ್ತಿದ್ದೇವೆ. ಈ ಎಲ್ಲಾ ಸ್ಪರ್ಧೆಗಳ ಪ್ರಯೋಜನವನ್ನು ನಮ್ಮ ಸಂಘದ ಪ್ರತಿಯೊಬ್ಬ ಸದಸ್ಯರುಗಳು ಪಡೆದುಕೊಳ್ಳಬೇಕೆಂದು ಕೋರಿಕೊಳ್ಳುತ್ತೇನೆ.

ಆತ್ಮೀಯರೇ, ಮೊಟ್ಟ ಮೊದಲಿಗೆ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಸಹಯೋಗದಲ್ಲಿ ದೆಹಲಿ ಎನ್.ಸಿ.ಆರ್ ನ ಕನ್ನಡಿಗರ ಮಕ್ಕಳಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಕಳೆದ ಜುಲೈ 16ರಂದು ಸಂಘದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಸಂಗೀತ, ನೃತ್ಯ, ಅಭಿನಯ ಮತ್ತು ಚಿತ್ರಕಲೆಗಳಲ್ಲಿ ಮಕ್ಕಳಿಗೆ ತರಬೇತಿ, ಇನ್ನು ಅನೇಕ ಕನ್ನಡ ಸಾಹಿತ್ಯದ ಕೆಲಸಗಳು ನಡೆದವು, ಇದಕ್ಕೆ ಸಹಕಾರವಾಗಿ ನಿಂತಂತಹ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ, ಪರಿಷತ್ತಿನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಿಗೆ ಧನ್ಯವಾದಗಳು. ಜೊತೆಗೆ ಈ ಮಕ್ಕಳಿಗೆ ಪ್ರೇರಣೆ ತುಂಬಲು ಬಂದಿದ್ದಂತಹ ಮುಖ್ಯ ಅತಿಥಿಗಳಾದ ಹಿರಿಯ ಪೊಲೀಸ್ ಅಧಿಕಾರಿ ಮಾನ್ಯ ಶ್ರೀ ಎನ್. ರಾಜಶೇಖರ್ ಐಪಿಎಸ್ ಅವರಿಗೆ ಹಾಗು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾದ ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿಗಳಾದ, ಐಆರ್‌ಎಸ್ ಅಧಿಕಾರಿ ಶ್ರೀ ಅಮರೇಶ್ ಪಾಟೀಲ್ ಅವರಿಗೂ ಧನ್ಯವಾದಗಳು ತಿಳಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಿ.ಎಂ. ನಾಗರಾಜ**
ಅಧ್ಯಕ್ಷರು

## ಮುನ್ನೋಟ

ಆತ್ಮೀಯರೇ,

ನಿಮ್ಮೀ ಸಂಘ ನಮ್ಮಗಳ ಸಾಂಸ್ಕೃತಿಕ ಚಟುವಟಿಕೆಗಳ ಗೂಡಾಗಿ, ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುತ್ತಿದೆ. ಕಳೆದ ತಿಂಗಳಲ್ಲಿ ಮಕ್ಕಳಿಗಾಗಿ ನಡೆದ ತರಬೇತಿ ಶಿಬಿರ, ಕಾರ್ಯಾಗಾರ ಕಾರ್ಯಕ್ರಮ ನನಗೆ ತುಂಬಾ ಸಂತಸ ತಂದ ವಿಷಯವಾಗಿದೆ. ಏಕೆಂದರೆ ಮಕ್ಕಳು-ಯುವಕರು ಸಂಘದ ಚಟುವಟಿಕೆಗಳಿಂದ ದೂರವಿದ್ದ ಸಂದರ್ಭದಲ್ಲಿ ಮುಂದಿನ ಪೀಳಿಗೆಯ ಸುಮಾರು 100 ಮಕ್ಕಳು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ಸಮಿತಿ ಹಾಗೂ ನಮ್ಮ ಸಂಘದ ಕನ್ನಡ ಕಲಿಕಾ ಕೇಂದ್ರ, ಸಂಗೀತ, ನೃತ್ಯ ತರಬೇತಿ ಕಾರ್ಯಕ್ರಮಗಳ ತರಬೇತುದಾರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನೂ ನಮ್ಮ ಕಾರ್ಯಕಾರಿ ಸಮಿತಿಯ ಕಾಲಾವಧಿಯ ಕೊನೆಯ ಘಟ್ಟದಲ್ಲಿರುವ ಸಮಿತಿ. ಮತ್ತಷ್ಟು ಉತ್ತಮ ಕಾರ್ಯಗಳನ್ನು ನೆರವೇರಿಸುವಲ್ಲಿ ಕಾರ್ಯ ಪ್ರವೃತ್ತವಾಗಿದೆ. ಅಧ್ಯಕ್ಷರ ಕನಸಾದ ಜಮೀನು ಖರೀದಿಗೆ ಕಾರ್ಯಕಾರಿ ಸಮಿತಿ ಇತ್ತೀಚೆಗೆ ಒಪ್ಪಿದ್ದು ಮುಂದಿನ ಪ್ರಕ್ರಿಯೆ ನಡೆಯಬೇಕಿದೆ.

ಮುಂಬರುವ ದಿನಗಳಲ್ಲಿ ಸಂಘದ ಸದಸ್ಯರಿಗಾಗಿ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಿದ್ದು ಎಲ್ಲರೂ ಉತ್ಸಾಹದಿಂದ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ವಿನಂತಿ.

***ಆರ್. ರೇಣುಕುಮಾರ್***
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ
## ಮುಂಬರುವ ಕಾರ್ಯಕ್ರಮಗಳು

**6** **ಆಗಸ್ಟ್ 2023** **ಭಾನುವಾರ**
**ಬೆಳಿಗ್ಗೆ 8.30 ಗಂಟೆಗೆ**

ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು-2023-24
ಸಾಂಸ್ಕೃತಿಕ ಹಾಗೂ ಒಳಾಂಗಣ ಕ್ರೀಡಾ ಸ್ಪರ್ಧೆಗಳು
ಸ್ಥಳ : ಸಂಘದ ಆವರಣ

**15** **ಆಗಸ್ಟ್ 2023** **ಮಂಗಳವಾರ**
**ಬೆಳಿಗ್ಗೆ 8.30 ಗಂಟೆಗೆ**

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ **"ಧ್ವಜಾರೋಹಣ"**

**19** **ಆಗಸ್ಟ್ 2023** **ಶನಿವಾರ**
**ರಾತ್ರಿ 9.00 ಗಂಟೆಯಿಂದ**

ಶ್ರೀ ಕೋದಂಡರಾಮ ಕೃಪಾ ಪೋಷಿತ ಯಕ್ಷಗಾನ ಮಂಡಳಿ, ಹನುಮಗಿರಿ ಇವರಿಂದ **ಆಹೋರಾತ್ರಿ, ಯಕ್ಷಗಾನ- 'ಶುಕ್ರನಂದನೆ'**

**26,27** **ಆಗಸ್ಟ್ 2023** **ಶನಿವಾರ ಮತ್ತು ಭಾನುವಾರ**

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳಿಂದ ವಿವಿಧ **ಸಾಂಸ್ಕೃತಿಕ ಕಾರ್ಯಕ್ರಮಗಳು**

**27** **ಆಗಸ್ಟ್ 2023** **ಭಾನುವಾರ**

ದೆಹಲಿ ಕರ್ನಾಟಕ ಸಂಘದಲ್ಲಿ **"ದಾಸೋಹ"** ಕಾರ್ಯಕ್ರಮ ಉದ್ಘಾಟನೆ

## ಕಾರ್ಯಕಾರಿ ಸಮಿತಿಗೆ ಶ್ರೀ ಎಸ್. ಕೃಷ್ಣ ಭಟ್



**ಶ್ರೀ ಎಸ್. ಕೃಷ್ಣ ಭಟ್**

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ಶ್ರೀ ಎಸ್. ಕೃಷ್ಣ ಭಟ್ ಅವರನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನಾಮಕರಣ ಸದಸ್ಯರನ್ನಾಗಿ ಸೇರ್ಪಡೆಗೊಳಿಸಿದ್ದಾರೆ. ಶ್ರೀ ಸರವು ಕೃಷ್ಣ ಭಟ್ ಅವರಿಗೆ ಹಾರ್ದಿಕ ಅಭಿನಂದನೆಗಳು.

ಮಾನ್ಯರೇ,

2022-23ರ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12 ನೇ ತರಗತಿಯಲ್ಲಿ ಶೇ 90 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಶೇ 90 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸಂಘದ ಸದಸ್ಯರ ಮಕ್ಕಳ ಅಂಕಪಟ್ಟಿ, ಭಾವಚಿತ್ರ ಮುಂತಾದ ವಿವರವನ್ನು ದಿನಾಂಕ 25.08.2023 ಕ್ಕಿಂತ ಮೊದಲು ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಸಿ.ಎಂ. ನಾಗರಾಜ
ಅಧ್ಯಕ್ಷರು

ಆರ್. ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘದಲ್ಲಿ ಅತ್ಯಂತ ಯಶಸ್ವಿಯಾಗಿ ಆಯೋಜನೆಗೊಂಡ


# ಆರೋಗ್ಯ ಮೇಳ - ರಕ್ತದಾನ ಶಿಬಿರ



ದೆಹಲಿ ಕರ್ನಾಟಕ ಸಂಘವು ತನ್ನ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ದೆಹಲಿ, ಎನ್.ಸಿ.ಆರ್. ನಲ್ಲಿರುವ ಸಂಘದ ಸದಸ್ಯರುಗಳಿಗೆ, ಹೊರನಾಡ ಕನ್ನಡಿಗರಿಗೆ ಅನುಕೂಲವಾಗುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇವುಗಳಲ್ಲಿ ಆಹಾರ ಮೇಳ, ಆರೋಗ್ಯ ಮೇಳ, ಪಿಕ್‌ನಿಕ್, ಒಳಾಂಗಣ, ಹೊರಾಂಗಣ ಆಟೋಟ ಸ್ಪರ್ಧೆಗಳು, ಕ್ರಿಕೆಟ್ ಪಂದ್ಯಾವಳಿ, ಉದ್ಯೋಗ ಮೇಳ, ಮಕ್ಕಳಿಗೆ ತರಬೇತಿ ಕಾರ್ಯಾಗಾರ, ಉನ್ನತ ಶಿಕ್ಷಣದ ಬಗ್ಗೆ ತಜ್ಞರೊಂದಿಗೆ ಸಮಾಲೋಚನೆ, ಕನ್ನಡ ಕಲಿಕಾ ಕೇಂದ್ರ, ನೃತ್ಯ ಮತ್ತು ಸಂಗೀತ ತರಬೇತಿ ಶಿಬಿರ ಮುಂತಾದವುಗಳು ಪ್ರಮುಖವಾದವು. ಪ್ರತಿ ವರ್ಷದಂತೆ ಈ ವರ್ಷವೂ ಸಹ 'ಆರೋಗ್ಯ ಮೇಳ'ವನ್ನು ಆರ್.ಕೆ. ಪುರಂನ ಸರ್.ಎಂ. ವಿಶ್ವೇಶ್ವರಯ್ಯ ಮೋತಿಭಾಗ್ ಮೆಟ್ರೋ ಸ್ಟೇಷನ್ ಬಳಿ ಇರುವ ಸಂಘದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಜುಲೈ 23 ರಂದು ಆಯೋಜಿಸಲಾಗಿತ್ತು. ದೆಹಲಿಯಲ್ಲಿ ನೆಲಸಿರುವ ವಿವಿಧ ವೈದ್ಯಕೀಯ ವಿಭಾಗಗಳ ತಜ್ಞರಾದ ಸುಮಾರು 16 ಕನ್ನಡಿಗ ವೈದ್ಯರು ಭಾಗವಹಿಸಿ ದೆಹಲಿ ಕನ್ನಡಿಗರಿಗೆ ಸೂಕ್ತ ವೈದ್ಯಕೀಯ ಪರಾಮರ್ಶೆ ಮತ್ತು ಸಲಹೆಗಳನ್ನು ನೀಡಿದ್ದು ಈ ಬಾರಿಯ ಆರೋಗ್ಯ ಮೇಳದ ವಿಶೇಷತೆಯಾಗಿತ್ತು. ಜೊತೆಗೆ ದೆಹಲಿಯ ವ್ಯಾಕ್ಸ್‌ಲ್ಯಾಬ್‌ನವರ ಸಹಯೋಗದಲ್ಲಿ ಸದಸ್ಯರಿಗಾಗಿ ವಿವಿಧ ರಕ್ತ ಪರೀಕ್ಷೆ ಮತ್ತು ನವದೆಹಲಿಯ ಏಮ್ಸ್‌ನ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಜುಲೈ 23ರ ಬೆಳಿಗ್ಗೆ 9 ಗಂಟೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ವಂದನ ಗುರ್ನಾನಿ ಐ.ಎ.ಎಸ್. ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಅವರು ಹಿರಿಯ ದೆಹಲಿ ಕನ್ನಡಿಗ, ಆಯುರ್ವೇದ ತಜ್ಞರಾದ ಡಾ. ಭೀಮ ಭಟ್ಟ ಮತ್ತು ಭಾಗವಹಿಸಿದ ಇತರ ವೈದ್ಯಕೀಯ ವಿಭಾಗಗಳ ನುರಿತ ವೈದ್ಯರುಗಳ ಸಮ್ಮುಖದಲ್ಲಿ ಆರೋಗ್ಯ ಮೇಳವನ್ನು ದೀಪ ಬೆಳಗಿಸುವ ಮೂಲಕ ವಿದ್ಯುಕ್ತವಾಗಿ ಉದ್ಘಾಟಿಸಿದರು. ಈ ಸಂದರ್ಭ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

ಶ್ರೀಮತಿ ವಂದನ ಗುರ್ನಾನಿಯವರು ಹಾಗೂ ಡಾ. ಭೀಮ ಭಟ್ಟರವರು ಸ್ತೋತ್ರ ಪಠನ ಮಾಡುವ ಮೂಲಕ ಸಾಂಕೇತಿಕವಾಗಿ ಉದ್ಘಾಟನಾ ಮಾತುಗಳನ್ನಾಡಿದರು. ಇಂತಹ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಆಗಮಿಸಿದ್ದ ಮುಖ್ಯ ಅತಿಥಿಗಳನ್ನು, ಎಲ್ಲಾ ಕನ್ನಡಿಗ ವೈದ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಈ ವರ್ಷ ಹಿರಿಯರಾದ ಡಾ. ಭೀಮ ಭಟ್ಟ ಅವರೂ ಸೇರಿದಂತೆ 16 ಕ್ಕೂ ಹೆಚ್ಚು ವೈದ್ಯರು ಈ ಆರೋಗ್ಯ ಮೇಳದಲ್ಲಿ ಭಾಗವಹಿಸಿರುವುದು ತಮಗೆ ಖುಷಿ ತಂದಿದೆ. ರಕ್ತದಾನ ಶಿಬಿರವನ್ನೂ ಸಹ AIIMS ಸಹಯೋಗದಲ್ಲಿ ಸಂಘದಲ್ಲಿ ಆಯೋಜಿಸಲಾಗಿದ್ದು ಸದಸ್ಯರಿಗೆ ಉಚಿತ ಬ್ಲಡ್ ಶುಗರ್, ಕೊಲೇಸ್ಟ್ರಾಲ್, ಥೈರಾಯಿಡ್ ಮುಂತಾದ ರಕ್ತ ತಪಾಸಣೆಯನ್ನು ವ್ಯಾಕ್ಸ್ ಲ್ಯಾಬ್‌ರವರ ಸಹಯೋಗದಲ್ಲಿ ಏರ್ಪಡಿಸಲಾಗಿದೆ. ಇದರ ಸಂಪೂರ್ಣ ಪ್ರಯೋಜನವನ್ನು ನಮ್ಮ ಸಂಘದ ಸದಸ್ಯರು, ಅವರ ಕುಟುಂಬದವರು, ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.



ಆಗಮಿಸಿದ್ದ ಎಲ್ಲರಿಗೂ, ಧನ್ಯವಾದಗಳನ್ನು ಅರ್ಪಿಸುತ್ತಾ ವಿಶೇಷವಾಗಿ ದೆಹಲಿ ಕನ್ನಡಿಗರಿಗಾಗಿ ತಮ್ಮ ಅಮೂಲ್ಯ ಸಮಯ ನೀಡುತ್ತಿರುವ ವೈದ್ಯಕೀಯ ವಿಭಾಗಗಳ ತಜ್ಞರಿಗೆ ವೈದ್ಯೋ ನಾರಾಯಣೋ ಹರಿ: ಎಂದು ಹೇಳಿದರು.

**ಈ ಆರೋಗ್ಯ ಮೇಳದಲ್ಲಿ ಭಾಗವಹಿಸಿ ದೆಹಲಿ ಕನ್ನಡಿಗರಿಗೆ ಸೂಕ್ತ ವೈದ್ಯಕೀಯ ಸಲಹೆ ನೀಡಿದ ಕನ್ನಡಿಗ ವೈದ್ಯರು:**

ಹಿರಿಯ ಆಯರ್ವೇದ ತಜ್ಞ ಡಾ. ಭೀಮ ಭಟ್ಟ, ವೈದ್ಯಕೀಯ ನಿರ್ದೇಶಕರು, ಮೇದಾಂತ ಮೆಡಿಸಿಟಿ, ಗುರುಗಾಂವ್, ಹೃದಯ ತಜ್ಞ ಡಾ. ಪರ್ವತಗೌಡ ಸಿ., ಡಾ. ರಾಮಮನೋಹರ ಲೋಹಿಯಾ ಆಸ್ಪತ್ರೆ, ನವದೆಹಲಿ, ಆಯುರ್ವೇದ ತಜ್ಞ ಡಾ. ಅಶೋಕ್ ಎಂ.ಈಟಿ, , ಜಂಟಿ ನಿರ್ದೇಶಕರು, ಸಿ.ಜಿ.ಎಚ್.ಎಸ್, ಆಯುಷ್ ವಿಭಾಗ ನವದೆಹಲಿ ಮತ್ತು ಆಯುರ್ವೇದ ತಜ್ಞೆ ಡಾ. ರೂಪಶ್ರೀ, ಕ್ಯಾನ್ಸರ್ ಸ್ಪೆಶಲಿಸ್ಟ್ ಡಾ. ನಿರಂಜನ್ ನಾಯ್ಕ್, ನಿರ್ದೇಶಕರು, ಸರ್ಜಿಕಲ್ ಒಂಕಾಲಜಿ ಅಂಡ್ ರೋಬೊಟ್ಟಿಕ್ ಸರ್ಜರಿ, ಫೋರ್ಟಿಸ್ ಆಸ್ಪತ್ರೆ (FMRI), ಗುರುಗ್ರಾಮ, ಲಿವರ್ ಮತ್ತು ಟ್ರಾನ್ಸ್‌ಪ್ಲಾಂಟ್ ಸರ್ಜರಿ ಸ್ಪೆಶಲಿಸ್ಟ್ ಡಾ. ಜಗದೀಶ್ ಕೃಷ್ಣಮೂರ್ತಿ, ಕನ್ಸಲ್ಟೆಂಟ್ ಸರ್ಜನ್, ಮ್ಯಾಕ್ಸ್ ಆಸ್ಪತ್ರೆ, ಸಾಕೆತ್, ನವದೆಹಲಿ, ಬೆನ್ನುಮೂಳೆ ತಜ್ಞರು ಡಾ. ಗುರುರಾಜ ಸಂಗೊಂದಿಮಠ, ಮತ್ತು ಮೂಳೆ ತಜ್ಞ ಡಾ. ನಿಶಾಂತ್, ಡಾ. ಹೊನ್ನಮ್ಮ, ಮುಖ್ಯ ವೈದ್ಯಾಧಿಕಾರಿ (CMO), ಸಿಜಿಎಚ್ಎಸ್, ಡಾ. ವೆಂಕಟೇಶ್, ಜನರಲ್ ಫಿಸಿಷಿಯನ್, ವೈದ್ಯಾಧಿಕಾರಿ, ಎಂಸಿಡಿ ನವದೆಹಲಿ, ರೇಡಿಯೋಲಾಜಿಸ್ಟ್ ಡಾ. ಜೈಶಂಕರ್, ಪಂಚಕರ್ಮ ಸ್ಪೆಶಲಿಷ್ಟ್ ಡಾ. ಸಚಿತ್ ಶೆಟ್ಟಿ, ಜನರಲ್ ಫಿಸಿಷಿಯನ್ ಡಾ. ಉಮಾ ಕೆ., ಗೈನಾಕಾಲಾಜಿಸ್ಟ್ ಡಾ. ತ್ರಿವೇಣಿ, ಏಮ್ಸ್, ನವದೆಹಲಿ ನೇತ್ರ ತಜ್ಞೆ ಡಾ. ಅನುಪ್ರಸಾದ್, ಜೊತೆಗೆ ಶ್ರೀ ಜಗದೀಶ್ ನಾಯ್ಕ್, ಡಾ. ಅಂಜಲಿ, ಶ್ರೀಮತಿ ಸಾವಿತ್ರಿ, ಶ್ರೀ ವೆಂಕಟೇಶ್ ನಾಯ್ಕ್ ಮತ್ತು ಶ್ರೀ ಮಂಜುನಾಥ ಅವರು ಯೋಗ, ಫಿಸಿಯೋ ಥೆರಪಿ ಮತ್ತು ನ್ಯಾಚುರೋಪತಿ ವಿಭಾಗಗಳಲ್ಲಿ ಸೂಕ್ತ ಸಲಹೆ ನೀಡಿದರು.

ಏಮ್ಸ್ ಸಹಯೋಗದೊಂದಿಗೆ ಏರ್ಪಡಿಸಲಾದ ರಕ್ತದಾನ ಶಿಬಿರದಲ್ಲಿ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರೂ ಸೇರಿದಂತೆ ಸುಮಾರು 37 ದೆಹಲಿ ಕನ್ನಡಿಗರು, ಮಹಿಳೆಯರು ದಾನಗಳಲ್ಲೇ ಶ್ರೇಷ್ಠ ದಾನವಾದ ರಕ್ತದಾನವನ್ನು ಮಾಡಿ ಧನ್ಯರಾದರು.










ನವದೆಹಲಿಯ ಮ್ಯಾಕ್ಸ್ ಲ್ಯಾಬ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಕ್ತ ಪರೀಕ್ಷೆ ಶಿಬಿರದಲ್ಲಿ ಸುಮಾರು 200ಕ್ಕೂ ಹೆಚ್ಚು ದೆಹಲಿ ಕನ್ನಡಿಗರು, ಸಂಘದ ಸದಸ್ಯರು ಮತ್ತು ಕುಟುಂಬದವರು ಪಾಲ್ಗೊಂಡಿದ್ದರು ಮತ್ತು ತಜ್ಞ ವೈದ್ಯರೊಂದಿಗೆ ಪರಾಮರ್ಶೆ ಮಾಡಿಕೊಂಡು ಸೂಕ್ತ ವೈದ್ಯಕೀಯ ಸಲಹೆಗಳನ್ನು ಪಡೆದುಕೊಂಡರು.

ಆರೋಗ್ಯ ಮೇಳದ ಕೊನೆಯ ಭಾಗದಲ್ಲಿ, ಸಂಘದ ಈ ಅಭಿಯಾನದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಎಲ್ಲಾ ತಜ್ಞ ವೈದ್ಯರುಗಳಿಗೆ ರಕ್ತದಾನ ಶಿಬಿರದ ಏಮ್ಸ್ ತಂಡದ ಪರವಾಗಿ ಮುಖ್ಯಸ್ಥೆ ಡಾ. ಅಂಜು, ಮಾಕ್ಸ್‌ಲ್ಯಾಬ್ ಶ್ರೀ ಸುಮಿತ್ ಅವರಿಗೆ, ಯೋಗ ಮತ್ತು ಫಿಸಿಯೋಥೆರಪಿ ತಂಡ ಮತ್ತು ಸತ್ವ ಸ್ಕೂಲ್ ಆಫ್ ಯೋಗದ ಮುಖ್ಯಸ್ಥ ಹಾಗು ಸಂಘದ ಆಜೀವ ಸದಸ್ಯ ಶ್ರೀ ಜಗದೀಶ್ ನಾಯ್ಕ್ ಅವರಿಗೆ,



# 'ರಕ್ತದಾನ ಮಹಾದಾನ'

**ದೆಹಲಿ ಕರ್ನಾಟಕ ಸಂಘದಲ್ಲಿ ನವದೆಹಲಿಯ ಏಮ್ಸ್ ಸಹಯೋಗದಲ್ಲಿ ದಿ. 23.07.2023 ರಂದು ಏರ್ಪಡಿಸಿದ ಆರೋಗ್ಯ ಮೇಳ-ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ಹೆಮ್ಮೆಯ ದೆಹಲಿ ಕನ್ನಡಿಗರು**

| ಕ್ರ.ಸಂಖ್ಯೆ | ಹೆಸರು | ವಿವರ |
|---|---|---|
| 1 | ಶ್ರೀ ಸಿ.ಎಂ. ನಾಗರಾಜ | ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ |
| 2 | ಶ್ರೀ ಎನ್.ಆರ್. ಶ್ರೀನಾಥ | ಅಧ್ಯಕ್ಷರು, ಜನಕಪುರಿ ಕನ್ನಡ ಕೂಟ |
| 3 | ಡಾ. ಸಚಿತ್ ಬಿ. ಶೆಟ್ಟಿ | ಪಂಚಕರ್ಮ ವಿಶೇಷಜ್ಞ, ಆಜೀವ ಸದಸ್ಯರು, ದೆ.ಕ.ಸಂ. |
| 4 | ಶ್ರೀ ಮಿಥೇಶ್ ಶೆಟ್ಟಿ | ಆಜೀವ ಸದಸ್ಯರು, ದೆ.ಕ.ಸಂ. |
| 5 | ಶ್ರೀ ಎಸ್. ನರಸಿಂಹಮೂರ್ತಿ | ಆಜೀವ ಸದಸ್ಯರು, ದೆ.ಕ.ಸಂ. |
| 6 | ಶ್ರೀಮತಿ ಮಾಲಿನಿ ಪ್ರಹ್ಲಾದ್ | ದೆ.ಕ.ಸಂ. ಕಾರ್ಯಕಾರಿ ಸಮಿತಿ ಸದಸ್ಯೆ |
| 7 | ಶ್ರೀ ಶಿವಪ್ಪ ಎಂ | ದೆ.ಕ.ಸಂ. ಕಾರ್ಯಕಾರಿ ಸಮಿತಿ ಸದಸ್ಯ |
| 8 | ಶ್ರೀಮತಿ ಅಶ್ವಿನಿ ಬಿ.ಎಸ್. | ದೆ.ಕ.ಸಂ. ಕಾರ್ಯಕಾರಿ ಸಮಿತಿ ಸದಸ್ಯೆ |
| 9 | ಶ್ರೀಮತಿ ರತ್ನ | ಕಾರ್ಯದರ್ಶಿ, ಕ.ರಾ.ಮ.ಸಾ.ಪ. ದೆಹಲಿ |
| 10 | ಶ್ರೀ ದೇವಯ್ಯ ಎಂ.ಇ. | ವ್ಯವಸ್ಥಾಪಕರು, ದೆ.ಕ.ಸಂ. |
| 11 | ಶ್ರೀ ಅಜಯ್ ಕುಮಾರ್ ಸಿಂಗ್ | ಎಲೆಕ್ಟ್ರೀಶಿಯನ್, ದೆ.ಕ.ಸಂ. |
| 12 | ಶ್ರೀ ಧನರಾಜು ಎನ್ | ಸಿಬ್ಬಂದಿ, ಕರ್ನಾಟಕ ಫುಡ್ ಸೆಂಟರ್ |
| 13 | ಶ್ರೀ ಶಬೀರ್ ಅಹಮದ್ | ಆಜೀವ ಸದಸ್ಯರು, ದೆ.ಕ.ಸಂ. |
| 14 | ಶ್ರೀ ಮನೋಜ್ ದಾಸ್ | ಸಿಬ್ಬಂದಿ, ಕರ್ನಾಟಕ ಫುಡ್ ಸೆಂಟರ್ |
| 15 | ಶ್ರೀ ಚಂದ್ರಶೇಖರ ಕೆ | ಆಜೀವ ಸದಸ್ಯರು, ದೆ.ಕ.ಸಂ. |
| 16 | ಶ್ರೀ ರಾಜೇಶ್ ಕುಮಾರ್ ದೋಲ್ | ಆಜೀವ ಸದಸ್ಯರು, ದೆ.ಕ.ಸಂ. |
| 17 | ಶ್ರೀ ಸಾಗರ್ ಮಲಿಕ್ | ಸಿಬ್ಬಂದಿ, ಕರ್ನಾಟಕ ಫುಡ್ ಸೆಂಟರ್ |
| 18 | ಶ್ರೀ ಅಮರ್ ಮಲಿಕ್ | ಸಿಬ್ಬಂದಿ, ಕರ್ನಾಟಕ ಫುಡ್ ಸೆಂಟರ್ |
| 19 | ಶ್ರೀ ರಾಜಕುಮಾರ್ | ಆಜೀವ ಸದಸ್ಯರು, ದೆ.ಕ.ಸಂ. |
| 20 | ಶ್ರೀ ಶಿವಾನಂದ ಪದೆಸುರ್ | ಆಜೀವ ಸದಸ್ಯರು, ದೆ.ಕ.ಸಂ. |
| 21 | ಶ್ರೀ ಸುಧೀರ್ ಕೆ.ಜೆ. | ಆಜೀವ ಸದಸ್ಯರು, ದೆ.ಕ.ಸಂ. |
| 22 | ಶ್ರೀಮತಿ ಪದ್ಮಾ ಗಂಗಾಧರ್ | ಆಜೀವ ಸದಸ್ಯರು, ದೆ.ಕ.ಸಂ. |
| 23 | ಶ್ರೀ ಎಸ್. ಚಂದ್ರಶೇಖರ್ | ದೆಹಲಿ ಕನ್ನಡಿಗ |
| 24 | ಕು. ಮಧು ಜಿ. | ದೆಹಲಿ ಕನ್ನಡತಿ |
| 25 | ಶ್ರೀ ಸತ್ಯನಾರಾಯಣ ಪಡಿ | ಆಜೀವ ಸದಸ್ಯರು, ದೆ.ಕ.ಸಂ. |
| 26 | ಶ್ರೀ ಚಂದ್ರಶೇಖರ ಎನ್.ಪಿ. | ಜಂಟಿ ನಿರ್ದೇಶಕರು, ಸಂಸದ ಭವನ |
| 27 | ಶ್ರೀ ಆನಂದ ಮುರಗೋಡ | ಆಜೀವ ಸದಸ್ಯರು, ದೆ.ಕ.ಸಂ. |
| 28 | ಶ್ರೀ ವೈಜನಾಥ್ ಗಿರೀಶ್ | ದೆಹಲಿ ಕನ್ನಡಿಗ |
| 29 | ಶ್ರೀ ಕಾರ್ತಿಕ್ ರೈ | ಆಜೀವ ಸದಸ್ಯರು, ದೆ.ಕ.ಸಂ. |
| 30 | ಶ್ರೀ ಸಂತೋಷ್ ಶೆಟ್ಟಿ | ಆಜೀವ ಸದಸ್ಯರು, ದೆ.ಕ.ಸಂ. |
| 31 | ಶ್ರೀ ಸಂತೋಷ್ ಆರ್ | ದೆಹಲಿ ಕನ್ನಡಿಗ |
| 32 | ಡಾ. ಸಾಯಿಪ್ರಶಾಂತಿ ಶೆಟ್ಟಿ | ಆಜೀವ ಸದಸ್ಯೆ, ದೆ.ಕ.ಸಂ. |
| 33 | ಶ್ರೀ ಮಂಜುನಾಥ್ ಎಚ್.ಕೆ. | ಆಜೀವ ಸದಸ್ಯರು, ದೆ.ಕ.ಸಂ. |
| 34 | ಶ್ರೀ ರಾಜೇಶ್ ಎಂ.ಇ | ದೆಹಲಿ ಕನ್ನಡಿಗ |
| 35 | ಶ್ರೀ ಮುಕೇಶ್ ಮಾಳವೀಯ | ಸಿಬ್ಬಂದಿ, ಕರ್ನಾಟಕ ಫುಡ್ ಸೆಂಟರ್ |
| 36 | ಶ್ರೀ ಸತೀಶ್ ಕುಮಾರ್ ಕೆ.ಎಸ್. | ದೆಹಲಿ ಕನ್ನಡಿಗ |
| 37 | ಶ್ರೀ ಯಲ್ಲಾಲಿಂಗ ಕೊಪ್ಪದ | ಅಭಿಮತ ಸಂಪಾದಕ ಮಂಡಳಿ ಸದಸ್ಯ, ದೆ.ಕ.ಸಂ. |

**ರಕ್ತದಾನ ಮಾಡಿದ ದಾನಿಗಳಿಗೆ ಕೃತಜ್ಞತೆಗಳು**



ನ್ಯಾಚುರೋಪತಿ ಸ್ಪೆಷಲಿಸ್ಟ್ ಡಾ. ಅಂಜಲಿ ಅವರಿಗೆ ಸಂಘದ ಪರವಾಗಿ ಶಾಲು ಹೊದಿಸಿ, ಸ್ಮರಣಿಕೆ ಮತ್ತು ಸ್ಮರಣ ಸಂಚಿಕೆ ನೀಡಿ ಗೌರವ ಸಮರ್ಪಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ, ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ, ಭಾನುವಾರದ ರಜಾ ದಿನದಂದು ನಮ್ಮ ಸಂಘಕ್ಕೆ ಆಗಮಿಸಿ, ನಮ್ಮ ಕನ್ನಡಿಗರಿಗೆ ವೈದ್ಯಕೀಯ ಪರಾಮರ್ಶೆ, ಹಾಗೂ ಸೂಕ್ತ ಆರೋಗ್ಯ ಸಲಹೆಗಳನ್ನು ನೀಡುವ ಮೂಲಕ ತಮ್ಮ ಅಮೂಲ್ಯ ಸಮಯ ನೀಡಿದ ಎಲ್ಲಾ ವೈದ್ಯರಿಗೆ ಹಾಗು ರಕ್ತ ಪರೀಕ್ಷೆ, ರಕ್ತದಾನ ಶಿಬಿರ ಮತ್ತು ಯೋಗ ಫಿಸಿಯೋಥೆರಪಿಯಲ್ಲಿ ಸಹಕರಿಸಿದ ತಂಡಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

ವೈದ್ಯರ ಪರವಾಗಿ ಮಾತನಾಡಿದ ಹಿರಿಯ ಕನ್ನಡಿಗ ಮತ್ತು ಆಯುರ್ವೇದ ತಜ್ಞ ಡಾ. ಭೀಮ ಭಟ್ಟ ಅವರು, ತಾವು ಕಳೆದ 38 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿ ತಿಂಗಳು ಉಚಿತವಾಗಿ ಇಲ್ಲಿನ ಕನ್ನಡಿಗರಿಗೆ ವೈದ್ಯಕೀಯ ಸಲಹೆಗಳನ್ನು ನೀಡುತ್ತಾ ಬಂದಿದ್ದು, ಇಂದಿನ ಆರೋಗ್ಯ ಮೇಳವು ಇಷ್ಟೊಂದು ವೈದ್ಯರು ಭಾಗವಹಿಸುವುದರೊಂದಿಗೆ ಅತ್ಯಂತ ಯಶಸ್ವಿಯಾಗಿರುವುದು ತಮಗೆ ಬಹಳ ಸಂತೋಷವಾಗಿದೆ, 'ಆರೋಗ್ಯವೇ ಭಾಗ್ಯ'ವೆಂಬ ಮಂತ್ರವನ್ನು ಎಲ್ಲರೂ ನೆನಪಿನಲ್ಲಿಡಬೇಕು, ದೆಹಲಿ ಎನ್.ಸಿ.ಆರ್.ನಲ್ಲಿ ಸುಮಾರು 15,000 ರಿಂದ 20000 ಕನ್ನಡಿಗರಿದ್ದು, ಅದರಲ್ಲಿ 5000 ಜನರು ಸಂಘದ ಸದಸ್ಯರಾಗಿದ್ದಾರೆ. ಇವರೆಲ್ಲರ ಅನುಕೂಲಕ್ಕಾಗಿ, ಪ್ರತಿ ತಿಂಗಳು ವಿವಿಧ ವಿಭಾಗಗಳಿಗೆ ಸಂಬಂಧಪಟ್ಟಂತೆ ವೈದ್ಯಕೀಯ ಉಪನ್ಯಾಸಗಳನ್ನು ಸಂಘವು ಏರ್ಪಡಿಸಬಹುದು, ಅಭಿಮತ ಮಾಸಪತ್ರಿಕೆಯಲ್ಲಿ ತಜ್ಞ ವೈದ್ಯರಿಂದ ವೈದ್ಯಕೀಯ ಲೇಖನಗಳನ್ನು ಪ್ರಕಟಿಸಬಹುದು ಮತ್ತು, ಸಂಘದಲ್ಲಿ ಯೋಗವನ್ನು ಪ್ರತಿವಾರ ನಡೆಸಬಹುದು ಎಂಬ ಸಲಹೆಗಳನ್ನು ನೀಡುತ್ತಾ ಇಂಥ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ, ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಮತ್ತು ಎಲ್ಲಾ ಪದಾಧಿಕಾರಿಗಳನ್ನು ಅಭಿನಂದಿಸುತ್ತೇನೆ ಎಂದರು.

ಇದೇ ಸಂದರ್ಭ, ಸೇವಾ ನಿವೃತ್ತಿ ತರುವಾಯ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಶಕುಂತಲಾ ನಾಯ್ಕ್ ಮತ್ತು ಶ್ರೀ ಸುಧಾಕರ್ ನಾಯ್ಕ್ ದಂಪತಿಗಳನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್ ರೇಣುಕುಮಾರ್ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು, ಅವರ ಕುಟುಂಬದವರು, ಹಲವಾರು ದೆಹಲಿ ಕನ್ನಡಿಗರು ಅತ್ಯಂತ ಉತ್ಸಾಹದಿಂದ ಆರೋಗ್ಯ ಮೇಳದಲ್ಲಿ ಪಾಲ್ಗೊಂಡು ಅದರ ಪ್ರಯೋಜನ ಪಡೆದುಕೊಂಡಿದ್ದು, ಸಂಘದ ಅಭಿಯಾನಗಳಲ್ಲಿ ಸಂಪನ್ನಗೊಂಡ ಮತ್ತೊಂದು ಯಶಸ್ವಿ ಕಾರ್ಯಕ್ರಮವಾಗಿದೆ.

***ಅಭಿಮತ ವರದಿ***

















# ಆಯುರ್ವೇದ ಪಂಚಕರ್ಮ ಚಿಕಿತ್ಸೆ






ಲೇಖಕರು : ಡಾ. ಭೀಮ ಭಟ್ಟ
ಎಂ.ಡಿ. (ಆಯು)
ವೈದ್ಯಕೀಯ ನಿರ್ದೇಶಕರು,
ಆಯುರ್ ವೈದ್ ಮೇದಾಂತ ಮೆಡಿಸಿಟಿ,
ಗುರುಗ್ರಾಮ ಹರಿಯಾಣ
ಮೊ : 9810113902


ಆಯುರ್ವೇದವು ದೇಹ, ಮನಸ್ಸು ಮತ್ತು ಆತ್ಮದೊಂದಿಗೆ ವ್ಯವಹರಿಸುವ ಪ್ರಾಚೀನ ಭಾರತೀಯ ಸಮಗ್ರ ವೈದ್ಯಕೀಯ ವಿಜ್ಞಾನವಾಗಿದೆ. ಇದು ಆರೋಗ್ಯದ ನಿರ್ವಹಣೆ ಮತ್ತು ಉತ್ತೇಜನೆ, ರೋಗಗಳ ತಡೆಗಟ್ಟುವಿಕೆ ಮತ್ತು ಗುಣಪಡಿಸುವ ಗುರಿಯನ್ನು ಹೊಂದಿದೆ. ಇದು ಪಂಚಮಹಾಭೂತ (ಆಕಾಶ, ವಾಯು, ಅಗ್ನಿ, ನೀರು, ಭೂಮಿ) ಮತ್ತು ತ್ರಿದೋಷ (ವಾತ, ಪಿತ್ತ, ಕಫ) ಸಿದ್ಧಾಂತವನ್ನು ಆಧರಿಸಿದೆ. ತ್ರಿದೋಷ ಅಥವಾ ಜೈವಿಕ ದೋಷಗಳು, ಅವುಗಳ ಸಮತೋಲನ ಸ್ಥಿತಿಯಲ್ಲಿ ಸಾಮಾನ್ಯ ಆರೋಗ್ಯವನ್ನು ಕಾಪಾಡಿಕೊಳ್ಳುತ್ತವೆ ಮತ್ತು ಅವುಗಳ ಅಸಮತೋಲನ ಸ್ಥಿತಿಯಲ್ಲಿ ರೋಗಗಳನ್ನು ಉಂಟುಮಾಡುತ್ತವೆ. ಪರಿಪೂರ್ಣ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮವನ್ನು ಆರೋಗ್ಯ ಎಂದು ಕರೆಯಲಾಗುತ್ತದೆ. ಆಯುರ್ವೇದವು ಆರೋಗ್ಯ ಮತ್ತು ದೀರ್ಘಾಯುಷ್ಯವನ್ನು ಉತ್ತೇಜಿಸಲು ಆಹಾರ ಮತ್ತು ಜೀವನಶೈಲಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ. ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ರೋಗಗಳ ತಡೆಗಟ್ಟುವಿಕೆಗಾಗಿ, ಆಯುರ್ವೇದವು ಒಂದು ಕಾಲದಲ್ಲಿ ಮನುಷ್ಯನ ಸ್ವಂತ ಪ್ರಕೃತಿ (constitution) ಪ್ರಕಾರ ದೈನಂದಿನ, ಕಾಲೋಚಿತ ಮತ್ತು ನೈತಿಕ ಪಥ್ಯಗಳನ್ನು ಅನುಸರಿಸುವ ಮೂಲಕ ಸರಿಯಾದ ದೈಹಿಕ ಮತ್ತು ಮಾನಸಿಕ ಶಿಸ್ತನ್ನು ಸಲಹೆ ಮಾಡುತ್ತದೆ.

ಆಯುರ್ವೇದವು ಎಲ್ಲಾ ಮಾನವರನ್ನು ಜೈವಿಕ ದೋಷಗಳ ಪ್ರಾಬಲ್ಯಕ್ಕೆ ಅನುಗುಣವಾಗಿ 7 ವಿಭಿನ್ನ ರೀತಿಯ ಪ್ರಕೃತಿಗಳಾಗಿ (constitution) ವರ್ಗೀಕರಿಸುತ್ತದೆ ಮತ್ತು ಮಾನಸಿಕ ಗುಣಗಳ (ಸತ್ವ, ರಜಸ್, ತಮಸ್) ಪ್ರಾಬಲ್ಯಕ್ಕೆ ಅನುಗುಣವಾಗಿ ಅವರನ್ನು ಮೂರು ಮಾನಸಿಕ ಪ್ರಕೃತಿಗಳಾಗಿ ವರ್ಗೀಕರಿಸುತ್ತದೆ. ರೋಗಿಗಳ ಪರೀಕ್ಷೆ, ರೋಗ ನಿರ್ಣಯ, ಮುನ್ನರಿವು ಮತ್ತು ರೋಗಗಳ ಚಿಕಿತ್ಸೆಯಲ್ಲಿ ಈ ಅಂಶಗಳನ್ನು ಯಾವಾಗಲೂ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಗಿಡ ಮೂಲಿಕೆಗಳನ್ನು ಮುಖ್ಯವಾಗಿ ಆಯುರ್ವೇದದಲ್ಲಿ ಪುನರ್ಯೌವನಗೊಳಿಸುವಿಕೆ, ವಾಜಿಕರಣ (ಲೈಂಗಿಕ ಶಕ್ತಿ ವೈದ್ಯಕೀಯ ಶಾಸ್ತ್ರ) ಮತ್ತು ರೋಗಗಳ ಚಿಕಿತ್ಸೆಗೆ ಔಷಧಿಗಳಾಗಿ ಬಳಸಲಾಗುತ್ತದೆ.

**ಆಯುರ್ವೇದದಲ್ಲಿ 8 ಮುಖ್ಯ ಶಾಖೆಗಳಿವೆ:** ಕಾಯ ಚಿಕಿತ್ಸ (ಶರೀರ ವೈದ್ಯಕೀಯ ಶಾಸ್ತ್ರ), ಕೌಮಾರ ಭೃತ್ಯ (ಶಿಶು ವೈದ್ಯಕೀಯ ಶಾಸ್ತ್ರ), ಭೂತವಿದ್ಯಾ (ಮನೋ ವೈದ್ಯ ಶಾಸ್ತ್ರ), ಶಾಲಾಕ್ಯ ತಂತ್ರ (ಕಣ್ಣು, ಮೂಗು, ಗಂಟಲು, ಕಿವಿ, ದಂತ ವೈದ್ಯ ಶಾಸ್ತ್ರ), ಶಲ್ಯ ತಂತ್ರ (ಶಸ್ತ್ರಚಿಕಿತ್ಸೆ), ಅಗದ ತಂತ್ರ (ವಿಷಶಾಸ್ತ್ರ), ಜರಾ ಚಿಕಿತ್ಸ/ರಸಾಯನ (ವೃದ್ಧಾಪ್ಯ ನಿವಾರಣ ವೈದ್ಯಕೀಯ ಶಾಸ್ತ್ರ) ಮತ್ತು ವಾಜಿಕರಣ (ಲೈಂಗಿಕ ಶಕ್ತಿ ವೈದ್ಯಕೀಯ ಶಾಸ್ತ್ರ). ರೋಗಿ ಮತ್ತು ರೋಗವನ್ನು ವಿಶೇಷವಾಗಿ ನಾಡಿ ಪರೀಕ್ಷೆಯ ಮೂಲಕ ಪರೀಕ್ಷಿಸುವ ಆಯುರ್ವೇದದ ವಿಧಾನ ಬಹಳ ವಿಶಿಷ್ಟವಾಗಿದೆ.

**ಪಂಚಕರ್ಮ ಚಿಕಿತ್ಸೆಯು** ಆಯುರ್ವೇದದ ಶ್ರೇಷ್ಠ ವಿಶೇಷತೆಗಳಲ್ಲಿ ಒಂದಾಗಿದೆ, ಇದನ್ನು ನಿರ್ವಿಷೀಕರಣ (detoxification) ಅಥವಾ ದೇಹ ಶುದ್ಧೀಕರಣ (purification) ಚಿಕಿತ್ಸೆ ಎಂದೂ ಕರೆಯಲಾಗುತ್ತದೆ. ಇದು ವಿವಿಧ ರೀತಿಯ ತೈಲ ಮಸಾಜ್‌ಗಳನ್ನು ಒಳಗೊಂಡಿದೆ (ಸ್ನೇಹನ–ಅಭ್ಯಂಗ, ಧಾರಾ, ಶಿರೋಬಸ್ತಿ, ಇತ್ಯಾದಿ); ಶರೀರಕ್ಕೆ ಶಾಖ ಕೊಡುವ ಚಿಕಿತ್ಸೆ (ಸ್ವೇದನ–ಹಬೆ ಸ್ನಾನ, ಪಿಜಿಚಿಲ್, ಕಟಿಬಸ್ತಿ, ಪತ್ರ ಪಿಂಡ ಸ್ವೇದ, ಶಾಷ್ಟಿಕ ಶಾಲಿ ಪಿಂಡ ಸ್ವೇದ ಇತ್ಯಾದಿ). ಸ್ನೇಹನ ಮತ್ತು ಸ್ವೇದನವನ್ನು ಪೂರ್ವ ಕರ್ಮ ಎಂದು ಕರೆಯಲಾಗುತ್ತದೆ.

**ಮುಖ್ಯ ಪಂಚಕರ್ಮ** (ನಿರ್ವಿಷೀಕರಣ **ಚಿಕಿತ್ಸೆಗಳು) :**

- ವಮನ ಕರ್ಮ (ಅತಿ ಹೆಚ್ಚಾದ) ಕಫ ದೋಷವನ್ನು ನಿಯಂತ್ರಿಸಲು ಚಿಕಿತ್ಸಕ ಶುದ್ಧೀಕರಣ ವಾಂತಿ)
- ವಿರೇಚನ ಕರ್ಮ (ಹೆಚ್ಚಾದ ಪಿತ್ತ ದೋಷವನ್ನು ನಿಯಂತ್ರಿಸಲು ಚಿಕಿತ್ಸಕ ಶುದ್ಧೀಕರಣ)
- ಅನುವಾಸನ ಬಸ್ತಿ ಕರ್ಮ (ವಾತ ದೋಷವನ್ನು ನಿಯಂತ್ರಿಸಲು ಎಣ್ಣೆಯೊಂದಿಗೆ ಔಷಧೀಯ ಎನಿಮಾ)
- ನಿರೂಹ ಬಸ್ತಿ ಕರ್ಮ (ಅತಿ ಹೆಚ್ಚಾದ ವಾತ ದೋಷವನ್ನು ನಿಯಂತ್ರಿಸಲು ಕಷಾಯ, ಎಣ್ಣೆ, ಜೇನುತುಪ್ಪ, ಉಪ್ಪು ಇತ್ಯಾದಿಗಳೊಂದಿಗೆ ಔಷಧೀಯ ಎನಿಮಾ)
- ನಸ್ಯ ಕರ್ಮ (ತಲೆಯಲ್ಲಿ ಎಲ್ಲಾ ಮೂರು ದೋಷಗಳನ್ನು ಸಾಮಾನ್ಯಗೊಳಿಸಲು ಮೂಗಿನ ಔಷಧ ಚಿಕಿತ್ಸೆ).

ಪಂಚಕರ್ಮವು ಅನೇಕ ದೀರ್ಘಕಾಲದ ಕಾಯಿಲೆಗಳಿಗೆ ಮತ್ತು ಕೆಲವು ತೀವ್ರವಾದ ಕಾಯಿಲೆಗಳಿಗೆ ಬಹಳ ಪರಿಣಾಮಕಾರಿ ಚಿಕಿತ್ಸೆಯಾಗಿದೆ. ಇದು ಎಲ್ಲಾ ದೋಷಗಳನ್ನು ನಿಯಂತ್ರಿಸಲು ಮತ್ತು ದೇಹದಿಂದ ವಿಷ ಕಾರಿ ಜೀವಾಣು / ತ್ಯಾಜ್ಯ ವಸ್ತುಗಳನ್ನು ಜಠರ–ಕರುಳಿನ ವ್ಯವಸ್ಥೆಯಿಂದ ಮಾತ್ರವಲ್ಲದೆ ಅಂಗಾಂಶ ಮಟ್ಟದಿಂದ ಕೂಡ ಹೊರಹಾಕಲು ಪ್ರಯತ್ನಿಸುತ್ತದೆ. ಆಯುರ್ವೇದದಲ್ಲಿ, ಯಾವುದೇ ಕಾಯಿಲೆಯಲ್ಲಿ ದೋಷಗಳು ವಿಪರೀತವಾಗಿ ಉಲ್ಬಣಗೊಂಡಾಗ, ದೇಹವನ್ನು ನಿರ್ವಿಷಗೊಳಿಸಲು (detoxify) ಪಂಚಕರ್ಮ ಚಿಕಿತ್ಸೆಯನ್ನು ಮೊದಲು ಮಾಡಬೇಕು ಮತ್ತು ನಂತರ ರೋಗಕ್ಕೆ ಸರಿಯಾದ ಔಷಧೀಯ ಚಿಕಿತ್ಸೆಯನ್ನು ಕೈಗೊಳ್ಳಬೇಕು ಎಂದು ವಿವರಿಸಲಾಗಿದೆ ಇದರಿಂದ ಚಿಕಿತ್ಸೆಯ ಯಶಸ್ಸು ತುಂಬಾ ಒಳ್ಳೆಯದ್ದಾಗುವುದಲ್ಲದೆ, ರೋಗದ ಮರುಕಳಿಸುವಿಕೆಯ ಸಾಧ್ಯತೆಗಳು ಇಲ್ಲದಾಗಬಹುದು.

**ಪಂಚಕರ್ಮ ಕಾರ್ಯವಿಧಾನಗಳ ಮುಖ್ಯ ಉದ್ದೇಶಗಳು: ಆರೋಗ್ಯದ ನಿರ್ವಹಣೆ–ಉತ್ತೇಜನೆ ಮತ್ತು ರೋಗಗಳ ತಡೆಗಟ್ಟುವಿಕೆಗಾಗಿ** – ದೋಷಗಳು ವಿವಿಧ ಋತುಗಳಲ್ಲಿ ಉಲ್ಬಣ (vitiated) ಪ್ರವೃತ್ತಿಯನ್ನು ಹೊಂದಿರುತ್ತವೆ ಮತ್ತು ಹೆಚ್ಚಾಗುವಿಕೆ ನಿಯಂತ್ರಿಸಲು ಸೂಕ್ತ ಕ್ರಮ, ಕಾಳಜಿಯನ್ನು ತೆಗೆದುಕೊಳ್ಳದಿದ್ದರೆ, ಅದು ರೋಗಗಳಿಗೆ ಕಾರಣವಾಗಬಹುದು. ಮಳೆಗಾಲದ ಸಮಯದಲ್ಲಿ, ವಾತ ದೋಷವು ಸಹಜವಾಗಿ ಉಲ್ಬಣವಾಗುತ್ತದೆ, ಆದ್ದರಿಂದ, ಬಸ್ತಿ ಕರ್ಮ (ಔಷಧಿ ಎನಿಮಾ) ಮಾಡಬೇಕು. ಶರತ್ಕಾಲದ ಋತುವಿನಲ್ಲಿ, ಪಿತ್ತ ದೋಷವು ಉಲ್ಬಣಗೊಳ್ಳುತ್ತದೆ ಮತ್ತು ಆದ್ದರಿಂದ ವಿರೇಚನ ಕರ್ಮ (ಶುದ್ಧೀಕರಣ) ಮಾಡಬೇಕು. ವಸಂತ ಋತುವಿನಲ್ಲಿ, ಕಫವನ್ನು ನಿಯಂತ್ರಿಸಲು ವಮನ ಕರ್ಮವನ್ನು (ಚಿಕಿತ್ಸ ವಾಂತಿ) ಮಾಡಬೇಕು. ಇದು ಅಂಗಾಂಶಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಪ್ರತಿರಕ್ಷಣಾ (Immunity) ವ್ಯವಸ್ಥೆಯನ್ನು ಹೆಚ್ಚಿಸುತ್ತದೆ, ಇದು ಚೈತನ್ಯ, ಹುರುಪು ಮತ್ತು ದೀರ್ಘಾಯುಷ್ಯವನ್ನು ಹೆಚ್ಚಿಸುತ್ತದೆ ಮತ್ತು ರೋಗಗಳನ್ನು ತಡೆಯುತ್ತದೆ.



ಅಭ್ಯಂಗ



ಶಿರೋಧರ

**ರೋಗಗಳ ಚಿಕಿತ್ಸೆ :** ದೋಷಗಳ ಉಲ್ಬಣ ಅಥವಾ ಅಸಮತೋಲನದ ಕಾರಣದಿಂದಾಗಿ ರೋಗಗಳು. ಅತಿಯಾಗಿ ವಿಷಪೂರಿತ ದೋಷಗಳನ್ನು ತೊಡೆದುಹಾಕಲು / ನಿಯಂತ್ರಿಸಲು, ಪಂಚಕರ್ಮ ಚಿಕಿತ್ಸೆಗಳನ್ನು ಮಾಡಬೇಕು. ನಂತರ ರೋಗಗಳ ನಿಖರವಾದ ಚಿಕಿತ್ಸೆಯನ್ನು ಸೂಕ್ತ ಔಷಧಿಗಳು, ಆಹಾರ ಮತ್ತು ಜೀವನಶೈಲಿಯೊಂದಿಗೆ ಕೈಗೊಳ್ಳಬೇಕು.

**ಕೆಳಕಂಡವುಗಳಿಗೆ ಪಂಚಕರ್ಮ ಚಿಕಿತ್ಸೆಗಳು ಅತ್ಯಂತ ಪರಿಣಾಮಕಾರಿಯಾಗಿವೆ**

- ಕೀಲು ರೋಗಗಳು (ಆಮವಾತ (RA) ಸಂಧಿವಾತ (OA), ಸರ್ವಿಕಲ್ ಮತ್ತು ಸೊಂಟದ ಸ್ಪಾಂಡಿಲೋಸಿಸ್ (cervical /lumbar spondylosis), ಇಂಟರ್ ವರ್ಟೆಬ್ರಲ್ ಡಿಸ್ಕ್‌ನ ಮುಂಚಾಚಿರುವಿಕೆ (prolapse of disc), ಕೀಲುಗಳಲ್ಲಿ ನೋವು, ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್, ಅವಾಸ್ಕುಲರ್ ನೆಕ್ರೋಸಿಸ್ (Avascular necrosis)
- ನರ-ಸ್ನಾಯು ರೋಗಗಳು (ಎಲ್ಲಾ ವಿಧದ ಪಾರ್ಶ್ವವಾಯು-ಹೆಮಿಪ್ಲೆಜಿಯಾ (Hemiplegia), ಪ್ಯಾರಾಪ್ಲೆಜಿಯಾ (Paraplegia), ಕ್ವಾಡ್ರುಪ್ಲೆಜಿಯಾ (Quadruplegia), ಪಾರ್ಕಿನ್ಸನ್ ಕಾಯಿಲೆ (Pakinson's disease), ಫೈಬ್ರೊಮ್ಯಾಲ್ಗಿಯ (Fibromyalgia), ಸ್ನಾಯು ಕ್ಷಯ (muscular dystrophy), ಇತ್ಯಾದಿ)
- ಚರ್ಮರೋಗ (ಸೋರಿಯಾಸಿಸ್ (Psoriasis), ವಿಟಲಿಗೋ (Vitiligo), ಅಲರ್ಜಿಕ್ ಡರ್ಮಟೈಟಿಸ್ ಇತ್ಯಾದಿ)
- ಮೈಗ್ರೇನ್ (Migraine), ಸೈನುಸೈಟಿಸ್ (Sinusitis), ಶ್ವಾಸನಾಳದ ಆಸ್ತಮಾ (Asthma)
- ಮಾನಸಿಕ ಅಸ್ವಸ್ಥತೆಗಳು (ಒತ್ತಡ (Stress), ಆತಂಕ (Anxiety), ಖಿನ್ನತೆ (Depression), ನಿದ್ರಾಹೀನತೆ)
- ಬೊಜ್ಜು (Obesity), ಮಧುಮೇಹ (Diabetes), ಅಧಿಕ ರಕ್ತದೊತ್ತಡ (High Blood Pressure)
- ಗೈನಾಕಾಲಜಿಕಲ್ ಸ್ತ್ರೀರೋಗಗಳು, ಬಂಜೆತನ (infertility)
- ಕ್ಯಾನ್ಸರ್‌ನ ಆರಂಭಿಕ ಹಂತ

ಆಯುರ್ವೇದ ಪಂಚಕರ್ಮ ಚಿಕಿತ್ಸೆಯನ್ನು ಅದ್ಭುತ ಚಿಕಿತ್ಸೆ ಎಂದು ಪರಿಗಣಿಸಲಾಗುತ್ತದೆ, ಇದು ಆರೋಗ್ಯದ ನಿರ್ವಹಣೆ ಮತ್ತು ಉತ್ತೇಜನಕ್ಕಾಗಿ, ರೋಗಗಳ ತಡೆಗಟ್ಟುವಿಕೆ ಮತ್ತು ಗುಣಪಡಿಸುವಿಕೆಗೆ ಬಹಳ ಮುಖ್ಯ ಮತ್ತು ಅವಶ್ಯಕವಾಗಿದೆ. ರೋಗಗಳು ವಾಸಿಯಾಗುವುದು ಮಾತ್ರವಲ್ಲದೇ, ಮರುಕಳಿಸುವ ಸಾಧ್ಯತೆ ಕಡಿಮೆ ಇರುತ್ತದೆ. ವ್ಯಾಪಕವಾದ ಸಂಶೋಧನೆಗಳು ಪಂಚಕರ್ಮ ಚಿಕಿತ್ಸೆಯ ಧನಾತ್ಮಕ ಫಲಿತಾಂಶಗಳು ಮತ್ತು ಪ್ರಯೋಜನಗಳನ್ನು ತೋರಿಸಿವೆ.■

## ಅಭಿನಂದನೆ




**ಶ್ರೀ ಥಾವರ್‌ಚಂದ್ ಗೆಹ್ಲೋಟ್**

ಘನತೆವೆತ್ತ ಕರ್ನಾಟಕ ರಾಜ್ಯದ ರಾಜ್ಯಪಾಲರು



**ಶ್ರೀ ಯು.ಟಿ. ಖಾದರ್**

ಮಾನ್ಯ ವಿಧಾನ ಸಭಾಧ್ಯಕ್ಷರು



**ಶ್ರೀ ಬಸವರಾಜ ಎಸ್. ಹೊರಟ್ಟಿ**


ಮಾನ್ಯ ಸಭಾಪತಿಗಳು, ವಿಧಾನ ಪರಿಷತ್ತು

## ಕರ್ನಾಟಕ ಸರ್ಕಾರದ ಕ್ಯಾಬಿನೆಟ್ ಸಚಿವರು ಮತ್ತು ಖಾತೆಗಳು (ಶೇಷ ಭಾಗ)



**ಶ್ರೀ ಶಿವರಾಜ್ ಎಸ್. ತಂಗಡಗಿ**

ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ



**ಶ್ರೀ ಎನ್.ಎಸ್. ಬೋಸರಾಜು**

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ



**ಡಾ. ಡಿ. ಸುಧಾಕರ್**

ಯೋಜನೆ ಮತ್ತು ಅಂಕಿ ಅಂಶಗಳು

ದೇಶದ ಪ್ರಥಮ ವಚನ ಸಂಸ್ಕೃತಿ ಅಭಿಯಾನ

# ದೆಹಲಿ ಕರ್ನಾಟಕ ಸಂಘದಲ್ಲಿ ಸಾಣೇಹಳ್ಳಿ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರೊಂದಿಗೆ ಸಂವಾದ, ಬಸವಣ್ಣನವರ ವಚನಗಳಿಗೆ ನೃತ್ಯರೂಪಕ

# 'ನೀನಲ್ಲದೆ ಮತ್ತಾರೂ ಇಲ್ಲವಯ್ಯ' ಪ್ರಸ್ತುತಿ



ದಿನಾಂಕ ಜುಲೈ 30, 2023 ರಂದು ದೆಹಲಿ ಕರ್ನಾಟಕ ಸಂಘದ ಸಭಾ ಭವನದಲ್ಲಿ ಬಸವಣ್ಣನವರ 44 ವಚನಗಳ ಆಧಾರಿತ 'ತುಮ್ಹಾರೆ ಸಿವಾ ಔರ್ ಕೋಯಿ ನಹೀ ಹೈ'-ನೃತ್ಯರೂಪಕದ ಕನ್ನಡ ಅವತರಿಣಿಕೆಯ 'ನೀನಲ್ಲದೆ ಮತ್ತಾರೂ ಇಲ್ಲವಯ್ಯ' ಪ್ರದರ್ಶನ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದ ಕಲಾವಿದರಿಂದ ಪ್ರಸ್ತುತಿಯಾಯಿತು.

ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಮುನ್ನ ಆಯೋಜಿಸಿದ್ದ ಸಭಾ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಸಾಣೇಹಳ್ಳಿಯ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಪಟ್ಟಾಧ್ಯಕ್ಷರಾದ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಕರ್ನಾಟಕ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಗಳಿಗೆ ಹೆಸರಾದ ನಾಡು. ಅಂಥಹ ನಾಡಿನಲ್ಲಿ ಮತ್ತೆ ಮತ್ತೆ ಎಲ್ಲರೂ ನೆನಪಿಸಿಕೊಳ್ಳುವುದು ವಿಶ್ವಗುರು ಬಸವಣ್ಣನವರನ್ನು. ಅನುಭವ ಮಂಟಪದ ಮೂಲಕ ಬಸವಣ್ಣನವರು ವಿಶ್ವದ ಪ್ರಜಾಪ್ರಭುತ್ವದ ಸಂಸತ್ತಿಗೆ ನೆಲೆಗಟ್ಟನ್ನು ಒದಗಿಸಿದವರು. ಈ ಕಾರಣಕ್ಕೇ ನಮ್ಮ ದೇಶದ ಪ್ರಧಾನಮಂತ್ರಿಗಳಾದ ಮೋದಿಯವರು ದೇಶ-ವಿದೇಶಗಳಲ್ಲಿ ಮತ್ತೆ-ಮತ್ತೆ ಬಸವಣ್ಣನವರ ಹೆಸರನ್ನು ಹೇಳುತ್ತಿರುತ್ತಾರೆ. ಬಸವಣ್ಣ ಬಡವ-ಬಲ್ಲಿದ, ಗಂಡು-ಹೆಣ್ಣು, ಶ್ರೇಷ್ಠ-ಕನಿಷ್ಠ ಮೊದಲಾದ ಅಸಮಾನತೆಗಳನ್ನು ಹೋಗಲಾಡಿಸಲು, ದಲಿತ ವರ್ಗದವರು ತಲೆಯೆತ್ತಿ ಬಾಳುವಂತೆ ಸಾಮಾಜಿಕ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ದೊಡ್ಡ ಚಳುವಳಿಯನ್ನೇ ಮಾಡಿದರು. ಅದರ ಪರಿಣಾಮ ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿತು. ಬಸವಣ್ಣನವರದು ಮುಗಿದ ಕೈ, ಬಾಗಿದ ತಲೆ. ತನಗಿಂತ ಕಿರಿಯರಿಲ್ಲ ಎನ್ನುವ ವಿನೀತ ಭಾವ. ಅವರು ಕ್ರಾಂತಿಕಾರಿಗಳಾಗಿರುವಂತೆ ಭಕ್ತಿಭಂಡಾರಿಯೂ ಹೌದು. ಆದರೂ ಬಸವಣ್ಣ 'ಭಕ್ತಿ ಇಲ್ಲದ ಬಡವ ನಾನಯ್ಯ' ಎಂದು ವಿನೀತತೆಯನ್ನು ತೋರಿಸುತ್ತಾರೆ. ಬಸವಣ್ಣನವರ ಭಕ್ತಿಯ ಪರಿಮಳವನ್ನು ಹೊರಸೂಸುವ ಅವರ 44 ವಚನಗಳನ್ನು 'ನೀನಲ್ಲದೆ ಮತ್ತಾರು ಇಲ್ಲವಯ್ಯ' ಎನ್ನುವ ನೃತ್ಯರೂಪಕದಲ್ಲಿ ನಮ್ಮ ಕಲಾವಿದರು ಇದೀಗ ನಿಮ್ಮ ಮುಂದೆ ಪ್ರದರ್ಶಿಸಲಿದ್ದಾರೆ.

ಬಸವಣ್ಣನವರು ತಳ ಸಮುದಾಯದ ಚೆನ್ನಯ್ಯ, ಕಕ್ಕಯ್ಯ, ಹರಳಯ್ಯ ಮೊದಲಾದವರು ನನ್ನ ಬಂಧುಗಳು ಎನ್ನುವ ಮೂಲಕ ಹುಟ್ಟಿನಿಂದ ಬಂದ ಶ್ರೇಷ್ಠತನವನ್ನು ಹೋಗಲಾಡಿಸಿಕೊಂಡಿದ್ದಾರೆ. ಬಸವಣ್ಣನವರಂತಹ ವ್ಯಕ್ತಿತ್ವದವರನ್ನು ವಿಶ್ವದಲ್ಲಿ ಮತ್ತೊಬ್ಬರನ್ನು ಕಾಣಲಾರೆವು. ನಮ್ಮ ಈ ನೃತ್ಯರೂಪಕವನ್ನು ನೋಡಿದ ಉತ್ತರ ಭಾರತೀಯರು ನಮಗೆ ಮೀರಾ, ಕಬೀರ್, ತುಲಸೀದಾಸ್ ಮೊದಲಾದ ಸಂತಕವಿಗಳು ಗೊತ್ತು ಆದರೆ ಬಸವಣ್ಣ ಗೊತ್ತಿರಲಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ಬಸವಣ್ಣನವರ ಪರಿಚಯ ಇನ್ನೂ ನಮ್ಮ ದೇಶದಲ್ಲಿಯೇ ಸರಿಯಾಗಿ ಆಗಿಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಡೀ ಜಗತ್ತಿಗೇ ಬಸವಾದಿ ಶರಣರನ್ನು ಪರಿಚಯಿಸುವುದು ಕನ್ನಡಿಗರೆಲ್ಲರ ಜವಾಬ್ದಾರಿ. ಆದರೆ ಭಾಷೆ, ಜಾತಿ, ಧರ್ಮ ಮೊದಲಾದವುಗಳ ಹೆಸರಿನಲ್ಲಿ ಬಸವಣ್ಣನವರಿಗೆ ಚೌಕಟ್ಟನ್ನು ಹಾಕಿ ಅವರನ್ನು ಹೊರಗೇ ಬಿಟ್ಟಿಲ್ಲ. ಆಯಾ ಭಾಷೆಯ ನಾಟಕ, ನೃತ್ಯರೂಪಕ, ಸಂಗೀತಗಳ ಮೂಲಕ ಬಸವಾದಿ ಶರಣರನ್ನು ಪರಿಚಯಿಸುವ ಅಗತ್ಯತೆ ಹಿಂದೆಂದಿಗಿಂತ ಇಂದಿದೆ. ನಮ್ಮ ಶ್ರೀ ಶಿವಕುಮಾರ ಕಲಾ ಸಂಘದ್ದು ಇದೊಂದು ದುಸ್ಸಾಹಸದ ಕಾರ್ಯ. ಇದುವರೆಗೂ ಸಾಮಾನ್ಯ ಬಸ್ಸಿನಲ್ಲಿ ದೇಶದಾದ್ಯಂತ 5000 ಕಿ.ಮೀ. ಪ್ರಯಾಣಿಸಿ 21 ಪ್ರದರ್ಶನಗಳನ್ನು ನೀಡಿದ್ದಾರೆ. ಕಲಾವಿದರಿಗೆ ನಮಗೆ ಊಟ, ವಸತಿ ಮುಖ್ಯವಲ್ಲ; ತತ್ವ ಪ್ರಚಾರಕ್ಕಾಗಿ ಬಂದಿದ್ದೇವೆ ಎನ್ನುವ ಛಲ ಇದೆ, ಮನೋಬಲ ಇದೆ. ನಮ್ಮಲ್ಲಿರುವ ಕಲಾವಿದರೆಲ್ಲರೂ ಪದವೀಧರರು. ಇದರಲ್ಲಿ ಕೆಲವರು ಉದ್ಯೋಗವನ್ನೂ ಬಿಟ್ಟು ಬಂದಿದ್ದಾರೆ. ಪ್ರಯಾಣ ನಿಮಿತ್ತ ಕೆಲವರು ಅನಾರೋಗ್ಯಕ್ಕೆ ತುತ್ತಾದರೂ ಪ್ರದರ್ಶನ ನಿಲ್ಲಿಸಲಿಲ್ಲ. ಅವರ ಈ ಸೇವೆ ಶ್ಲಾಘನೀಯವಾದುದು ಎಂದರು.

ಇಂದಿನ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಆಗಮಿಸಿರುವ ಕೇಂದ್ರ ಮಂತ್ರಿಗಳಾದ ಶ್ರೀ ಎ.



ನಾರಾಯಣ ಸ್ವಾಮಿಯವರು ಅತ್ಯಂತ ಸರಳ ವ್ಯಕ್ತಿತ್ವದವರು. ನಮ್ಮ ಫೋನ್ ಕರೆಗೂ ಸದಾ ಸ್ಪಂದಿಸುವರು. ಜನಪ್ರತಿನಿಧಿಗಳಾದವರು ಹೀಗಿರಬೇಕು. ಆಗ ಅವರು ಸಮಾಜ ಸೇವಕರಾಗಲು ಸಾಧ್ಯ. ನಮ್ಮ ಈ ನೃತ್ಯಪ್ರದರ್ಶನದ ಕಾರ್ಯಯೋಜನೆಗೆ 60 ಲಕ್ಷ ಹಣ ವೆಚ್ಚವಾಗುವುದು. ಹಣದ ಕೊರತೆಯ ಕಾರಣಕ್ಕೆ ತತ್ವ ಪ್ರಚಾರಕ್ಕೆ ಹಿನ್ನಡೆಯಾಗಬಾರದು. ಶ್ರೀ ನಾರಾಯಣ ಸ್ವಾಮಿಯವರು ಕೇಂದ್ರ ಸರಕಾರದಿಂದ ಅನುದಾನ ಕೊಡಿಸುವೆನೆಂದು ಭರವಸೆ ನೀಡಿದ್ದಾರೆ. ಆದಷ್ಟು ಬೇಗ ಈ ಕೆಲಸ ಮಾಡಿದರೆ ನಮ್ಮ ಕಾರ್ಯ ಇನ್ನಷ್ಟು ಸುಗಮವಾಗಿ ನಡೆಯುವುದು. ಕರ್ನಾಟಕ ಸಂಘದವರು ನಮ್ಮ ಕಲಾವಿದರು ಇಲ್ಲಿ ಇರುವಷ್ಟು ದಿನ ಅಂದರೆ 4–5 ದಿನ ಊಟ–ವಸತಿ ಕೊಡಲು ಒಪ್ಪಿದ್ದಾರೆ. ಇಲ್ಲಿ ಇನ್ನೂ 4–5 ಪ್ರದರ್ಶನಗಳಿವೆ. ಒಟ್ಟು 2 ತಿಂಗಳ ಕಾಲಾವಧಿಯಲ್ಲಿ ಈಗಾಗಲೇ ಒಂದು ತಿಂಗಳು ಮುಗಿದಿದೆ. ಇದುವರೆಗೂ ಕಲಾವಿದರು 21 ಪ್ರದರ್ಶನಗಳನ್ನು ನೀಡಿದ್ದಾರೆ. ಈ ಅಭಿಯಾನ ಮುಗಿಯುವುದರೊಳಗೆ 60 ಪ್ರದರ್ಶನಗಳನ್ನು ನೀಡಬಹುದು. ಪ್ರದರ್ಶನಕ್ಕೆ ಹೆಚ್ಚಿನ ಬೇಡಿಕೆ ಇದೆ. 24 ಜನ ಕಲಾವಿದರೆಲ್ಲರೂ ಹೆಣ್ಣುಮಕ್ಕಳಾಗಿದ್ದು ಮನೆ–ಉದ್ಯೋಗ–ಓದನ್ನು ಬಿಟ್ಟು ಬಂದಿದ್ದಾರೆ. ಅವರ ಮಿತಿಯನ್ನೂ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಪ್ರದರ್ಶನದ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ ಎಂದರು.



ಮುಖ್ಯ ಅತಿಥಿಗಳಾಗಿದ್ದ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯ ಸಚಿವರಾದ ಶ್ರೀ ಎ. ನಾರಾಯಣ ಸ್ವಾಮಿಯವರು ಮಾತನಾಡಿ 'ತುಮ್ಹಾರೆ ಸಿವಾ ಔರ್ ಕೋಯಿ ನಹಿ' ವಚನ ಸಂಸ್ಕೃತಿ ಅಭಿಯಾನ ಕನ್ನಡದ ಸಂಸ್ಕೃತಿ, ಜೀವನ ಪದ್ಧತಿ, ಸಂಸ್ಕಾರಗಳಿಗೆ ಬೆಳಕು ಚೆಲ್ಲುವ ಕಾರ್ಯಕ್ರಮ. ಇದು ಕನ್ನಡಿಗರ ಹೃದಯವನ್ನು ಮುಟ್ಟುವಂತಹದ್ದು. ಪಂಡಿತಾರಾಧ್ಯ ಶ್ರೀಗಳು ಸಾನ್ನಿಧ್ಯವಹಿಸಿರುವುದು ಸಭೆಗೆ ಮತ್ತಷ್ಟು ಮೆರಗು ನೀಡಿದೆ. ಪೂಜ್ಯರು ಬಸವಣ್ಣನವರ ರೀತಿಯಲ್ಲಿ ಸಾಮಾಜಿಕ ಪರಿವರ್ತನೆ ಮತ್ತು ತತ್ವಗಳನ್ನು ತಿಳಿಸುವ ಕಾರ್ಯವನ್ನು ಬದ್ಧತೆಯಿಂದ ಮಾಡುತ್ತಿದ್ದಾರೆ. ಬಸವಣ್ಣನವರು ಸ್ಥಾಪಿಸಿದ 'ಅನುಭವ ಮಂಟಪ' ವಿಶ್ವಕ್ಕೇ ಪ್ರಜಾಪ್ರಭುತ್ವದ ತಳಹದಿಯನ್ನು ಒದಗಿಸಿಕೊಟ್ಟಿದೆ. ಬಸವಣ್ಣನವರ ತತ್ವ ಸಿದ್ಧಾಂತಗಳು ಎಂದೆಂದಿಗೂ ಪ್ರಸ್ತುತವಾದವು. ಅವರು ಆರ್ಥಿಕ ಸಚಿವರಾಗಿ, ಜನಪ್ರತಿನಿಧಿಯಾಗಿ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದವರು. ಮೊಟ್ಟ ಮೊದಲ ಬಾರಿಗೆ ಮಹಿಳೆಯರಿಗೆ ಸಮಾನತೆಯನ್ನು ನೀಡಿದವರು. ಸಾಣೇಹಳ್ಳಿಯ ಶ್ರೀಮಠದಲ್ಲಿ ಬಸವಾದಿ ಶರಣರ ತತ್ವ–ಸಿದ್ಧಾಂತಗಳನ್ನು ಶಿಕ್ಷಣ, ಸಂಸ್ಕೃತಿ, ಕಲೆ, ನಾಟಕ, ಸಾಹಿತ್ಯ ಮೊದಲಾದವುಗಳ ಮೂಲಕ ಜನರಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಅವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ನಿತ್ಯವೂ ಶ್ರಮಿಸುತ್ತಿದ್ದಾರೆ. ಪೂಜ್ಯರ ಈ ಕಾರ್ಯಕ್ಕೆ ನನ್ನಿಂದಾದ ಎಲ್ಲ ಸಹಕಾರವನ್ನೂ ನೀಡುವೆ ಎಂದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ರಂಗ ಸಂಘಟಕರಾದ ಶ್ರೀ ಶ್ರೀನಿವಾಸ ಜಿ ಕಪ್ಪಣ್ಣ ಮಾತನಾಡಿ ಸಚಿವರಾದ ಶ್ರೀ ನಾರಾಯಣ ಸ್ವಾಮಿಯವರು 'ತುಮ್ಹಾರೆ ಸಿವಾ ಔರ್ ಕೋಯಿ ನಹೀ ಹೈ' ಎನ್ನುವ ನೃತ್ಯರೂಪಕ ಇಡೀ ದೇಶದಲ್ಲಿ ಸಂಚರಿಸಲು ಆರ್ಥಿಕ ನೆರವು ನೀಡುತ್ತಾರೆ ಎನ್ನುವ ಭರವಸೆ ನೀಡಿದ ಕಾರಣಕ್ಕೇ ನಮ್ಮ ಈ ಕಾರ್ಯಯೋಜನೆ ಜಾರಿಗೊಂಡಿದೆ. ಇದುವರೆಗೆ ನಮ್ಮ ತಂಡ ಸಾಮಾನ್ಯ ಬಸ್ಸಿನಲ್ಲಿ ದೇಶದ 9 ರಾಜ್ಯಗಳಲ್ಲಿ 5410 ಕಿ.ಮೀ. ಸಂಚರಿಸಿ 21 ಪ್ರದರ್ಶನಗಳನ್ನು ನೀಡಿದೆ. ಉಷ್ಣಾಂಶ, ಚಳಿ, ಮಳೆ, ಗಾಳಿ ವಾತಾವರಣದಲ್ಲಿ ಏರುಪೇರಾಗುತ್ತಿದ್ದರೂ ಎಲ್ಲಿಯೂ ಪ್ರದರ್ಶನ ನಿಲ್ಲಿಸದೆ ನೀಡುತ್ತ ಬಂದಿದ್ದಾರೆ. ಪ್ರದರ್ಶನ ನೋಡಿದ ಪ್ರೇಕ್ಷಕರು ಪ್ರದರ್ಶನ ಮುಗಿದ ನಂತರ ನಿಂತು ಚಪ್ಪಾಳೆ ಹೊಡೆಯುವ ಮೂಲಕ ಗೌರವಿಸಿದ್ದಾರೆ. ಪ್ರೇಕ್ಷಕರ ಸ್ಪಂದನೆ ಅಪೂರ್ವವಾಗಿದೆ. ನಮ್ಮ ತಂಡಕ್ಕೆ ಲಕ್ನೌದಲ್ಲಿ ಸಿಕ್ಕ ಅಪೂರ್ವ ಸ್ವಾಗತ, ಗೌರವ ಮರೆಯುವಂಥದ್ದಲ್ಲ. ನಮ್ಮ ತಂಡಕ್ಕೆ ಬಹಳ ವಿಶಿಷ್ಟವಾದ ಅನುಭವವಾಗಿದೆ. ಬಸವಣ್ಣನವರ ಸಾಹಿತ್ಯಕ್ಕೆ ಮೈ ಜುಂ ಎನಿಸುವ ಸಂಗೀತವನ್ನು ಖ್ಯಾತ ಸಂಗೀತಗಾರ ಸಿ. ಅಶ್ವಥ್ ನೀಡಿದ್ದಾರೆ. ನಮಗೆ ಪ್ರೇಕ್ಷಕರ ಚಪ್ಪಾಳೆ, ಪ್ರೋತ್ಸಾಹವೇ 'ಶಿವ' ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಸಂಗೀತ, ಸಾಹಿತ್ಯ, ಕಲೆ, ನಾಟಕ, ಸಂಸ್ಕೃತಿಯ ಮೂಲಕ ಮಾಡುತ್ತಿರುವ ಕಾರ್ಯ ಅನನ್ಯವಾದುದು. ಇದಕ್ಕೆ ನಮ್ಮ ಸಂಘದ ಸಹಕಾರ ಯಾವತ್ತೂ ಇರುವುದು. ಶ್ರೀಗಳಿಗೆ 2021ರಲ್ಲಿ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ ನೀಡಿ ನಮ್ಮನ್ನು ನಮ್ಮನ್ನು ನಾವು ಗೌರವಿಸಿಕೊಂಡಿದ್ದೇವೆ. ಕಲಾವಿದರು ದೆಹಲಿಯಲ್ಲಿರುವಷ್ಟೂ ದಿನವೂ ನಮ್ಮ ಸಂಘ ಆತಿಥ್ಯ ನೀಡುವುದು. ಇಂದು ನೀಡುವ ಪ್ರದರ್ಶನಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸಂಘದ ವತಿಯಿಂದ ನೀಡಲಾಗುವುದು, ಇಂದು ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ನೀಡಿದ ಶ್ರೀಗಳಿಗೆ ಉಪಸ್ಥಿತರಿದ್ದ ಕೇಂದ್ರ ಸಚಿವರಿಗೆ, ನೃತ್ಯರೂಪಕ ನೀಡುತ್ತಿರುವ ಕಲಾತಂಡಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ವಂದನೆಗಳನ್ನು ಸಲ್ಲಿಸಿದರು. ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಡೆಸಿಕೊಟ್ಟರು. ನಂತರ 'ನೀನಲ್ಲದೆ ಮತ್ತಾರೂ ಇಲ್ಲವಯ್ಯ' ಎನ್ನುವ ಕನ್ನಡ ಅವತರಣಿಕೆಯಲ್ಲಿ ನೃತ್ಯರೂಪಕ ಪ್ರದರ್ಶನಗೊಂಡಿತು. ಸಭಾಂಗಣದಲ್ಲಿ ತುಂಬಿದ್ದ ಪ್ರೇಕ್ಷಕರು ಚಪ್ಪಾಳೆ ತಟ್ಟುವ ಮೂಲಕ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಸುಮಾರು ಒಂದೂವರೆ ಗಂಟೆ ನಡೆದ ನೃತ್ಯರೂಪಕ ನೆರೆದಿದ್ದವರನ್ನು ಮಂತ್ರಮುಗ್ಧರನ್ನಾಗಿಸಿತು.

**ಅಭಿಮತ ವರದಿ**



# “ಹೊರನಾಡ ಕನ್ನಡಿಗರಾಗಿ, ಕನ್ನಡವನ್ನು ಪೋಷಿಸಿ, ಬೆಳೆಸಿ ಉಳಿಸುತ್ತಿರುವ ಸಂಘದ ಮಾಜಿ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಹಿರಿಯ ದೆಹಲಿ ಕನ್ನಡಿಗರೊಂದಿಗೆ ಸಂವಾದ ಕಾರ್ಯಕ್ರಮ”

ತಮ್ಮ ವೃತ್ತಿಪರ ಜೀವನ ಮತ್ತು ಇತರ ಕಾರಣಗಳಿಂದ ರಾಷ್ಟ್ರ ರಾಜಧಾನಿ ದೆಹಲಿಗೆ ಬಂದು, ನೆಲಸಿ ಕಳೆದ 30–50ವರ್ಷಗಳಿಂದ ಇಲ್ಲಿಯೂ ಕೂಡ ನಮ್ಮ ಕನ್ನಡ ನಾಡು, ನುಡಿ, ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುತ್ತಿರುವ ಅನೇಕ ಹಿರಿಯ ಕನ್ನಡಿಗರು ಇಂದು ದೆಹಲಿಯಲ್ಲಿ ನಮ್ಮೊಂದಿಗೆ ಇದ್ದಾರೆ. ತಮ್ಮ ಕೌಟುಂಬಿಕ ಮತ್ತು ವೃತ್ತಿಪರ ಜೀವನದ ನಡುವೆಯೂ ಕಳೆದ ಹಲವಾರು ವರ್ಷಗಳಿಂದ ಕರ್ನಾಟಕ ಸಂಘದ ಜೊತೆಗೆ, ದೆಹಲಿ ಕನ್ನಡಿಗರ ಜೊತೆಗೆ ಅರಿತು, ಬೆರೆತು ಸಾಗುತ್ತಿದ್ದಾರೆ. ಇಂತಹ ಅನೇಕ ಜನ ಹಿರಿಯರು ದೆಹಲಿಗೆ ಬರುವ ನೂರಾರು ಕನ್ನಡಿಗರಿಗೆ ದೆಹಲಿಯ ಪ್ರದೇಶದ ಬಗ್ಗೆ, ಇಲ್ಲಿನ, ಆಚಾರ, ವಿಚಾರ, ಭಾಷೆ ಮತ್ತು ವ್ಯವಸ್ಥೆಯ ಬಗ್ಗೆ ತಮಗೆ ಸಾಧ್ಯವಾಗುವ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾ ಸಹಾಯ ಮಾಡುತ್ತಿದ್ದಾರೆ ಮತ್ತು ಕಷ್ಟದಲ್ಲಿ ಸಿಲುಕಿದ ಇತರ ಕನ್ನಡಿಗರಿಗೆ ಹೆಗಲು ನೀಡುತ್ತಿದ್ದಾರೆ. ಜೊತೆಗೆ ನಾಡಿನ ನೆಲದ ಪರಂಪರೆಯನ್ನು ದೇಶದ ನೆಲದಲ್ಲಿ ಬಿತ್ತುತ್ತಿದ್ದಾರೆ. ಅಂತಹ ಕೆಲವು ಜನ ಹಿರಿಯ ಕನ್ನಡಿಗರೊಂದಿಗೆ ಅವರ ಜೀವನದ ತುಡಿತ ಮಿಡಿತಗಳನ್ನು, ತಿಳಿದುಕೊಳ್ಳಲು ಅನುಭವಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು 30.07.2023 ರಂದು, ಭಾನುವಾರ ಸಂಜೆ ಸಂಘದಲ್ಲಿ ಆಯೋಜಿಸಿದ್ದ ಹಿರಿಯರೊಂದಿಗೆ ಸಂವಾದ ಕಾರ್ಯಕ್ರಮವು ಯಶಸ್ವಿಯಾಗಿ ಮೂಡಿ ಬಂದಿತು. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯ ಕಾಲದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ದುಡಿದಂತಹ ಹಿರಿಯರು ಮತ್ತು ಹಿಂದಿನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಕರೆದು ಒಂದೇ ವೇದಿಕೆಯಲ್ಲಿ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರ ಅಧ್ಯಕ್ಷತೆಯಲ್ಲಿ ಅವರೊಂದಿಗೆ ಸಂವಾದ ಮಾಡಿ ಅವರಿಂದ ಸೂಕ್ತ, ಸಲಹೆ, ಕಿವಿಮಾತು, ಮಾರ್ಗದರ್ಶನ ಪಡೆದುಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ದೆಹಲಿಯ ಹಿರಿಯ ಕನ್ನಡಿಗರಾದ ಶ್ರೀ ಬಿ.ಎಸ್. ಕಲ್ಲೂರ್, ಡಾ. ಅಹಲ್ಯಾಚಿಂತಾಮಣಿ, ಶ್ರೀ ವಿ.ವಿ. ಬಿರಾದಾರ, ಶ್ರೀ ಎನ್.ಎ. ಮಾಧವ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಈಶ್ವರ ಮಡಿವಾಳ, ಶ್ರೀ ಕೆ.ಆರ್. ರಾಮಮೂರ್ತಿ ಮತ್ತು ಶ್ರೀ ಎಂ.ವಿ. ವೆಂಕಟೇಶ್ ಅವರು ಪಾಲ್ಗೊಂಡು ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘವು ಅತ್ಯುತ್ತಮ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದೆ. ಇಟ್ಟಿಗೆ ಮತ್ತು ಗೋಡೆಗಳಿಂದ ಕರ್ನಾಟಕ ಸಂಘವನ್ನು ರೂಪಿಸಲು ಸಾಧ್ಯವಿಲ್ಲ, ಇಲ್ಲಿ ಅತ್ಯುತ್ತಮ ಯೋಜನೆಗಳ ಮೂಲಕ, ಕಾರ್ಯಕ್ರಮಗಳ ಮೂಲಕ ದೆಹಲಿ ಕರ್ನಾಟಕ ಸಂಘವನ್ನು ವಿಭಿನ್ನ ಮಟ್ಟಕ್ಕೆ ತೆಗೆದುಕೊಂಡು ಹೋಗಬಹುದು. ಕಾರ್ಯಕ್ರಮಗಳ ಯಶಸ್ವಿಗೆ, ಯೋಜನೆಗಳ ಅನುಷ್ಠಾನಕ್ಕಾಗಿ ಸಂಘದ ಅಧ್ಯಕ್ಷರ, ಪ್ರಧಾನ ಕಾರ್ಯದರ್ಶಿಗಳ ಮತ್ತು ಕಾರ್ಯಕಾರಿ ಸಮಿತಿಯ ಸಹಕಾರ ಅತಿ ಮುಖ್ಯವಾಗಿರುತ್ತದೆ. ಆಗ ಮಾತ್ರ ಯೋಜನೆಗಳು ಫಲಪ್ರದವಾಗಲು ಸಾಧ್ಯ. ದೆಹಲಿ ಕರ್ನಾಟಕ ಸಂಘ ಕನ್ನಡಿಗರ ಆಸ್ತಿ, ಇಲ್ಲಿ ಎಲ್ಲರನ್ನೂ ಸರಿಸಮಾನತೆಯಿಂದ ಕಾಣಬೇಕು, ಹೀಗೆ ಕೆಲವು ಸಲಹೆಗಳನ್ನು ನೀಡುವುದರ ಮೂಲಕ ತಾವು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಾಡಿದ ಕೆಲಸ ಕಾರ್ಯಗಳನ್ನು ನೆನೆಯುತ್ತಾ ಮುಂಬರುವ ಕಾರ್ಯಕ್ರಮಗಳಿಗೆ ಶುಭಾಶಯಗಳನ್ನು ಕೋರಿದರು.

ಸಂಘದ ಕಟ್ಟಡ ಕಟ್ಟಲು ತಾಂತ್ರಿಕವಾಗಿ ಶ್ರಮ ವಹಿಸಿದ್ದಂತಹ ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ, ಮಾಜಿ ಉಪಾಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ಮಾತನಾಡಿ, ಸಂಘ ಬೆಳೆಯಲು ಅಡಿಪಾಯ ಹಾಕಿಕೊಟ್ಟ ಹಿರಿಯ ಕನ್ನಡಿಗರನ್ನು ನಾವು ಯಾವತ್ತೂ ಮರೆಯಬಾರದು, ಅಂತಹವರಲ್ಲಿ ಸಂಘದ ಬೆಳವಣಿಗೆಗಾಗಿ ಬಹಳ ಕಷ್ಟಪಟ್ಟವರಲ್ಲಿ ದಿ. ಕೆ.ಆರ್. ನಾಗರಾಜ ಅವರು ಪ್ರಮುಖರು. ಇಂದು ಸಂಘ ಮತ್ತು ಸಂಘದ ಸುಂದರವಾದ ಕಟ್ಟಡ ಈ ಮಟ್ಟಿಗೆ ಬೆಳೆದು ನಿಲ್ಲಲು ಅವರ ಶ್ರಮ ಬಹಳಷ್ಟು ಇದೆ ಎಂದು ಸ್ಮರಿಸಿದರು. ಮಾನವ ಒಬ್ಬ ಸಂಘಜೀವಿ ಇಲ್ಲಿ ಒಗ್ಗಟ್ಟಾಗಿ ಬೆಳೆಯಬೇಕೆಂದರೆ ಅವನು ಸಹಕಾರಿ ಜೀವಿಯಾಗಿರಬೇಕು. ದೆಹಲಿ ಕರ್ನಾಟಕ ಸಂಘ ಮಾಡುತ್ತಿರುವ ಕೆಲಸಗಳ ಬಗ್ಗೆ ನಮಗೆ ತುಂಬಾ ಗೌರವವಿದೆ, ದೆಹಲಿ ಕರ್ನಾಟಕ ಸಂಘದ ಈ ಅಮೃತ ಮಹೋತ್ಸವ ಇತಿಹಾಸದಲ್ಲಿ ಉಳಿಯುವಂತ ಕಾರ್ಯಕ್ರಮವಾಗಿದೆ. ಜೊತೆಗೆ ದೆಹಲಿ ಕರ್ನಾಟಕ ಸಂಘದ ಕಟ್ಟಡದ ನಿರ್ವಹಣೆಯ ಕೆಲಸ ಕಾರ್ಯಗಳ ಬಗ್ಗೆಯೂ ಗಮನದಲ್ಲಿಟ್ಟುಕೊಂಡು, ಸ್ವಚ್ಚತೆಯನ್ನ ಕಾಪಾಡಬೇಕೆಂದು ಕಿವಿ ಮಾತನ್ನ ಹೇಳಿದರು. ದೆಹಲಿ ಕರ್ನಾಟಕ ಸಂಘದ ಈ ಸುಂದರ ಕಟ್ಟಡ ಮೇಲೆ ಬರಲು ನಮ್ಮ ಕನ್ನಡಿಗ ವಾಸ್ತುಶಿಲ್ಪಿ ಶ್ರೀ ಉದಯ್ ಭಟ್ ಮತ್ತು ಶ್ರೀ ಪ್ರಸಾದ್ ಅವರಂತಹ ಹಿರಿಯರ ಕೊಡುಗೆ ಬಹಳಷ್ಟಿದ್ದು, ಆ ಸಂದರ್ಭದಲ್ಲಿ ಸಂಘದ ಕಟ್ಟಡವನ್ನು ನಿರ್ಮಾಣ ಮಾಡುವ ತಂಡದ ಭಾಗವಾಗಿ ಕೆಲಸ ಮಾಡಿದ್ದು ತಮಗೆ ಅತ್ಯಂತ ಹೆಮ್ಮೆ ಇದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಘದ ಮಾಜಿ ಖಜಾಂಚಿಗಳಾದ ಶ್ರೀ ಕೆ.ಆರ್. ರಾಮಮೂರ್ತಿ ಮಾತನಾಡಿ, ತಮ್ಮ ಸಮಯದಲ್ಲಿ ನಡೆದಂತಹ ಕೆಲಸಗಳನ್ನು ಮೆಲಕು ಹಾಕುತ್ತಾ, ದೆಹಲಿ ಕರ್ನಾಟಕ ಸಂಘ ಇವತ್ತಿನ ಲೆಕ್ಕಪತ್ರಗಳನ್ನು ಉತ್ತಮವಾಗಿ ಕಾಪಾಡಿಕೊಂಡು ಬರುತ್ತಿದೆ, ಬರುವ ದಿನಗಳಲ್ಲೂ ಸಹ ಪಾರದರ್ಶಕತೆಯಿಂದ ಕಾಪಾಡಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಸಂಘದ ಮಾಜಿ ಖಜಾಂಚಿಯಾಗಿ ಹಾಗು ಕಾವಲು ಸಮಿತಿಗಳಲ್ಲಿ ಕೆಲಸ ಮಾಡಿದಂತಹ ಶ್ರೀ ಈಶ್ವರ ಮಡಿವಾಳ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಲೆಕ್ಕಪತ್ರಗಳನ್ನು ಪಾರದರ್ಶಕತೆಯಿಂದ ಕಾಪಾಡಿಕೊಂಡು ಹೋಗಬೇಕು, ಎಲ್ಲಾ ಅಕೌಂಟ್ಸ್ ಮತ್ತು ಬಿಲ್‌ಗಳ ಪರಾಮರ್ಶೆ, ಇಂಟರ್ನಲ್ (Internal) ಆಡಿಟರ್ ಮತ್ತು ಶಾಸನಬದ್ಧ (statutory) ಆಡಿಟರ್ ಜೊತೆಗೂಡಿ ಉತ್ತಮ ಕೆಲಸಗಳು ನಡೆಯುತ್ತಿದೆ, ಕರ್ನಾಟಕ ಸಂಘದಲ್ಲಿ ನಾನು ಸದಾ ಕಾಲ ಪ್ರಶ್ನೆ ಮಾಡುತ್ತಾ ಇರುತ್ತಿದ್ದೆ, ವಿರೋಧ ಪಕ್ಷದ ನಾಯಕನ ಹಾಗೆ ಮಾತನಾಡಿದ್ದೇನೆ. ಅದೆಲ್ಲದರ ಹೊರತಾಗಿಯೂ ಕರ್ನಾಟಕ ಸಂಘದ ಅಧ್ಯಕ್ಷರು ನನ್ನನ್ನು ಕರೆಯಿಸಿ ಈ ವೇದಿಕೆಯಲ್ಲಿ ಅವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು. ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಅತೀ ಹೆಚ್ಚು ಮತಗಳನ್ನು ಪಡೆದವರು ಕರ್ನಾಟಕ ಸಂಘದ ಅಧ್ಯಕ್ಷರಾದರೆ, ಅದಕ್ಕಿಂತ ಕಡಿಮೆ ಸ್ಥಾನ ಪಡೆದವರು ವಿರೋಧ ಪಕ್ಷದ ನಾಯಕನಂತಹ ಒಂದು ಹುದ್ದೆಯನ್ನು ಹೊಂದಬಹುದು, ಈ ನಿಟ್ಟಿನಲ್ಲಿ ಸಂಘದ ಸಂವಿಧಾನದಲ್ಲಿ ಬದಲಾವಣೆ ಅಥವಾ ತಿದ್ದುಪಡಿ ತರಬೇಕೆಂದು ಕಿರು ಸಲಹೆಯನ್ನು ನೀಡಿದರು. ಸಂಘ ಸಂಸ್ಥೆಗಳಲ್ಲಿ ಕಾರ್ಯಕಾರಿ ಸಮಿತಿಯಲ್ಲಿದ್ದವರಾಗಲಿ ಅಥವಾ ಇತರೆ ಸದಸ್ಯರಾಗಲಿ ಪ್ರಶ್ನೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಇಲ್ಲವಾದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿರಂಕುಶತನ ಬೆಳೆಯುತ್ತದೆ. ಪ್ರಶ್ನೆ ಮಾಡುವುದರಿಂದ ಸಂಘದ ಪಾರದರ್ಶಕತೆ ಎದ್ದು ಕಾಣುತ್ತದೆ ಎಂದು ಹೇಳಿದರು.

ಸಂಘದ ಖಜಾಂಚಿಗಳಾಗಿ ಈ ಹಿಂದೆ ಸೇವೆ ಸಲ್ಲಿಸಿರುವ ಶ್ರೀ ಎಂ.ವಿ. ವೆಂಕಟೇಶ್ ಅವರು ಮಾತನಾಡಿ ಹಳೆಯ ನೆನಪುಗಳ ಆ ದಿನಗಳಲ್ಲಿ ಕರ್ನಾಟಕ ಸಂಘಕ್ಕೆ ಹೊಸ ಕಟ್ಟಡ ಬರುವಾಗ ದೆಹಲಿ ಕರ್ನಾಟಕ ಸಂಘದಿಂದ ಕಾರ್ಯಕ್ರಮಗಳು ಕಡಿಮೆ ಆಗುತ್ತಿತ್ತು, ಕಾರಣವೇನೆಂದರೆ ಪಡೆದ ಸಾಲದ ಮರುಪಾವತಿ EMI ಬ್ಯಾಂಕಿಗೆ ಹೋಗಬೇಕಾಗಿತ್ತು. ಈಗ ಸಂಘವು ಸಾಲ ಮುಕ್ತವಾಗಿದೆ, ಕಾರ್ಯಕ್ರಮಗಳು ಸಹಾ ಅತಿ ಹೆಚ್ಚಾಗಿ ನಡೆಯುತ್ತಿವೆ. ಇನ್ನು ಒಂದು ಒಳ್ಳೆಯ ಜಾಗವನ್ನು ಸಹ ದೆಹಲಿ ಕರ್ನಾಟಕ ಸಂಘಕ್ಕೆ ಪಡೆದುಕೊಳ್ಳಲು ಮಾಡುತ್ತಿರುವ ಪ್ರಯತ್ನಗಳಿಗೆ, ಶುಭವಾಗಲಿ ಎಂದರು.














ಸಂವಾದದಲ್ಲಿ ಭಾಗಿಯಾದ ಸಂಘದ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಎಸ್. ಕಲ್ಲೂರ್‌ರವರು ಮಾತನಾಡುತ್ತಾ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡವನ್ನು ಬೆಳೆಸುವ, ಕನ್ನಡವನ್ನು ಉಳಿಸುವ ಕನ್ನಡತನವನ್ನು ಸತತವಾಗಿ ನಾನು ಸುಮಾರು 47 ವರ್ಷಗಳಿಂದ ಕರ್ನಾಟಕ ಸಂಘದಲ್ಲಿ ನೋಡಿಕೊಂಡು ಬಂದಿದ್ದೇನೆ, ಹಿರಿಯ ಸದಸ್ಯನಾಗಿ ಇಲ್ಲೇ ನಿವೃತ್ತಿ ಪಡೆದುಕೊಂಡಿದ್ದೇನೆ. ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರಾದ ಮಾಜಿ ಅಧ್ಯಕ್ಷರಾದ ದಿ. ಶ್ರೀ ಕೆ.ಆರ್. ನಾಗರಾಜ್ ಮತ್ತು ಕೆ.ಎಫ್.ಸಿ.ಯ ಶ್ರೀ ಶೇಖರ್ ಬಂಗೇರರವರನ್ನು ನೆನೆಯುತ್ತಾ ಸಂಘಕ್ಕೆ ತುಂಬಾ ಸಮಯವನ್ನು ನೀಡಿದ ಹಲವಾರು ಪದಾಧಿಕಾರಿಗಳನ್ನು ನೆನಪಿಸಿಕೊಂಡರು. ಪ್ರಸ್ತುತ ಅಧ್ಯಕ್ಷರು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವವನ್ನು ಅತ್ಯಂತ ಸಂಭ್ರಮದಿಂದ ವಿಜೃಂಭಣೆಯಿಂದ ಮಾಡಿರುವುದು ನಮಗೆಲ್ಲರಿಗೂ ಖುಷಿ ತಂದಿದೆ. ಈ 75 ವರ್ಷ ತುಂಬಿದ ಸಂದರ್ಭದಲ್ಲಿ ಹಿರಿಯರನ್ನ ಗೌರವಿಸಿರುವುದು ಶ್ಲಾಘನೀಯ ಎಂದರು. ಜೊತೆಗೆ ಮಾನ್ಯ ಪ್ರಧಾನ ಮಂತ್ರಿಗಳು ಎರಡು ಗಂಟೆಗಳಿಗೂ ಹೆಚ್ಚು ಸಮಯ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ನೀಡಿರುವುದನ್ನು ಸ್ಮರಿಸಿದರು. ಬರುವ ನೂರನೇ ವರ್ಷದ ಕಾರ್ಯಕ್ರಮದಲ್ಲೂ ಸಹ ತಾನು ಭಾಗಿಯಾಗುತ್ತೇನೆ, ನಾನು ಅಲ್ಲಿಯವರೆಗೂ ಇರುತ್ತೇನೆ ಆಗ ನನ್ನನ್ನು ಕರೆಯಿರಿ ಎಂದು ಹೇಳಿದರು. ಜೊತೆಗೆ ಅಮೃತ ಮಹೋತ್ಸವ ಇತಿಹಾಸದಲ್ಲಿ ಉಳಿಯುವಂತಹ ಕಾರ್ಯಕ್ರಮವನ್ನು ಮಾಡಿರುವ ಪ್ರಸ್ತುತ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸಿದರು.

ಹಿರಿಯ ದೆಹಲಿ ಕನ್ನಡತಿ, ಸಂಘದ ಹಿರಿಯ ಸದಸ್ಯೆ ಹಾಗೂ ಮಾಜಿ ಉಪಾಧ್ಯಕ್ಷೆಯಾದ ಶ್ರೀಮತಿ ಡಾ. ಅಹಲ್ಯಾ ಚಿಂತಾಮಣಿ ಅವರು ಮಾತನಾಡಿ ಕರ್ನಾಟಕ ಸಂಘದ ಜೊತೆ ಬಂದಂತ ಸಂಬಂಧಗಳನ್ನು, ಕಾರ್ಯಕಾರಿ ಸಮಿತಿಯಲ್ಲಿ ಪಡೆದ ಅನುಭವಗಳನ್ನು, ಮಾಡಿದ ಕಾರ್ಯಗಳನ್ನು ಕಳೆದ ದಿನಗಳನ್ನು ಮೆಲುಕು ಹಾಕುತ್ತಾ ದೆಹಲಿ ಕರ್ನಾಟಕ ಸಂಘ, ಈಗಿನ ಅಧ್ಯಕ್ಷರ ಸಮಯದಲ್ಲಿ ಉತ್ತಮ ಕಾರ್ಯಕ್ರಮವನ್ನು ಆಯೋಜಿಸಿಕೊಂಡು ಹೋಗುತ್ತಿದೆ, ಅದು ಇಲ್ಲಿನ ಕನ್ನಡಿಗರಿಗೆ ಸದಾ ಆಶ್ರಯ ತಾಣವಾಗಿರಲಿ, ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಇನ್ನೋರ್ವ ಹಿರಿಯ ದೆಹಲಿ ಕನ್ನಡಿಗ, ಸಾಮಾಜಿಕ ಸುಧಾರಣ ಪ್ರಗತಿಶೀಲ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಉಪಾಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ ಒಬ್ಬ ಕನ್ನಡದ ಮಗುವಾಗಿ ತಾವು 1974 ರಲ್ಲಿ ದೆಹಲಿಗೆ ಬಂದು ಕಳೆದ 50 ವರ್ಷಗಳ ತಮ್ಮ ದೆಹಲಿಯಲ್ಲಿನ ಜೀವನ, ದೆಹಲಿ ಕರ್ನಾಟಕ ಸಂಘದೊಡಗಿನ ಒಡನಾಟ, ಪಡೆದ ಅನುಭವಗಳನ್ನು ಹಂಚಿಕೊಂಡರು. 1977ರಲ್ಲಿ ಸಂಘದ ಹಿಂದಿನ ಕಟ್ಟಡ ಉದ್ಘಾಟನೆಯಾದ ಸಂದರ್ಭ, ಮಾಜಿ ಉಪ ರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿ ಅವರ ಜೊತೆ ಸಂಘಕ್ಕೆ ಮೊದಲ ಬಾರಿಗೆ ಭೇಟಿ ನೀಡಿದ್ದನ್ನು ನೆನಪಿಸಿಕೊಂಡರು. ದೆಹಲಿ ಕರ್ನಾಟಕ ಸಂಘವು ಪ್ರಸ್ತುತ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರ ಕಾಲಾವಧಿಯಲ್ಲಿ ಅತ್ಯಂತ ಉತ್ತಮ ಕೆಲಸಗಳನ್ನು ಮಾಡುತ್ತಿದೆ, ದೆಹಲಿಯ ಲಾಜಪತ್ ನಗರದ ಸಮೀಪ ಶ್ರೀನಿವಾಸಪುರಿಯಲ್ಲಿ ಮತ್ತು ಆರ್. ಕೆ. ಪುರಂನಲ್ಲಿ ಹಾಗೂ ಸಂಘದಲ್ಲಿ ನಡೆಯುತ್ತಿರುವ ಕನ್ನಡ ಕಲಿಕಾ ಕೇಂದ್ರದಲ್ಲಿ ಉತ್ತಮ ಸಂಖ್ಯೆಯಲ್ಲಿ ಕನ್ನಡಿಗರ ಮಕ್ಕಳು ಕನ್ನಡವನ್ನು ಕಲಿಯುತ್ತಿದ್ದಾರೆ, ನೃತ್ಯ ಮತ್ತು ಸಂಗೀತ ತರಬೇತಿಗಳನ್ನು ಸಹ ಕನ್ನಡ ಮಕ್ಕಳಿಗೆ ಸಂಘದಲ್ಲಿ ನಡೆಯುತ್ತಿರುವ ಶಿಬಿರಗಳಲ್ಲಿ ನೀಡಲಾಗುತ್ತಿದೆ. ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ದೇಶದ ಹೆಮ್ಮೆಯ ಪ್ರಧಾನಿಯವರನ್ನು ಕಾರ್ಯಕ್ರಮಕ್ಕೆ ಕರೆಸಿ ಅತ್ಯಂತ ಅರ್ಥಪೂರ್ಣವಾಗಿ, ವಿಜೃಂಭಣೆಯಿಂದ ಆಚರಣೆ ಮಾಡಿದ್ದಾರೆ. ಶ್ರೀ ಸಿ.ಎಂ. ನಾಗರಾಜ ಮತ್ತು ಅವರ ಕಾರ್ಯಕಾರಿ ಸಮಿತಿಯ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಇಂದು ತಮ್ಮ ಜೊತೆ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಎಲ್ಲಾ ಹಿರಿಯ ಕನ್ನಡಿಗರಿಗೆ ಹಿಂದಿನ ಅಧ್ಯಕ್ಷರೂ ಮತ್ತು ಪದಾಧಿಕಾರಿಗಳಿಗೆ ಶುಭಾಶಯಗಳನ್ನು ತಿಳಿಸುತ್ತೇನೆ ಎಂದರು.

ಸಂವಾದದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಅಮೃತ ಮಹೋತ್ಸವ ಕಾಲದಲ್ಲಿ ಇಡೀ ವರ್ಷ ದೆಹಲಿ ಕರ್ನಾಟಕ ಸಂಘಕ್ಕೆ ಸರಿಸುಮಾರು 2,500 ಕಲಾವಿದರು ಬಂದು ಹೋಗಿದ್ದಾರೆ ಕರ್ನಾಟಕದ ಹಳ್ಳಿ ಹಳ್ಳಿಯಿಂದ ದೆಹಲಿಗೆ ಬಂದು ಸಂಘದ ವೇದಿಕೆಯಲ್ಲಿ ಕಾರ್ಯಕ್ರಮವನ್ನು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದಲ್ಲಿ ರಾಜ್ಯದ ಕಲಾವಿದರನ್ನು ಮೂಲೆ ಮೂಲೆಯಿಂದ ಕರೆಸಿ, ಎಲ್ಲಾ ಜಿಲ್ಲೆಗಳನ್ನೊಳಗೊಂಡ ಎಂಟು ಜಿಲ್ಲಾವಾರು ಕಾರ್ಯಕ್ರಮಗಳನ್ನು ಮಾಡುವ ಮೂಲಕ ನಾಡಿನ ಪ್ರತಿ ಭಾಗಗಳಿಗೂ ಆದ್ಯತೆ ನೀಡಿದ್ದೇವೆ. ಅಮೃತ ಮಹೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಬಂದು ಕಾರ್ಯಕ್ರಮವನ್ನು ವೀಕ್ಷಣೆ ಮಾಡಿ ಅತ್ಯಂತ ಹೆಚ್ಚಿನ ಸಮಯ ನೀಡಿ, ದೆಹಲಿ ಕರ್ನಾಟಕ ಸಂಘವನ್ನು, ಸಂಘದ ಕಾರ್ಯಕ್ರಮಗಳನ್ನು ಹಾಡಿ ಹೊಗಳಿ ಹೋಗಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಖರ್ಚು ವೆಚ್ಚಗಳು ಕೋಟ್ಯಾಂತರ ರೂಪಾಯಿಗಳು ಆಗಿದ್ದರೂ ಸಹ ದೆಹಲಿ ಕರ್ನಾಟಕ ಸಂಘದ ಖಜಾನೆಯಿಂದ ಒಂದು ರೂಪಾಯಿಯನ್ನು ಸಹ ತೆಗೆಯದೆ ಎಲ್ಲವನ್ನು ದೇಣಿಗೆ ಮುಖಾಂತರ ತಂದು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಜೊತೆಗೆ ದೇಣಿಗೆಯಿಂದ ತಂದ ಹಣದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಈ ಅಮೃತ ಮಹೋತ್ಸವ ವರ್ಷದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಹೊಸ ಜಾಗಕ್ಕಾಗಿ ಮೀಸಲಿಟ್ಟಿದ್ದೇವೆ ಎಂದು ಸದಸ್ಯರುಗಳಿಗೆ ಮತ್ತು ಹಿರಿಯರಿಗೆ ಸಂವಾದದಲ್ಲಿ ತಿಳಿಸಿದರು. ಈಗಾಗಲೇ ಪಕ್ಕದ ನೋಯಿಡಾ ಅಥವಾ ಹರಿಯಾಣದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಜಾಗವನ್ನು ನೋಡುತ್ತಿದ್ದೇವೆ. ಗ್ರೇಟರ್ ನೋಯಿಡಾ ಪ್ರಾಧಿಕಾರದ ಸಿ.ಇ.ಒ. ಆಗಿ ಕನ್ನಡಿಗ ಮಾನ್ಯ ಶ್ರೀ ಎನ್.ಜಿ. ರವಿಕುಮಾರ್ ಐ.ಎ.ಎಸ್ ಅವರು ಈಗ ಬಂದಿದ್ದಾರೆ. ಇವರೆಲ್ಲರ ಸಹಕಾರದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಆದಷ್ಟು ಬೇಗನೇ ಒಂದು ಹೊಸ ಜಾಗವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಮುಂದೆಯೂ ಇಲ್ಲಿನ ಕನ್ನಡಿಗರಿಗೆ ಅನುಕೂಲವಾಗುವಂತಹ ಹಲವಾರು ಕಾರ್ಯಕ್ರಮಗಳು ಆಗಲಿವೆ ಎಂದು ಅಧ್ಯಕ್ಷರು ತಿಳಿಸಿದರು. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಹಿರಿಯರಾದಂತಹ ಹಿಂದಿನ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿಗಳು ಮತ್ತು ಹಿಂದಿನ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಮಾಡಿರುವ ಕೆಲಸಗಳನ್ನ ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಮಾಜಿ ಅಧ್ಯಕ್ಷರು ಶ್ರೀ ನರಹರಿ ರಾವ್ ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್, ಕರ್ನಾಟಕದ ಪ್ರಥಮ ಮುಖ್ಯಮಂತ್ರಿ, ಶ್ರೀ ಕೆ ಸಿ ರೆಡ್ಡಿ, ಮಾಜಿ ಅಧ್ಯಕ್ಷೆ ಶ್ರೀಮತಿ ಡಾ. ಸರೋಜಿನಿ ಮಹಿಷಿ, ಮಾಜಿ ಅಧ್ಯಕ್ಷರುಗಳಾದ ಶ್ರೀ ಕೆ.ಆರ್. ನಾಗರಾಜ, ಶ್ರೀ ಜಿ.ವೈ. ಕೃಷ್ಣನ್, ಶ್ರೀ ಐ. ರಾಮಮೋಹನ್ ರಾವ್ ಡಾ. ಪುರುಷೋತ್ತಮ ಬಿಳಿಮಲೆ, ಡಾ. ವಿ.ಜಿ. ಹೆಗಡೆ, ಶ್ರೀ ಬೆಳ್ಳಾರೆ, ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಸರವು ಕೃಷ್ಣ ಭಟ್ ಅವರುಗಳ ಶ್ರಮ ಮತ್ತು ಸಹಕಾರದಿಂದ ಈ ಮಟ್ಟಕ್ಕೆ ಬೆಳೆದು ನಿಂತಿರುವ ಸಂಘದ ಬಗೆಗೆ ಹೆಮ್ಮೆಯ ಮಾತುಗಳನ್ನು ಹೇಳಿದರು. ಸರಿಸುಮಾರು ಒಂದು ಮುಕ್ಕಾಲು ಗಂಟೆ ಅತ್ಯುತ್ತಮವಾಗಿ ಮೂಡಿ ಬಂದ ಸಂವಾದ ಕಾರ್ಯಕ್ರಮದಲ್ಲಿ ಕೆಲವು ಸಂಘ ಸಂಸ್ಥೆಗಳ ಅಧ್ಯಕ್ಷರ ಉಪಸ್ಥಿತಿಯನ್ನು ಉಲ್ಲೇಖಿಸುತ್ತಾ, ಜನಕಪುರಿ ಕನ್ನಡ ಕೂಟದಿಂದ ಅಧ್ಯಕ್ಷ ಶ್ರೀ ಎನ್. ಆರ್. ಶ್ರೀನಾಥ್, ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ ಅಧ್ಯಕ್ಷರಾದ ಶ್ರೀ ದೇವೇಂದ್ರಪ್ಪ, ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಅನಂತರಾಮ ಅರಳಿ, ಜನಕಪುರಿ ಮಹಿಳಾ ಮಂಡಳಿಯ ಶ್ರೀಮತಿ ಸವಿತಾ ಇನಾಮ್ದಾರ್, ಗುರುಗ್ರಾಮ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ, ಹಾಗು ಇನ್ನು ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಂಘದ ಆಜೀವ ಸದಸ್ಯರು ಅನೇಕ ದೆಹಲಿ ಹಿರಿಯ ಕನ್ನಡಿಗರು, ಮಹಿಳೆಯರು ಮತ್ತು ಮಕ್ಕಳು ಬಂದು ಇಂದಿನ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ ಅವರೆಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಹೇಳಿದರು.

ಈ ಸಂವಾದ ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಅತ್ಯಂತ ಸುಂದರವಾಗಿ ನಿರ್ವಹಿಸಿದರು. ಸಂಘದ ಅಹ್ವಾನವನ್ನು ಸ್ವೀಕರಿಸಿ, ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾದ ಹಿರಿಯ ಕನ್ನಡಿಗರಿಗೆ, ಸಂಘದ ಮಾಜಿ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಖಜಾಂಚಿಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದ ಎಲ್ಲ ಹಿರಿಯ ಕನ್ನಡಿಗರಿಗೆ ಮತ್ತು ಸಭಾಂಗಣದಲ್ಲಿ ಅಸೀನರಾಗಿದ್ದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

***ಅಭಿಮತ ವರದಿ***

ದೆಹಲಿ ಕರ್ನಾಟಕ ಸಂಘ ಮತ್ತು ಕ.ರಾ. ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಸಹಯೋಗದಲ್ಲಿ

# ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸಿದ ಕಾರ್ಯಾಗಾರ

ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ಇವುಗಳ ಸಂಯುಕ್ತ ಆಶ್ರಯದಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ನ ಗುರುಗ್ರಾಮ, ಭಿವಾಡಿ ಭಾಗದಲ್ಲಿ ನೆಲೆಸಿರುವಂತಹ ಕನ್ನಡ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 16.07.2023 ರವಿವಾರದಂದು ಬೆಳಿಗ್ಗೆ 9ರಿಂದ ಸಂಜೆ 5.30ರವರೆಗೆ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಾಗಾರವು ಅಭೂತಪೂರ್ವ ಯಶಸ್ಸು ಕಂಡಿತು. 101 ಕನ್ನಡ ಮಕ್ಕಳು ತಮ್ಮ ಪಾಲಕರೊಂದಿಗೆ ಅತ್ಯಾಸಕ್ತಿಯಿಂದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಸಾಹಿತ್ಯ, ಸಂಗೀತ, ಅಭಿನಯ, ನೃತ್ಯ ಮತ್ತು ಚಿತ್ರಕಲೆಗಳ ಬಗೆಗೆ ಸಂಬಂಧಪಟ್ಟ ಸಂಪನ್ಮೂಲ ವ್ಯಕ್ತಿಗಳು ನೀಡಿದ ತರಬೇತಿಯಿಂದ ತಮ್ಮ ಆಸಕ್ತ ವಿಷಯಗಳ ಬಗೆಗೆ ಅನೇಕ ಮಾಹಿತಿ ತಿಳಿದು ಕಲಿತುಕೊಂಡರು.



ಒಂದು ದಿನದ ಕಾರ್ಯಾಗಾರವನ್ನು ಕೇಂದ್ರ ಮಂತ್ರಿಗಳ ಆಪ್ತ ಕಾರ್ಯದರ್ಶಿ ಶ್ರೀ ಅಮರೇಶ್ ಪಾಟೀಲ್ ಐ. ಆರ್. ಎಸ್. ಅವರು ಉದ್ಘಾಟಿಸಿ ವಿದ್ಯುಕ್ತವಾಗಿ ಚಾಲನೆ ನೀಡಿ ದೆಹಲಿ ಕರ್ನಾಟಕ ಸಂಘ ಮತ್ತು ಪರಿಷತ್ತು ಒಂದು ಒಳ್ಳೆಯ ಮುನ್ನೋಟವನ್ನು ಇಟ್ಟುಕೊಂಡು ಇಂತಹ ಕನ್ನಡದ ಕಾರ್ಯಕ್ರಮ ಆಯೋಜಿಸುತ್ತಿರುವುದು ಬಹಳ ಸಂತೋಷ. ಜಗತ್ತಿಗೆ ಆಕಾರ ಕೊಡುವವರು ಮಕ್ಕಳು. ಮಕ್ಕಳು ಹೇಗೆ ಬೆಳೆಯುತ್ತಾರೆ ಎಂಬುದರ ಮೇಲೆ ದೇಶದ ಭವಿಷ್ಯ ನಿರ್ಧಾರವಾಗುತ್ತದೆ. ಅವಕಾಶ, ಪ್ರತಿಭೆ, ವೇದಿಕೆ ಇವೆಲ್ಲವುಗಳ ಮಧ್ಯೆ ನಾವೆಲ್ಲರೂ ಮೌಲ್ಯ, ಸಂಸ್ಕಾರಕ್ಕೆ ಒತ್ತು ನೀಡಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಾರ್ಯಾಗಾರಕ್ಕೆ ಶುಭಹಾರೈಸಿದರು.

ನುರಿತ ಸಂಪನ್ಮೂಲ ವ್ಯಕ್ತಿಗಳಾದಂತಹ ಕವಯಿತ್ರಿ ಶ್ರೀಮತಿ ಪವಿತ್ರಾ ತಮಣ್ಣರ್, ಶಾಸ್ತ್ರೀಯ ಸಂಗೀತ ಕಲಾವಿದೆ ವಿದ್ವಾನ್ ಶ್ರೀಮತಿ ಶುಭಾ ದೇವಿಪ್ರಸಾದ್, ರಾಷ್ಟ್ರೀಯ ನಾಟಕ ಶಾಲೆ ನವದೆಹಲಿಯ ಕಲಾತ್ಮಕ ನಿರ್ದೇಶಕಿ ಶ್ರೀಮತಿ ಮಿತಾ ಮಿಶ್ರ, ಹಾಗೂ ವರ್ಣಚಿತ್ರ ಕಲಾವಿದೆ ಶ್ರೀಮತಿ ಮೀನಾಕ್ಷಿ ಅವರಿಂದ ಮಕ್ಕಳಿಗೆ ಸಾಹಿತ್ಯ, ಸಂಗೀತ, ಅಭಿನಯ ಹಾಗೂ ಚಿತ್ರಕಲೆ ಕುರಿತಾದ ವಿಶೇಷ ತರಬೇತಿಯನ್ನು ನೀಡಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷ ಸರವು ಕೃಷ್ಣ ಭಟ್ ಅವರು ಸಂಜೆ ನಡೆದ ಕಾರ್ಯಕ್ರಮದಲ್ಲಿ ಸಮಾರೋಪ ಭಾಷಣ ಮಾಡುತ್ತಾ ಹೊರನಾಡಿನಲ್ಲಿ ಮಕ್ಕಳನ್ನು ಒಗ್ಗೂಡಿಸಿ ಅವರಲ್ಲಿರುವ ಪ್ರತಿಭೆಯನ್ನು ಹೊರ ತರಬೇಕು ಎಂದು ಸಾಹಿತ್ಯ ಪರಿಷತ್ತನ್ನು ನಿರ್ಮಾಣ ಮಾಡಿದ್ದು. ಕರುನಾಡಿನಲ್ಲಿ ಸಾಹಿತ್ಯ ಪರಿಷತ್ತನ್ನು ನಡೆಸುವುದು ಕಷ್ಟದ ಕೆಲಸವಲ್ಲ. ಅಲ್ಲಿರುವ ಪರಿಸರ, ಜನಸಂಖ್ಯೆ ಅದನ್ನು ಬೆಳೆಸೋದಕ್ಕೆ ಅವಕಾಶ ನೀಡುತ್ತದೆ. ಆದರೆ ಎಲ್ಲೋ ಇದ್ದ ಕನ್ನಡಿಗರನ್ನು ಜೊತೆಗೂಡಿಸಿಕೊಂಡು ಆ ಸಾಹಿತ್ಯ ಪರಿಷತ್ತಿನ ಘಟಕವನ್ನು ದೆಹಲಿಯಲ್ಲಿ ಸ್ಥಾಪಿಸಿಕೊಂಡು, ಮಕ್ಕಳನ್ನು ಒಟ್ಟು ಸೇರಿಸಿಕೊಂಡು, ಅವರಿಗಾಗಿ ತಮ್ಮ ಸಮಯವನ್ನು ನೀಡಿಕೊಂಡು ಮಕ್ಕಳನ್ನು ಪ್ರೋತ್ಸಾಹಿಸುವ, ಅವರ ಪ್ರತಿಭೆಯನ್ನು ಬೆಳಕಿಗೆ ತರುತ್ತಿರುವ ದೆಹಲಿ ಘಟಕವು ಮಾದರಿಯಾಗಿದೆ. ಅಭಿನಂದನೆಗಳು. ವಿಶ್ವದಲ್ಲಿಯೇ ತನ್ನದೇ ಆದ ಅಸ್ಮಿತೆಯನ್ನು ಪಡೆದುಕೊಂಡ ದೆಹಲಿ ಕರ್ನಾಟಕ ಸಂಘವು ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳಿಗೆ ಸಹಕಾರ ನೀಡುತ್ತಿರುವುದು, ಸಾಹಿತ್ಯ ಪರಿಷತ್ತಿಗೆ ಆಶ್ರಯ ಕಲ್ಪಿಸಿರುವುದು ಅಭಿನಂದನೀಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಹಿರಿಯ ಐ. ಪಿ. ಎಸ್. ಅಧಿಕಾರಿ ಶ್ರೀ ರಾಜಶೇಖರ್ ಎನ್. ಅವರು ಕನ್ನಡ ನಾಡುನುಡಿಯನ್ನು ಪ್ರತಿಧ್ವನಿಸುವ ಈ ಕಾರ್ಯಕ್ರಮಕ್ಕೆ ಮಕ್ಕಳನ್ನು ಕರೆತಂದ ಪೋಷಕರ ಕಾರ್ಯ ಅನುಕರಣೀಯ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ತೆರೆದುಕೊಳ್ಳುವುದಕ್ಕೆ ಇಂತಹ ವೇದಿಕೆಗಳು ಪೂರಕವಾಗುವುದು. ನಮ್ಮ ಮಕ್ಕಳಲ್ಲಿ ಕನ್ನಡದಲ್ಲಿ ಬರೆಯುವ ಮತ್ತು ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಕನ್ನಡ ಸಿನಿಮಾಗಳ ವೀಕ್ಷಣೆ, ರಸಪ್ರಶ್ನೆ, ಭಾವಗೀತೆ, ಆಶುಭಾಷಣ ಮುಂತಾದ ನಿರಂತರ ಚಟುವಟಿಕೆ, ಸ್ಪರ್ಧೆಗಳು ಮಕ್ಕಳಲ್ಲಿ ಕನ್ನಡ ಭಾಷಾಭಿಮಾನವನ್ನು ಬೆಳೆಸಲು ಸಹಾಯಕವಾಗುವುದು. ಮಕ್ಕಳ ಮೆದುಳಲ್ಲಿ ಅದ್ಭುತವಾದ ಶಕ್ತಿಯಿದೆ. ಈ ಮೂಲಕ ಅವರಲ್ಲಿರುವ ಚೈತನ್ಯವನ್ನು ಪ್ರೋತ್ಸಾಹಿಸಿ ಅವರನ್ನೇ ಆಸ್ತಿಯಾಗಿ ಮಾಡೋಣ ಎಂದು ಹೇಳಿದರು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪ ಎಂ. ಅವರು ಮಾತನಾಡಿ ಹೊಟ್ಟೆಪಾಡಿಗಾಗಿ ಹೊರನಾಡಿಗೆ ಬಂದಂತಹ ನಾವುಗಳು ಕನ್ನಡ ನಾಡಿನ ಕಲೆ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕಾರ್ಯವನ್ನು ಮಾಡುತ್ತಿದ್ದೇವೆ. ಇದನ್ನು ಮುಂದುವರಿಸುವ ಜವಾಬ್ದಾರಿಯನ್ನು ಮಕ್ಕಳಿಗೆ ಇಂತಹ ಕಾರ್ಯಕ್ರಮ, ಚಟುವಟಿಕೆಗಳ ಮೂಲಕ ನೀಡುತ್ತಿದ್ದೇವೆ. ಮಕ್ಕಳು ಪೂರ್ತಿ ದಿನ ಲವಲವಿಕೆಯಿಂದ ಈ ಕಾರ್ಯಾಗಾರದಲ್ಲಿ ಭಾಗವಹಿಸಿರುವುದು ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದೆ ಎಂದರು.

ಇನ್ನೋರ್ವ ಅತಿಥಿ ಭಿವಾಡಿ ಕನ್ನಡ ಸಂಘ ಸೊಸೈಟಿಯ ಅಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ಅವರು ಮಕ್ಕಳು ಯಶಸ್ಸನ್ನು ಪಡೆಯಲು ಒಂದು ಗುರಿಯಿರಬೇಕು. ಈ ಗುರಿ ತಲುಪಲು ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಹೊರನಾಡಿನಲ್ಲಿ ಮಕ್ಕಳು ಕಲಿಕೆಯ ಜೊತೆಗೆ ಭಾಷಾಭಿಮಾನ, ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಳ್ಳುತ್ತಿರುವುದು ಹೆಮ್ಮೆಯ ವಿಚಾರ ಎಂದು ಹೇಳುತ್ತಾ ಭಾಗವಹಿಸಿದ ಮಕ್ಕಳಿಗೆ ಶುಭ ಹಾರೈಸಿದರು.



ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರು **'ಬೆಳೆವ ಸಿರಿ ಮೊಳಕೆಯಲ್ಲಿ'** ಎನ್ನುವ ನಾಣ್ನುಡಿಯಂತೆ ನಾವು ಬೆಳೆಸಿದಂತೆ ನಮ್ಮ ಮಕ್ಕಳು. ಮಕ್ಕಳನ್ನು ದೇವರೆಂದು ಪೂಜಿಸುವುದು, ಮುದ್ದು ಮಾಡುವುದು, ಬುದ್ಧಿ ಕಲಿಸುವುದು, ವಿದ್ಯೆ ನೀಡುವುದು ಇವೆಲ್ಲವೂ ಪ್ರತಿ ಹೆತ್ತವರ ಆದ್ಯ ಕರ್ತವ್ಯವಾಗಿದೆ. ಆದರೆ ಸವಾಲಿರುವುದು ನಾವು ನಮ್ಮ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಅರಿತುಕೊಂಡಿದ್ದೇವೆಯೇ? ಅಥವಾ ಆ

ಪ್ರತಿಭೆಗಳಿಗೆ ವೇದಿಕೆಯನ್ನು ಒದಗಿಸುತ್ತಿದ್ದೇವೆಯೇ? ಎನ್ನುವುದು. ಇಂತಹ ವೇದಿಕೆಯನ್ನು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕ ಹೊರನಾಡಿನಲ್ಲಿ ಮಕ್ಕಳಿಗಾಗಿ ಒದಗಿಸುತ್ತಿರುವುದು ಅಭಿನಂದನೀಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಸುಮಾರು ಐದು ವರ್ಷಗಳಿಂದ ಹಲವಾರು ಸೃಜನಾತ್ಮಕ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಭಾಷಾಭಿಮಾನದ ಜೊತೆಗೆ ಸಾಹಿತ್ಯ ಅಭಿರುಚಿಯನ್ನು ಪರಿಷತ್ತು ಬೆಳೆಸುತ್ತಿದೆ. ಶಾಲೆ, ಪಠ್ಯ ಇದರ ಹೊರತಾದ ಒಂದು ಹೊಸ ಅನುಭವ ಪ್ರಪಂಚದಲ್ಲಿ ತೇಲಾಡಲು ಸದಾವಕಾಶವನ್ನು ಪರಿಷತ್ತು ಮಕ್ಕಳಿಗಾಗಿ ಒದಗಿಸುತ್ತ ಬರುತ್ತಿದೆ. ಇಂದು 101 ಮಕ್ಕಳು ಭಾಗವಹಿಸಿದ ಈ ಕಾರ್ಯಾಗಾರ ತಮಗೆ ಅತ್ಯಂತ ಸಂತೋಷ ತಂದಿದೆ. ಇದರ ಸದುಪಯೋಗವನ್ನು ಪಡೆಯುವಂತೆ ಪೋಷಕರು ಮಕ್ಕಳನ್ನು ಇನ್ನಷ್ಟು ಪ್ರೇರೇಪಿಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ದೆಹಲಿ ಕರ್ನಾಟಕ ಸಂಘವು ಕನ್ನಡಪರ ಚಟುವಟಿಕೆಗಳನ್ನು ಸಂಘಟಿಸುವ ಸ್ಥಳೀಯ ಸಂಘ ಸಂಸ್ಥೆಗಳಿಗೆ ಸದಾ ಪ್ರೋತ್ಸಾಹವನ್ನು ನೀಡುತ್ತಾ ಬರುತ್ತಿದೆ. ಈ ನೆಲೆಯಲ್ಲಿ ಮಕ್ಕಳಿಗಾಗಿಯೇ ರೂಪಿತವಾದ ಒಂದು ದಿನದ ಕಾರ್ಯಾಗಾರಕ್ಕೆ ಮಕ್ಕಳ ಹಾಗೂ ಪೋಷಕರ ಪ್ರತಿಕ್ರಿಯೆಯನ್ನು ಕಂಡು ಸಂತೋಷವೆನಿಸುತ್ತಿದೆ. ರಾಷ್ಟ್ರ ರಾಜಧಾನಿಯಲ್ಲಿ ನೆಲೆಸಿರುವಂತಹ ಕನ್ನಡಿಗರ ಮಕ್ಕಳಿಗಾಗಿ ಸಂಘವು ಕೂಡ ಕನ್ನಡ ತರಗತಿ, ಸಂಗೀತ ಮತ್ತು ನೃತ್ಯ ತರಬೇತಿಗಳನ್ನು ಆಯೋಜಿಸುತ್ತಿದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೋಷಕರ ಜೊತೆ ಪರಿಷತ್ತು ಸಮಯವನ್ನು ನೀಡುತ್ತಿರುವುದು ಅಭಿಮಾನದ ಸಂಗತಿ. ಮುಂದಿನ ದಿನಗಳಲ್ಲಿ ಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುವ ಕನ್ನಡಪರ ಚಟುವಟಿಕೆಗಳನ್ನು ಸಂಘವು ಮುನ್ನೆಲೆಯಲ್ಲಿ ನಿಂತು ಮಾಡುತ್ತದೆ ಎಂದು ಹೇಳಿದರು.

ಕಾರ್ಯಾಗಾರದ ನಿರ್ದೇಶಕರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳು ತಮ್ಮ ಪ್ರತಿಭೆಯನ್ನು ವೇದಿಕೆಯಲ್ಲಿ ಪ್ರದರ್ಶಿಸಿದರು. ಬಳಿಕ ಮಕ್ಕಳಿಗೆ ಅತಿಥಿಗಳು ಪ್ರಮಾಣಪತ್ರ ವಿತರಿಸಿದರು. ಕಾರ್ಯಾಗಾರದ ಅದೃಷ್ಟ ವಿದ್ಯಾರ್ಥಿ ಚೀಟಿಯನ್ನು ಎತ್ತಿ ಮೂರು ಅದೃಷ್ಟದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಕಾರ್ಯಕ್ರಮವನ್ನು ಇನ್ನೋರ್ವ ಕಾರ್ಯಾಗಾರದ ನಿರ್ದೇಶಕರಾದ ಶ್ರೀ ಕೆ.ಎಸ್. ಮೂರ್ತಿ ಅವರು ನಡೆಸಿಕೊಟ್ಟರು.

ಪರಿಷತ್ತಿನ ಗೌರವ ಖಜಾಂಚಿ ಶ್ರೀ ರಾಮಚಂದ್ರ ಉಭಾಳೆ ಗೌರವ ಉಪಸ್ಥಿತರಿದ್ದರು. ಕರ್ನಾಟಕ ಭವನದ ಶಿಷ್ಟಾಚಾರ ವಿಭಾಗದ ವ್ಯವಸ್ಥಾಪಕ ಶ್ರೀ ಬಿ.ವಿ. ರಾಘವೇಂದ್ರ ಅವರು ಕಾರ್ಯಾಗಾರಕ್ಕೆ ವಿಶೇಷ ಸಹಕಾರ ನೀಡಿದರು.

ಪ್ರಾರ್ಥನೆ, ನಾಡಗೀತೆ, ರೈತಗೀತೆಯನ್ನು ಪರಿಷತ್ತಿನ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಪರಿಷತ್ತಿನ ಅಧ್ಯಕ್ಷ ಶ್ರೀ ಅರವಿಂದ ಬಿಜ್ಜೈ ಪ್ರಾಸ್ತಾವಿಕ ನುಡಿಗೈದರು. ಪರಿಷತ್ತಿನ ಕೇಂದ್ರ ಘಟಕದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಅರುಣ್ ಸಿ.ಎಸ್. ಪರಿಷತ್ತಿನ ಕುರಿತು ಆಶಯ ನುಡಿಗಳನ್ನಾಡಿದರು. ಕು। ನಂದಿತಾ ಉಭಾಳೆ, ಸಂಚಿತಾ ನೀಲೂರು ಸ್ವಾಗತಿಸಿದರು. ಸಾತ್ವಿಕ್ ಎನ್., ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀಮತಿ ರತ್ನ ವಂದನಾರ್ಪಣೆ ಮಾಡಿದರು. ಕು। ಸಾಯಿಶ್ರೀ ದೇಸಾಯಿ, ಕು। ನೀಕ್ಷಿತ್, ಕು। ಅಪೇಕ್ಷಾ ಕಾರ್ಯಕ್ರಮ ನಿರೂಪಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಪ್ರಭಾಕರ ಮಡ್ಡಿತೋಟ್, ಶ್ರೀಮತಿ ಸವಿತಾ ನೆಲ್ಲಿ, ಪರಿಷತ್ತಿನ ಸಂಚಾಲಕರುಗಳಾದ ಶ್ರೀ ಗೋಪಾಲಕೃಷ್ಣ ಭಟ್, ಶ್ರೀ ಕೃಷ್ಣರಾಜ್ ಕೆ.ಎನ್., ಸಂಘಟನಾ ಕಾರ್ಯದರ್ಶಿ ಶ್ರೀ ಯಲ್ಲಾಲಿಂಗ ಕೊಪ್ಪದ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ಸುಜಾತ ನಿಂಬಾಳ, ಶ್ರೀಮತಿ ವಿಮಲಾ ರಂಗನಾಥ್, ಶ್ರೀಮತಿ ನೇತ್ರಾ ಎಸ್. ಕುಮಾರ್, ಶ್ರೀಮತಿ ವರ್ಷಾ ಕುಲಕರ್ಣಿ, ಶ್ರೀ ನಾಗರಾಜ ಎಂ., ಪೂರ್ಣಿಮ ಅಡಿಗ ಕಾರ್ಯಕ್ರಮ ನಿರ್ವಹಣೆಯಲ್ಲಿ ಸಹಕರಿಸಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸದಸ್ಯರುಗಳು ಹಾಗು ಅಪಾರ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅತಿಥಿಗಳಿಗೆ ಪರಿಷತ್ತಿನ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು.

**ಅರವಿಂದ ಬಿಜ್ಜೈ**











**ಜುಲೈ 16,2023 ರಂದು ಕ.ರಾ. ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಸಹಯೋಗದಲ್ಲಿ ಸಂಘದಲ್ಲಿ ನಡೆದ ಕಾರ್ಯಾಗಾರದಲ್ಲಿ ಭಾಗವಹಿಸಿದ ಮಕ್ಕಳು**

**ಸಾಹಿತ್ಯ ವಿಭಾಗ-14 ಮಕ್ಕಳು**

1. ಸೃಜನ್ ಆರ್. 2. ಅಭಿರಾಮ್ ಎಂ. 3. ಸುಮಂತ್ ಆಚಾರ್ಯ 4. ಸಾತ್ವಿಕ್ ಎಚ್. ತೇಲಿ 5. ಸನ್ವಿತ್ ಸುವರ್ಣ 6. ನೀಕ್ಷಿತ್ ಕೆ. 7. ಮಧುಸೂದನ್ ಪೂಜಾರಿ 8. ಕವನ ನರಶೆಟ್ಟಿ 9. ಶ್ರೇಯಾಶ್ರೀ 10. ಅಪೇಕ್ಷಾ ಪಳನಿ 11. ಸುಜಿತ್ ಪಾಟೀಲ್ 12. ವಿಕಾಸ್ ಗೌಡ 13. ನಂದಿತಾ ಉಭಾಳೆ 14. ಕೆ. ಎಂ. ಅನರ್ಘ್ಯ

**ಅಭಿನಯ ವಿಭಾಗ-18 ಮಕ್ಕಳು**

1. ಪಿಯೂಷ್ ಕುಲಕರ್ಣಿ 2. ಅವನಿ ನೆಲ್ಲಿ 3. ಕಾರ್ತಿಕ್ ಆಚಾರ್ಯ 4. ಋಷಿ ಗೌಡ 5. ಭರತ್ 6. ಪ್ರೇಮ್ ಲದ್ದೆ 7. ಕೃಪಾ ಆರ್. ಎಂ. 8. ಹರ್ಷ ಸಂತೋಷ್ ಕೆ. 9. ಶ್ರೀಯಾ ಚಂದ್ರಶೇಖರ್ 10. ಕೃಷ್ಣ 11. ಸಾಯಿಶ್ರೀ ದೇಸಾಯಿ 12. ಶರಣ್ಯ ಎಂ. 13. ಪವನ್ ಕುಮಾರ್ ಎ. 14. ಅದ್ವಿಕ್ ಕೆ. ನಾಯಕ್ 15. ಭುವನ್ ಸೂರಜ್ 16. ಕಾವೇರಿ 17. ಕಲ್ಪನಾ 18. ಇಶಾಂತ್ ಗೌಡ

**ಸಂಗೀತ ವಿಭಾಗ-23 ಮಕ್ಕಳು**

1. ಆರ್ಯ ಬಿಜೈ 2. ವೇದಿಕಾ 3. ಜಯಶ್ರೀ 4. ಕಿರಣ್ 5. ಸುಶ್ಮಿತಾ ಸುವರ್ಣ 6. ಸ್ವಾತಿ ನಾಯಕ್ 7. ಸುದೀತಿ ಅಂಬಳೆ 8. ಅಧೋಕ್ಷಜಾ ವೆಂಕಟೇಶ್ 9. ಜೈನಬ್ 10. ಸಾನಿಧ್ಯ ಎಸ್. 11. ರಕ್ಷಾ ಕುರಕೋಟಿ 12. ನಾವಿಕಾ 13. ನೂತನ್ ಕೈಕಾಡೆ 14. ದೀಪ್ತಿ ಎಸ್. 15. ಹಿಮಾನ್ಶು 16. ತನುಶ್ರೀ 17. ಗೌರವ್ ಆರ್. 18. ಸಂಜನಾ ಎಸ್. ಪಾಟೀಲ್ 19. ಸೃಷ್ಟಿ ಪೂಜಾರಿ 20. ನಿಷ್ಠಾ ಪೂಜಾರಿ 21. ಆನಂದಿ ಗೌಡ 22. ನಿತಿನ್ ಕುಮಾರ್ 23. ಶಿಖಾ ಘಾಳೆ

**ಚಿತ್ರಕಲೆ ವಿಭಾಗ-46 ಮಕ್ಕಳು**

1. ಧನುಷ್ ಎನ್. 2. ವೈಷ್ಣವಿ ಕೆ. 3. ಶ್ರೀದಾ ಅಂಬಳೆ 4. ಅರ್ಜುನ್ ರಮೇಶ್ 5. ತಾರುಣಿ 6. ಅಂಕಿತಾ ಲದ್ದೆ 7. ಮೋನಿಷ್ಕಾ ಎಲ್. 8. ಸಿರಿ 9. ಎನ್. ಎಸ್. ಕೌಶಲ್ 10. ಎಲಿಷಾ ರಮೇಶ್ 11. ಶಾಶ್ವತ್ 12. ಓಶಿನ್ ಮುರಗೋಡ್ 13. ಅಧಿತಿ ಹಿರೇಮಠ 14. ವಿಧಿ ಕೊಠಾರಿ 15. ವಿಧಾನ್ ಕೊಠಾರಿ 16. ಹರ್ಷಿತಾ ಉಭಾಳೆ 17. ಆದ್ಯ ಹಿರೇಮಠ 18. ದಿವ್ಯ ಮದಲ್ಲಿ 19. ಮನುಶ್ರೀ 20. ಸೌಮ್ಯ ಎಸ್. 21. ಅನುಷ್ಕಾ 22. ಶ್ರೇಯಾ ಪ್ರಭಾಕರ್ 23. ಸಾನ್ವಿಕಾ ಎಸ್. 24. ತನ್ವಿ ನಾಡಿಗ್ 25. ಗಣೇಶ್ 26. ಸಿದ್ದಾರ್ಥ 27. ಶಶಾಂಕ್ ನಾಯಕ್ 28. ಆದಿತ್ಯ ಮೇತ್ರೆ 29. ಪೂರ್ವಿಕಾ ಕೆ. 30. ಹೇಮಾಶ್ರೀ 31. ಆಕಾಶ್ 32. ವಿವೇಕ್ ಬಿರಾದರ್ 33. ಹರ್ಷೀತ್ ರವಿಕುಮಾರ್ 34. ಮೊಹಮದ್ ಸಾಹಿಲ್ 35. ವೀರ್ ನರಶೆಟ್ಟಿ 36. ತಾನಿಯಾ 37. ಸಹನಾ 38. ಕೀರ್ತನಾ ಕಟ್ಟೀಮನಿ 39. ಸ್ನೇಹಾ 40. ಸಂಚಿತಾ ನೀಲೂರು 41. ಧನ್ವಿನ್ ಹರಿಪ್ರಿಯ 42. ಜೀವನ್ ರಾಜ್ 43. ಹಾರ್ದಿಕ್ 44. ಕೇಶವ್ 45 ಕವಿತಾ ಮೇತ್ರೆ 46.ಋತ್ವಿಕ್ ನೆಲ್ಲಿ

ಒಟ್ಟು 101 ಮಕ್ಕಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. **ಇವರೆಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಮತ್ತು ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಪರವಾಗಿ ಹಾರ್ದಿಕ ಅಭಿನಂದನೆಗಳು.**

# ಚಾಲುಕ್ಯ ವಂಶದ ಪ್ರಸಿದ್ಧ ಚಕ್ರವರ್ತಿ ದಕ್ಷಿಣಪಥೇಶ್ವರ 'ಇಮ್ಮಡಿ ಪುಲಿಕೇಶಿ'

ಇಮ್ಮಡಿ ಪುಲಿಕೇಶಿ ಎಂದು ಕರೆಯಲ್ಪಡುವ ಪುಲಿಕೇಶಿ 2 ಕ್ರಿ.ಶ. 610 ಇಂದ 642 ವರೆಗೆ ಆಳಿದ ಚಾಲುಕ್ಯ ಚಕ್ರವರ್ತಿ. ಅವರು ಭಾರತೀಯ ಇತಿಹಾಸದಲ್ಲಿ ತನ್ನ ಸಮಕಾಲೀನ ಚಕ್ರವರ್ತಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಹ ರಾಜನಾಗಿದ್ದರು. ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬರಾಗಿದ್ದರು. ಮಹಮ್ಮದೀಯರ ಆಕ್ರಮಣದವರೆಗೂ, ಭರತ ಖಂಡದಲ್ಲಿ ಸ್ಥಾಪಿತವಾಗಿದ್ದ ಹಲವು ಪ್ರಬುದ್ಧ ಹಿಂದೂ ಸಾಮ್ರಾಜ್ಯಗಳಲ್ಲಿ ಚಾಲುಕ್ಯ ವಂಶವು ಪ್ರಮುಖವಾದದ್ದು. ಅವರ ಆಳ್ವಿಕೆಯನ್ನು ಚಾಲುಕ್ಯ ರಾಜವಂಶದ ಸುವರ್ಣ ಯುಗವೆಂದು ಪರಿಗಣಿಸಲಾಗಿದೆ.

ಇಮ್ಮಡಿ ಪುಲಿಕೇಶಿ ಚಾಲುಕ್ಯ ರಾಜ ಒಂದನೇ ಕೀರ್ತಿವರ್ಮನ ಮಗನಾಗಿ ಜನಿಸಿದನು. ಅವನನ್ನು ಬಾಲ್ಯದಲ್ಲಿ ಎರೆಯ ಎಂದು ಕರೆಯುತ್ತಿದ್ದರು. ತಂದೆ ಕೀರ್ತಿವರ್ಮ ಕ್ರಿಸ್ತಶಕ 592 ರಲ್ಲಿ, ಮರಣ ಹೊಂದಿದಾಗ ಅವನ ಮಗನಾದ ಎರೆಯನು ಬಹಳ ಚಿಕ್ಕವನಾಗಿದ್ದನು. ಆದ್ದರಿಂದ ಕೀರ್ತಿವರ್ಮನ ಸಹೋದರನಾದ ಮಂಗಳೇಶನು ರಾಜ ಪ್ರತಿನಿಧಿಯಾದನು, ಎರೆಯನು ಸಿಂಹಾಸನವನ್ನು ಏರುವ ವಯಸ್ಸಿಗೆ ಬರುವವರೆಗೆ ಸಿಂಹಾಸನವನ್ನು ಅಲಂಕರಿಸಿದ ಮಂಗಳೇಶನು ಪ್ರಾಯಕ್ಕೆ ಬಂದ ಮೇಲೆ ಎರೆಯನಿಗೆ ತನ್ನ ಸ್ಥಾನವನ್ನು ಬಿಟ್ಟುಕೊಡಲು ನಿರಾಕರಿಸಿದನು, ಬದಲಾಗಿ ತನ್ನ ಸ್ವಂತ ಮಗನನ್ನು ಯುವರಾಜನನ್ನಾಗಿ ನೇಮಿಸಿದನು.

ಎರೆಯನಿಗೆ ರಾಜನಾಗುವ ಹಕ್ಕನ್ನು ನಿರಾಕರಿಸಲಾದ ನಂತರ ಅವನು ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಬಾದಾಮಿ ಮತ್ತು ವಾತಾಪಿಯನ್ನು ತೊರೆದು ಕೋಲಾರಕ್ಕೆ ಬಂದು, ಬಣಗಳು ಮತ್ತು ಇತರ ಬುಡಕಟ್ಟುಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಾನೆ. ತನ್ನದೇ ಆದ ಸೈನ್ಯವನ್ನು ಕಟ್ಟಿಕೊಳ್ಳುತ್ತಾನೆ. ನಂತರ ಇಂದಿನ ಅನಂತಪುರದಲ್ಲಿ ತನ್ನ ಚಿಕ್ಕಪ್ಪನಾದ ಮಂಗಳೇಶನನ್ನು ಯುದ್ಧದಲ್ಲಿ ಸೋಲಿಸಿ, ಆತನನ್ನು ಕೊಲ್ಲುತ್ತಾನೆ. ಅನಂತರ ಅವನು ಪಟ್ಟದಕಲ್ಲಿಗೆ ತೆರಳಿ ಚಾಲುಕ್ಯ ರಾಜ ಕಿರೀಟವನ್ನು ಧರಿಸುತ್ತಾನೆ. ಪಟ್ಟದಕಲ್ಲು ಹೆಸರೇ ಸೂಚಿಸುವಂತೆ ಚಾಲುಕ್ಯ ರಾಜರು ಪಟ್ಟಾಭಿಷೇಕ ಮಾಡುತ್ತಿದ್ದ ಸ್ಥಳವಾಗಿದೆ. ಎರೆಯನನ್ನು "ಚಾಲುಕ್ಯ ಚಕ್ರವರ್ತಿ"ಯಾಗಿ ಪಟ್ಟಾಭಿಷೇಕ ಮಾಡಲಾದ ನಂತರ ಅವನು ಅಂದಿನಿಂದ ತನ್ನ ಹೆಸರನ್ನು ಇಮ್ಮಡಿ ಪುಲಿಕೇಶಿ ಎಂದು ಮರುನಾಮಕರಣ ಮಾಡಿಕೊಳ್ಳುತ್ತಾನೆ.

ಪಟ್ಟದಕಲ್ಲಿನಲ್ಲಿ ಸಿಂಹಾಸನವನ್ನು ಏರಿದ ಬಳಿಕ, ಚಕ್ರವರ್ತಿಯಾಗಿ ಆರಂಭಿಕ ಆಳ್ವಿಕೆಯು ಹಲವಾರು ಸವಾಲುಗಳಿಂದ ಕೂಡಿದ್ದು ಇದರಲ್ಲಿ ಸಾಮಂತರಿಂದ ದಂಗೆಗಳು ಮತ್ತು ಕಂಚಿಯ ಪಲ್ಲವರ ಆಕ್ರಮಣಗಳು ಸೇರಿದ್ದಾವೆ. ಹಲವಾರು ಚಾಲುಕ್ಯ ಸಾಮಂತರಿಂದ ಬೆದರಿಕೆಗೆ ಒಳಗಾದ




ತನ್ನ ಆಳ್ವಿಕೆಯನ್ನು ಸ್ಥಾಪಿಸಲು ಅವನು ಬಹಳಷ್ಟು ಸವಾಲುಗಳನ್ನು ಎದುರಿಸಿ ಗೋವಿಂದ ಮತ್ತು ಅಪ್ಪಾಯಿ ಎಂಬ ಆಕ್ರಮಣಕಾರರನ್ನು ಭೀಮ ನದಿಯ ತೀರದಲ್ಲಿ ಸೋಲಿಸುತ್ತಾನೆ. ಇವರಿಬ್ಬರೂ ಮುಖ್ಯವಾಗಿ ಇಮ್ಮಡಿ ಪುಲಿಕೇಶಿಯ ಪ್ರತಿಸ್ಪರ್ಧಿಗಳು ಮತ್ತು ತನ್ನ ಚಿಕ್ಕಪ್ಪನಾದ ಮಂಗಳೇಶನ ನಿಷ್ಠಾವಂತರಾಗಿದ್ದರು. ಅವರೊಂದಿಗೆ ಯುದ್ಧದಲ್ಲಿ ವಿಜಯದ ನಂತರ ಆ ಸಂದರ್ಭದ ನೆನಪಿಗಾಗಿ ಇಮ್ಮಡಿ ಪುಲಿಕೇಶಿಯು ಐಹೊಳೆಯಲ್ಲಿ ಬೃಹತ್ ಕಂಬವನ್ನು ನಿರ್ಮಿಸುತ್ತಾನೆ. ಅದು ಈಗ ಐಹೊಳೆ ಶಾಸನವೆಂದು ಪ್ರಸಿದ್ಧವಾಗಿದೆ. ಅದರಿಂದ ಇಮ್ಮಡಿ ಪುಲಿಕೇಶಿಯು ತನಗೆ ಎದುರಾದ ಸವಾಲುಗಳನ್ನು ಜಯಿಸಲು ಮತ್ತು ಪ್ರಬಲ ಆಡಳಿತಗಾರನಾಗಿ ಹೊರಹೊಮ್ಮಲು ಸಾಧ್ಯವಾಯಿತು. ಚಾಲುಕ್ಯರು ದಕ್ಷಿಣ ಭಾರತದ ಕದಂಬರು, ಗಂಗರು, ಅಲುಪರು, ವಿಷ್ಣುಕುಲದವರು, ಲಾಟರು, ಉತ್ತರದ ಗುರ್ಜರರು, ಮಾಡವರು, ಮುಖ್ಯವಾಗಿ ಶಾಶ್ವತ ವೈರಿಗಳಾದ ಪಲ್ಲವರನ್ನು ಸೋಲಿಸಿದ್ದು ಅವನಿಗೆ ದೊಡ್ಡ ಖ್ಯಾತಿಯನ್ನು ತಂದುಕೊಟ್ಟವು.

ಇಮ್ಮಡಿ ಪುಲಿಕೇಶಿ ಒಬ್ಬ ಮಹಾನ್ ಯೋಧ ಮತ್ತು ನುರಿತ ರಾಜತಾಂತ್ರಿಕನಾಗಿದ್ದು, ದಕ್ಷಿಣ ಭಾರತದ ಪಲ್ಲವರು, ಪಾಂಡ್ಯರು ಮತ್ತು ಚೇರರ ಸಾಮ್ರಾಜ್ಯ ವಶಪಡಿಸಿಕೊಂಡು ಚಾಲುಕ್ಯ ಸಾಮ್ರಾಜ್ಯವನ್ನು ವಿಸ್ತರಿಸಿದರು. ಚಾಲುಕ್ಯ ಅರಸರು ಜೈನ ಧರ್ಮದ ದಿಗಂಬರರಾಗಿದ್ದರು. ಇವರು ಮೂಲತಃ ಬನವಾಸಿಯವರು. 7ನೇ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ ಚೀನಾದ ಪ್ರವಾಸಿ ಹ್ಯೂಯೆನ್ ತ್ಸಾಂಗ್ ಇಮ್ಮಡಿ ಪುಲಿಕೇಶಿಯನ್ನು ಎಲ್ಲರಿಗೂ ದಯೆಯನ್ನು ತೋರುವ ದೂರದೃಷ್ಟಿಯ ಸಂಪನ್ಮೂಲ ಮತ್ತು ಜಾಣ್ಮೆಯ ರಾಜ ಎಂದು

ಹೊಗಳಿದ್ದನ. ಈ ಚೀನಾದ ಪ್ರವಾಸಿಯ ಪ್ರಕಾರ, ಪ್ರಜೆಗಳು ರಾಜನಿಗೆ ಪರಿಪೂರ್ಣವಾಗಿ ವಿಧೇಯರಾಗಿರುತ್ತಿದ್ದರು. ಚಾಲುಕ್ಯ ಸಾಮ್ರಾಜ್ಯದ ಜನರು ಅವನ ಮೇಲೆ ಬಲವಾದ ಪ್ರಭಾವ ಬೀರಿದ್ದರು, ಜನರು ವಿಶ್ವಾಸದ್ರೋಹಕ್ಕಿಂತ ಸಾವಿಗೆ ಆದ್ಯತೆ ನೀಡಿದ್ದರು. ಪುಲಿಕೇಶಿಯು ಎತ್ತರ ಮತ್ತು ಗಟ್ಟಿಮುಟ್ಟಾದ ನಿಲುವು ಹೊಂದಿದ್ದ ಮತ್ತು ಸ್ವಭಾವತಃ ಹೆಮ್ಮೆ ಮತ್ತು ನಿರಾಂತಕ ವ್ಯಕ್ತಿತ್ವದವರಾಗಿದ್ದರು. ದಯೆಗೆ ಕೃತಜ್ಞರಾಗಿದ್ದು, ಮತ್ತು ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳುತ್ತಿದ್ದರು. ಇಮ್ಮಡಿ ಪುಲಿಕೇಶಿ ಜೈನ ಆಡಳಿತಗಾರನಾಗಿದ್ದರೂ ಅವರ ರಾಜ್ಯದಲ್ಲಿ ನೂರಕ್ಕಿಂತ ಹೆಚ್ಚು ಬೌದ್ಧ ಮಠಗಳಿದ್ದವು ಎಂದು ಹ್ಯೂಯೆನ್ ತ್ಸಾಂಗ್ ಉಲ್ಲೇಖಿಸಿದ್ದಾರೆ ಹಾಗೂ ತನ್ನ ದಾಖಲಾತಿಯಲ್ಲಿ ಪುಲಿಕೇಶಿಯ ಆಡಳಿತದ ಬಗ್ಗೆ, ಸಾಮ್ರಾಜ್ಯದ ಬಗ್ಗೆ ಮೆಚ್ಚುಗೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಅವರ ಯುಗದಲ್ಲಿ ಮೊಘಲರು ಭಾರತವನ್ನು ಪ್ರವೇಶಿಸಿದ್ದರೆ ಅವರು ಖಂಡಿತವಾಗಿಯೂ ಸೋಲುತ್ತಿದ್ದರು ಮತ್ತು ಅವರನ್ನು ಭಾರತಕ್ಕೆ ಪ್ರವೇಶಿಸಲು ಬಿಡುತ್ತಿರಲಿಲ್ಲವೆಂಬುದು ಸತ್ಯ.

**ಇಮ್ಮಡಿ ಪುಲಿಕೇಶಿಯು ದೇವಸ್ಥಾನಗಳ ಪ್ರಿಯರಾಗಿದ್ದು, ಕರ್ನಾಟಕ, ಆಂಧ್ರಪ್ರದೇಶ, ಈಗಿನ ತೆಲಂಗಾಣ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಥೈಲ್ಯಾಂಡ್ ಮತ್ತು ಕಾಂಬೋಡಿಯ ದೇಶಗಳಲ್ಲಿ ದೇವಾಲಯುಗಳು ನಿರ್ಮಿಸಿದ್ದರು.** ಚಾಲುಕ್ಯ ಅರಸರುಗಳಿಗೆ ಕುದುರೆ ಮತ್ತು ಆನೆಗಳನ್ನು ಈಗಿನ ಥೈಲ್ಯಾಂಡ್ ಮತ್ತು ಕಾಂಬೋಡಿಯದಿಂದ ಆಮದು ಮಾಡಿಕೊಳ್ಳುತ್ತಿದ್ದರು ಎನ್ನಲಾಗಿದೆ. **ಇಮ್ಮಡಿ ಪುಲಕೇಶಿಯು ದಕ್ಷಿಣ ಭಾರತದ ಬಂಗಾರದ ನಾಣ್ಯಗಳನ್ನು ಚಲಾವಣೆಯಲ್ಲಿ ತಂದ ಮೊಟ್ಟ ಮೊದಲ ಚಕ್ರವರ್ತಿ ಎಂದು ಹೆಗ್ಗಳಿಕೆಗಳಿಸಿದ್ದಾನೆ.** ಪುಲಿಕೇಶಿಯು ತನ್ನ ಧಾರ್ಮಿಕ ಸಹಿಷ್ಣುತೆಗೆ ಸಹಾ ಹೆಸರುವಾಸಿಯಾಗಿದ್ದನು. 634 ಇಸವಿಯಲ್ಲಿ ನರ್ಮದಾ ನದಿಯ ದಂಡೆಯ ಯುದ್ಧ ಭೂಮಿಯಲ್ಲಿ, ಅಲ್ಲಿಯವರೆಗೂ ಅಜೇಯನಾಗಿದ್ದ, ಎಂದಿಗೂ ಯುದ್ಧದಲ್ಲಿ ಸೋತಿರದ ಹರ್ಷವರ್ಧನನನ್ನು ಇಮ್ಮಡಿ ಪುಲಿಕೇಶಿಯು ಸೋಲಿಸಿದನು. ಸಂಖ್ಯಾತ್ಮಕ ಅನಾನುಕೂಲತೆಯ ಹೊರತಾಗಿಯೂ ಚಾಲುಕ್ಯರು ವಿಜಯಶಾಲಿಯಾದರು. ಇಬ್ಬರ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕದನದಲ್ಲಿ ಉತ್ತರದ ಪ್ರಬಲ ಚಕ್ರವರ್ತಿ ಹರ್ಷವರ್ಧನನ ಮೇಲೆ ಅವನ ವಿಜಯವು, ಪುಲಿಕೇಶಿ ಅವರ ಶ್ರೇಷ್ಠ ಸೈನ್ಯ ಸಾಧನೆಯಾಗಿತ್ತು. ಈ ವಿಜಯವು ಹರ್ಷವರ್ಧನನ ವಿಸ್ತರಣೆಯ ಮಹತ್ವಾಕಾಂಕ್ಷೆಗಳನ್ನು ಪರಿಣಾಮಕಾರಿಯಾಗಿ ತಡೆಯುವಲ್ಲಿ ಯಶಸ್ವಿಯಾಯಿತು ಹಾಗು ಪುಲಿಕೇಶಿಯನ್ನು ಡೆಕ್ಕನ್‌ನಲ್ಲಿ ಪ್ರಬಲ ಶಕ್ತಿಯಾಗಿ ಸ್ಥಾಪಿಸಿತು.

ಈ ವಿಜಯದ ನಂತರ ಪುಲಿಕೇಶಿಯು **"ಪರಮೇಶ್ವರ", "ಸತ್ಯಾಶ್ರಯ", "ಪೃಥ್ವಿ ವಲ್ಲಭ", "ದಕ್ಷಿಣ ಪಥೇಶ್ವರ"** ಮುಂತಾದ ಬಿರುದನ್ನು ಪಡೆದನು. ಈ ಘಟನೆಯ ನಂತರ ಹರ್ಷವರ್ಧನ ಮತ್ತು ಪುಲಿಕೇಶಿಯ ನಡುವೆ ಸಹಿ ಹಾಕಲಾದ ಒಪ್ಪಂದದ ಪ್ರಕಾರ ನರ್ಮದಾ ನದಿಯು, ಹರ್ಷವರ್ಧನನ ಸಾಮ್ರಾಜ್ಯ ಮತ್ತು ಚಾಲುಕ್ಯ ಸಾಮ್ರಾಜ್ಯದ ನಡುವಿನ ಗಡಿಯಾಯಿತು. ಹರ್ಷವರ್ಧನ ಮತ್ತು ಪುಲಿಕೇಶಿಯ ನಡುವಿನ ಮುಖಾಮುಖಿಯನ್ನು ಸೂಕ್ಷ್ಮವಾಗಿ ಹೀಗೆ ವಿವರಿಸಬಹುದು: ಉತ್ತರ ಭಾರತವನ್ನು ಗೆದ್ದು ಬೀಗುತ್ತಿದ್ದ ಉತ್ತರ ಪಥೇಶ್ವರ ಹರ್ಷವರ್ಧನನು ದಕ್ಷಿಣ ಭಾರತವನ್ನು ಗೆದ್ದು ಸಮಸ್ತ ಭಾರತದ ಚಕ್ರವರ್ತಿಯಾಗಿ ಮೆರೆಯಬೇಕೆಂಬ ಮಹಾದಾಶೆಯು ಮುಂದೆ ನಡೆದ ಘೋರ ಯುದ್ಧ ಕಾಲದಲ್ಲಿ ನುಚ್ಚು ನೂರಾಯಿತು. ಹರ್ಷವರ್ಧನ ತನ್ನ ಸೋಲನ್ನು ಒಪ್ಪಿಕೊಳ್ಳುತ್ತಾನೆ, ಅವನ ರಥವು ತನ್ನ ಪಾಳೆಯವನ್ನು ಬಿಟ್ಟು ಪುಲಿಕೇಶಿಯ ಬಿಡಾರದ ಕಡೆಗೆ ಬಂದಾಗ ಪುಲಿಕೇಶಿಯು ಎದ್ದು ನಿಂತು ಹರ್ಷವರ್ಧನನನ್ನು ಕುರಿತು "ಚಕ್ರವರ್ತಿಗಳಿಗೆ ಸುಸ್ವಾಗತ"ಎಂದು ಹೇಳಿ ಆಲಂಗಿಸುತ್ತಾನೆ. ಇದರಿಂದ ಹರ್ಷವರ್ಧನ ಆಶ್ಚರ್ಯಗೊಂಡು ನಿಮ್ಮ ಸೌಜನ್ಯ ನಮ್ಮ ಕಣ್ಣನ್ನು ತೆರೆಸಿತು, ನಿಮ್ಮ ಶೌರ್ಯ ಮತ್ತು ಸೌಜನ್ಯದ ಬಗ್ಗೆ ಕೇಳಿದ್ದೆ ನೀವು ನನ್ನನ್ನು ಯುದ್ಧದಲ್ಲಿ ಮಾತ್ರ ಗೆಲ್ಲಲಿಲ್ಲ ಹೃದಯದಿಂದಲೂ ಗೆದ್ದಿದ್ದೀರಿ ಎಂದು ಹೇಳಿ ಇಂದಿನಿಂದ ನೀವು 'ದಕ್ಷಿಣ ಪಥೇಶ್ವರ' ಎಂಬ ಬಿರುದನ್ನು ನೀಡಿದನಂತೆ.

ನಂತರದ ದಿನಗಳಲ್ಲಿ ಕ್ಷೀಣಿಸುತ್ತಿದ್ದ ಚಾಲುಕ್ಯ ಖಜಾನೆಯನ್ನು ಪುನಃ ತುಂಬಿಸುವ ಭರವಸೆಯಲ್ಲಿ, ವಯಸ್ಸಾದರೂ ಪುಲಿಕೇಶಿ ಮತ್ತೆ ಪಲ್ಲವರ ಮೇಲೆ ದಾಳಿ ಮಾಡಿದನು, ಆದರೆ ಈ ಬಾರಿ ನರಸಿಂಹವರ್ಮನ ನೇತೃತ್ವದ ಪಲ್ಲವರು, ತಮ್ಮ ಹಿಂದಿನ ಸೋಲುಗಳನ್ನು ಮರೆತು ಪುಲಿಕೇಶಿಯನ್ನು ಹಿಮ್ಮೆಟ್ಟಿ ವಿಜಯಶಾಲಿಯಾಗಲು ಸಮರ್ಥರಾದರು. ಈ ವಿಜಯದಿಂದ ಉತ್ತೇಜಿತರಾದ ನರಸಿಂಹವರ್ಮನು ಬಾದಾಮಿಯವರೆಗೂ ಹೋಗಿ ಚಾಲುಕ್ಯರ ರಾಜಧಾನಿಯಲ್ಲಿ ನಡೆಸಿದ ಒಂದು ಭೀಕರ ಯುದ್ಧದಲ್ಲಿ ಪುಲಕೇಶಿಯು ಕಿರಿಯ ನರಸಿಂಹವರ್ಮನ ಕೈಯಲ್ಲಿ ಮರಣ ಹೊಂದುತ್ತಾನೆ. ಹಲವು ಊಹೆಗಳ ಪ್ರಕಾರ ಇಮ್ಮಡಿ ಪುಲಕೇಶಿಯ ಸಮಾಧಿಯನ್ನು ಈಗಿನ ಕರ್ನಾಟಕದ ರಾಜ್ಯದ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನ ಬಳಿಯ ಹುಲಿಗೆಮ್ಮನ ಕೊಳ್ಳದಲ್ಲಿ ಮಾಡಲಾಗಿದೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಆದರೆ, ಈ ಮಾಹಿತಿ ಅಧಿಕೃತವಾಗಿಲ್ಲ. ಇಮ್ಮಡಿ ಪುಲಿಕೇಶಿಯ ಮರಣವು ಇತಿಹಾಸದಲ್ಲಿ ಅದ್ಭುತ ಅವಧಿಯನ್ನು ಕೊನೆಗೊಳಿಸಿತು. ಭಾರತೀಯ ಇತಿಹಾಸದಲ್ಲಿ ಸುವರ್ಣ ಯುಗವಾಗಿದ್ದ ಆ ಕಾಲದ ಮಹಾನ್ ಇಮ್ಮಡಿ ಪುಲಿಕೇಶಿಯನ್ನು ಕೊಂದ ನಂತರ ನರಸಿಂಹವರ್ಮನು ಬಾದಾಮಿ (ವಾತಾಪಿ) ನಗರವನ್ನು ವಶಪಡಿಸಿಕೊಂಡು 13 ವರ್ಷಗಳ ಕಾಲ ರಾಜ್ಯವಾಳಿದನು. ಪಲ್ಲವರ ನಂತರ ಪುಲಿಕೇಶಿಯ ಮಗ ಒಂದನೇ ವಿಕ್ರಮಾದಿತ್ಯ ಪಲ್ಲವರನ್ನು ಬಾದಾಮಿಯಿಂದ ಓಡಿಸಿ, ಮತ್ತು ಚಾಲುಕ್ಯರ ಕಳೆದು ಹೋದ ವೈಭವವನ್ನು ಪುನಃ ಸ್ಥಾಪಿಸಿದನು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಇಮ್ಮಡಿ ಪುಲಿಕೇಶಿಯು ಶಿವಾಜಿ, ಶ್ರೀಕೃಷ್ಣದೇವರಾಯ, ಚಂದ್ರಗುಪ್ತ ಮೌರ್ಯ ಸೇರಿದಂತೆ ಹಲವಾರು ಭಾರತದ ಶ್ರೇಷ್ಠ ರಾಜರುಗಳಲ್ಲೊಬ್ಬರಾಗಿದ್ದರು.

ಸಾವಿರಾರು ವರ್ಷಗಳ ಹಿಂದೆಯೇ ಬೃಹತ್ ಸೈನ್ಯ ಹಾಗೂ ನೌಕಾಪಡೆಯನ್ನು ಕಟ್ಟಿದ ಕನ್ನಡ ನಾಡಿನ ಹೆಮ್ಮೆಯ ಸೇನಾನಿ. ಕರ್ನಾಟಕವನ್ನು ಆಳಿದ ಇಮ್ಮಡಿ ಪುಲಿಕೇಶಿ ತನ್ನ ಚಿಂತನೆ ಮತ್ತು ಧೋರಣೆಗಳಲ್ಲಿ ಜನಪರ, ಜಾತ್ಯತೀತ ಮತ್ತು ಅಭಿವೃದ್ಧಿಯ ಹರಿಕಾರನೂ ಆಗಿದ್ದನು. ಸಾರ್ವಭೌಮರಾಗಿ ಮೆರೆದ ಬಾದಾಮಿ ಚಾಲುಕ್ಯರು ಕರ್ನಾಟಕದಲ್ಲಿ ಸ್ವಾತಂತ್ರವಾದ ವಿಶಾಲ ಸಾಮ್ರಾಜ್ಯವನ್ನು ಕಟ್ಟಿ ಬೆಳೆಸಿದರು. ಕರ್ನಾಟಕದ ಭೌಗೋಳಿಕ ಗಡಿಗಳನ್ನು ವಿಸ್ತರಿಸಿದ ಕನ್ನಡ ಅರಸರಲ್ಲಿ ಇವರ ಪಾತ್ರ ಮಹತ್ವದ್ದು. ಚಾಲುಕ್ಯ ರಾಜವಂಶದ ಇಮ್ಮಡಿ ಪುಲಿಕೇಶಿಯವರು ಶ್ರೇಷ್ಠ ಆಡಳಿತಗಾರರಾಗಿದ್ದು ಅವರ ಸೈನ್ಯದ ಪರಾಕ್ರಮಕ್ಕೆ, ರಾಜ ತಾಂತ್ರಿಕ ಕೌಶಲ್ಯಕ್ಕೆ, ಹಾಗೂ ಕಲೆ ಮತ್ತು ವಿಜ್ಞಾನಗಳಿಗೆ ನೀಡಿದ ಪ್ರೋತ್ಸಾಹಕ್ಕಾಗಿ ಈಗಲೂ ಅವರನ್ನು ನೆನಪಿಸಿಕೊಳ್ಳಲಾಗುತ್ತಿದೆ.

**ವಸಂತ ಕುಮಾರ್**
ದೆಹಲಿ ಪೊಲೀಸ್ ಅಧಿಕಾರಿ,
ಹೆಮ್ಮೆಯ ದೆಹಲಿ ಕನ್ನಡಿಗ

## ಪ್ರಸ್ತುತ ಅಭಿಮತ ಸಂಪಾದಕ ಮಂಡಳಿ

**ಪ್ರಧಾನ ಸಂಪಾದಕರು**



ಶ್ರೀ ಕೆ.ಎಸ್. ಮೂರ್ತಿ

–: ಸದಸ್ಯರು :–



ಶ್ರೀ ಸರವು ಕೃಷ್ಣ ಭಟ್



ಶ್ರೀ ಯಲ್ಲಾಲಿಂಗ ಕೊಪ್ಪದ



ಶ್ರೀ ತಿಮ್ಮಪ್ಪ ಜಿ.ಆರ್



ಶ್ರೀ ಎಸ್. ರಮೇಶ

ಸಂಘದಲ್ಲಿ ಕೃತಿ ಅವಲೋಕನ ಕಾರ್ಯಕ್ರಮ

# ವಾಯು ಸೇನಾಧಿಕಾರಿಯವರಿಂದ ವಿರಚಿತ "ಹನುಮದಾಸನ ರಾಮಾಯಣ ಮಹಾಕಾವ್ಯ"




ಭಾರತೀಯ ವಾಯುಸೇನೆಯಲ್ಲಿ ಅಧಿಕಾರಿಗಳಾಗಿರುವ ಕನ್ನಡ ಸಾಹಿತಿಗಳ ಬೀಡು ಧಾರವಾಡ ನೆಲದ ಗ್ರೂಪ್ ಕ್ಯಾಪ್ಟನ್ ಸಂಜಯ ದೇಸಾಯಿ ಅವರು ರಚಿಸಿದ 'ಹನುಮದಾಸನ ರಾಮಾಯಣ ಮಹಾಕಾವ್ಯ' ಕೃತಿ ಅವಲೋಕನ ಕಾರ್ಯಕ್ರಮವು ದಿನಾಂಕ ಜುಲೈ 15, 2023 ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಸುಂದರವಾಗಿ ಮೂಡಿಬಂದಿತು. ನೂರಾರು ಕನ್ನಡ ಸಾಹಿತ್ಯ ಪ್ರಿಯರು ಭಾಗವಹಿಸಿ ಇಳಿ ಸಂಜೆಯಲ್ಲಿ ಸಾಹಿತ್ಯಿಕ ಕಾರ್ಯಕ್ರಮದ ಸವಿಯನ್ನುಂಡರು.

ಈ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕೃತಿ ಅವಲೋಕನ ಮಾಡಿದ ಶ್ರವಣಬೆಳಗೊಳದ ಬಾಹುಬಲಿ ಪ್ರಾಕೃತ ವಿದ್ಯಾ ಪೀಠದ ನಿರ್ದೇಶಕರಾದ ಪ್ರೊ. ಜಯಕುಮಾರ್ ಉಪಾಧ್ಯೆ ಅವರು ದೆಹಲಿ ಕರ್ನಾಟಕ ಸಂಘದ ಸದಸ್ಯನಾಗಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುತ್ತಿದ್ದೇನೆ. ವೇದಾಧ್ಯಯನ ಮಾಡಿ ಹನುಮಂತನಿಂದ ವ್ಯಾಕರಣ ಹೇಳಿಸಿದವನು ವಾಲ್ಮೀಕಿ ಮಹರ್ಷಿ. ಹೀಗೆ ತಮ್ಮ ಭಾಷಣದಲ್ಲಿ ಹಲವು ರಾಮಾಯಣ ಕುರಿತಾಗಿ ಉಲ್ಲೇಖನಗಳನ್ನು ಮಾಡಿದ ಡಾ. ಉಪಾಧ್ಯೆ, ಮೈಸೂರು ನಾಗರಾಜ ಅವರು ಖ್ಯಾತ ಸಂಸ್ಕೃತ ವಿದ್ವಾಂಸರು ಮತ್ತು ರಾಮಾಯಣವನ್ನು ಬಹಳ ಅರ್ಥಪೂರ್ಣವಾಗಿ ತಿಳಿದವರು. ಕಾವ್ಯ ರಚನೆ ಮಾಡುವಾಗ ಶಬ್ದಗಳು, ಅರ್ಥಗಳು ಲೋಪರಹಿತವಾಗಿರಬೇಕು ಅಲ್ಲಿ ಅಲಂಕಾರ, ಶಬ್ದಾಲಂಕಾರಗಳು ಇಲ್ಲದಿದ್ದರೂ ಪರವಾಗಿಲ್ಲ ಎಂದರು.

ನಮ್ಮಲ್ಲಿ ಯಕ್ಷಗಾನ ಮತ್ತು ಮಹಾರಾಷ್ಟ್ರದಲ್ಲಿ ನಡೆಯುವ ತಮಾಷಾ ದಂತಹ ಪರಂಪರೆಗಳು ಜೀವನದ ಪ್ರತಿ ಅಂಶವನ್ನು ನಿರೂಪಿಸಿ ಕೊಡುತ್ತವೆ.ಶಬ್ದಗಳ ಪ್ರಯೋಗದ ವೈಚಿತ್ರ್ಯವೇ ಕಾವ್ಯವೆಂದು ಪ್ರಾಕೃತ ಕವಿ ರಾಜಶೇಖರ ಹೇಳುತ್ತಾರೆ.

ಕರ್ನಾಟಕ ಸಂಘವು ಹನುಮದಾಸನ ಈ ಕೃತಿಯನ್ನು ಎದೆಗಪ್ಪಿಕೊಂಡು ಈ ಕಾವ್ಯ ನಮ್ಮದು ಎಂದು ಕೃತಿ ರಚನಾಕಾರರನ್ನು ಆಹ್ವಾನಿಸಿ ಸತ್ಕರಿಸಿದ್ದು ಪ್ರಶಂಸನೀಯವಾಗಿದೆ. ಕೃತಿ ಬರೆದ ಸಂಜಯ ದೇಸಾಯಿ ಅವರು ವೃತ್ತಿಪರವಾಗಿ ಮೂಲತಃ ಇಂಜಿನಿಯರ್ ಆಗಿದ್ದು, ಭಾರತದ ಸೇನಾ ಅಧಿಕಾರಿಯಾಗಿದ್ದುಕೊಂಡು ತಮ್ಮೆಲ್ಲ ಬದ್ಧ ಜವಾಬ್ದಾರಿಗಳೊಂದಿಗೆ ಹನುಮದಾಸನ ರಾಮಾಯಣ ಮಹಾಕಾವ್ಯ ಎಂಬ ಕೃತಿಯನ್ನು ಬರೆದಿರುವುದು ನಮಗೆಲ್ಲರಿಗೂ ಸ್ಫೂರ್ತಿಮಯ. ಇವರು ಮೂಲತಃ ಸಾಹಿತಿಗಳ ನಾಡು ಧಾರವಾಡದವರು. ಧಾರವಾಡದ ನುಗ್ಗಿಕೇರೆ ಹನುಮಂತ ಬಹಳ ಪ್ರಸಿದ್ಧ ಮತ್ತು ಶಕ್ತಿಮಯ ಹೀಗಾಗಿ ಆ ಹನುಮನ ಭಕ್ತಿ ಭಾವವನ್ನು ಅವರು ತಿಳಿಸಿಕೊಟ್ಟಿದ್ದಾರೆ ಎಂದರು. ಕೃತಿ ಬರೆಯುವಾಗ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುವ ಲೇಖಕರು, ತಮಗೆ ಸ್ಫೂರ್ತಿ ನೀಡಿರುವ ಪ್ರತಿಯೊಬ್ಬರಿಗೂ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ ಎಂದು ಹೇಳಿದರು.ಕಾವ್ಯ ಸ್ವರೂಪವನ್ನು ವಿವರಿಸಿದ ಅವರು ಭಾಮಹ 6ನೇ ಶತಿ 'ಶಬ್ದಾರ್ಥೆಸಹಿತೆ ಕಾವ್ಯಂ' ಪಂಡಿತರಾಜ ಜಗನ್ನಾಥ 'ರಮಣೀಯಾರ್ಥ ಪ್ರತಿಪಾದಕ : ಶಬ್ದ : ಕಾವ್ಯಮ್' ಮಮ್ಮಟನ ಕಾವ್ಯ ಪ್ರಕಾಶ ತದದೋಷೆ ಶಬ್ದಾರ್ಥ ಸಗುಣವಾನ್ ಅನಲಂಕೃತೀ ಪುನಃ ಕ್ವಾಪಿ ಶಬ್ದ ಮತ್ತು ಅರ್ಥಗಳೆ ಕಾವ್ಯ ಅವು ದೋಷ ರಹಿತ ಗುಣಯುಕ್ತವು ರಸಾಭಿವ್ಯಂಕವು ಅಲಂಕಾರ ಇರಲಿ ಅಥವಾ ಇಲ್ಲದೇ ಇರಲಿ. ವಿಶ್ವನಾಥರು ಸಾಹಿತ್ಯ ದರ್ಪಣದಲ್ಲಿ 'ವಾಕ್ಯಂ ರಸಾತ್ಮಕಂ ಕಾವ್ಯಂ' ರಾಜಶೇಖರನು ಕರ್ಪೂರ ಮಂಜರಿ ಸಟ್ಟಕದಲ್ಲಿ 'ಉತ್ತಿ ವಿಸೆಸೋಕವ್ವಂ'

ಕಾವ್ಯ ಪ್ರಯೋಜನ ಮಮ್ಮಟ ಕಾವ್ಯ ಪ್ರಕಾರದಲ್ಲಿ ಅಂಕಿತವಾದದ್ದು

1.ಕಾವ್ಯಂ ಯಶಸೆ=ಯಶಪ್ರಾಪ್ತಿಗಾಗಿ

2.ಅರ್ಥಕೃತೆ=ಧನ ಸಂಪತ್ತಿಯ ಅರ್ಜನೆಗಾಗಿ

3.ವ್ಯವಹಾರವಿದೆ=ಲೋಕ ವ್ಯವಹಾರದ ಜ್ಞಾನಕ್ಕಾಗಿ

4.ಶಿವೆತರಕ್ಷತಯೆ=ತಾಪತ್ರಯ ಸಂತಾಪ ನಿವಾರಣೆಗಾಗಿ

5.ಸದ್ಯ:ಪರ ನಿರ್ವತಯೆ=ಅಲೇಕಿಕ ಆನಂದದ ಲಾಭಿ

6.ಕಾಂತಾ ಸಮ್ಮಿತ ತಮೋಪದೇಶಯುಜೆ=ಪ್ರೇಮಿ ಕೆಯು ಪ್ರೇಮಿಗೆ ಸಹೃದಯ ಭಾವದಿಂದ ಉಪದೇಶ ಭೇದಗಳು.

ಸಾಮಾನ್ಯವಾಗಿ ಕಾವ್ಯದ 3 ಭೇದಗಳು

1. ವ್ಯಂಜನಾ ಪ್ರಧಾನ ಉತ್ತಮ ಕಾವ್ಯ ನಿರೂಪಣೆ

2.ಲಕ್ಷಣಾ ಪ್ರಧಾನ ಮಧ್ಯಮ ಕಾವ್ಯ

3.ಅಭಿಧಾ ಪ್ರಧಾನ ಅಧಮ ಕಾವ್ಯ

ಇಂದ್ರಿಯಗಳ ಆಧಾರದಿಂದ ಗ್ರಹಿಸುವ ಕಾವ್ಯ ದೃಶ್ಯ ಕಾವ್ಯ, ಶ್ರವ್ಯ ಕಾವ್ಯ

ಈ ರೀತಿಯಾಗಿ ಡಾ. ಉಪಾಧ್ಯೆಯವರು ಕೃತಿಯ ವ್ಯಾಕರಣ, ಛಂದಸ್ಸು, ಕಾವ್ಯಬೇದಗಳ ನಿದರ್ಶನಗಳೊಂದಿಗೆ ಅಲಂಕಾರ ಶೈಲಿ ಮಹಾಕಾವ್ಯದ ಸ್ವರೂಪ, ಕಾವ್ಯದ ಅವಯವಗಳು, ಕಾವ್ಯದ ಭೇದಗಳು, ಶ್ರೀರಾಮನ ಕಥೆ, ಚಿತ್ರಬಂಧ ಮುಂತಾದವುಗಳನ್ನು ಎಳೆ ಎಳೆಯಾಗಿ ವಿವರಿಸಿದರು.



ಅಖಿಲ ಭಾರತ ಲಿಂಗಾಯತ ಮಹಾಸಭಾ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಶ್ರೀಕಂಠ ಚೌಕೀಮಠ ಅವರು ಮಾತನಾಡಿ ಕೃತಿಕಾರರು ರಚಿಸಿದ ಈ ಕಾವ್ಯ ಒಂದು ವಿಶೇಷವಾದ ಕೃತಿಯಾಗಿದ್ದು, ಇದರ ಬಗ್ಗೆ ಅವಲೋಕನ ಮಾಡಲು ಅವಕಾಶ ಮಾಡಿಕೊಡಬೇಕೆಂದು ದೆಹಲಿ ಕರ್ನಾಟಕ ಸಂಘದಲ್ಲಿ ಕೇಳಿಕೊಂಡಾಗ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಂತೋಷದಿಂದ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ಧನ್ಯವಾದಗಳು. ಸಾವಿರಾರು ವರ್ಷಗಳ ಹಿಂದೆ ರಚನೆಯಾದ ರಾಮಾಯಣ ಇಂದಿಗೂ ಪ್ರಸ್ತುತವಾಗಿದೆ ಅದಕ್ಕೆ ಕಾರಣ ಮೂಲತಃ ವಾಲ್ಮೀಕಿ ರಾಮಾಯಣದಲ್ಲಿ ಏಳು ಖಾಂಡಗಳು ಮತ್ತು 24,000 ಶ್ಲೋಕಗಳಿವೆ. ಇದು ಶ್ರೀ ರಾಮನ ಪರಿಪೂರ್ಣ ಜೀವನವನ್ನು ದರ್ಶನ ಮಾಡಿಸುತ್ತದೆ. ಕುವೆಂಪು ಅವರು ಕೂಡ ಶ್ರೀ ರಾಮಾಯಣ ದರ್ಶನಂ ಬರೆದು ವಿಶ್ವಮಾನವರಾದವರು. ಹೀಗಾಗಿ ರಾಮಾಯಣಕ್ಕೆ ಆ ಶಕ್ತಿ ಇದೆ ಎಂದರು. ಮಹಾತ್ಮಾ ಗಾಂಧಿಜಿಯವರು ತಮ್ಮ ದೇಹ ತ್ಯಾಗ ಮಾಡುವ ಸಂದರ್ಭದಲ್ಲಿಯೂ ಕೂಡ ಹೇ ರಾಮ್ ಎಂದು ಉಚ್ಚಾರ ಮಾಡುತ್ತಾರೆ ಇದು ರಾಮನ ವ್ಯಕ್ತಿತ್ವವನ್ನು ತೋರಿಸುತ್ತದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಮಂತ್ರಿಗಳು ಆಗಿದ್ದ ಶ್ರೀ ವೀರಪ್ಪ ಮೊಯಲಿ ಅವರು ಕೂಡ ಶ್ರೀ ರಾಮಾಯಣದ ಬಗ್ಗೆ ಕೃತಿ ಬರೆದು ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದಿರುವುದು ರಾಮಾಯಣ ಎಲ್ಲರ ಜನಮಾನಸದಲ್ಲಿ ಬೆಳೆದು ಹೋಗಿದೆ ಎಂಬದನ್ನು ತೋರಿಸುತ್ತದೆ ಎಂದರು.

ದೆಹಲಿ ಕನ್ನಡ ಶಾಲೆಯ ಕನ್ನಡ ಭಾಷಾ ಶಿಕ್ಷಕರಾಗಿರುವ ಶ್ರೀ ಅರವಿಂದ್ ಬಿಜ್ಜೆ ಅವರು ಮಾತನಾಡಿ ರಾಮಾಯಣ, ಮಹಾಭಾರತ ಪ್ರಪಂಚದ ಅತಿ ಪ್ರಾಚೀನ ಮಹಾಕಾವ್ಯಗಳು ಎಂಬುದು ನಾವೆಲ್ಲರೂ ತಿಳಿದಿರುವ ವಿಚಾರ. ಕೃಷ್ಣ ವಿಶ್ವರೂಪಿಯಾದರೆ, ರಾಮ ವಿಶ್ವವ್ಯಾಪಿ. ಆದಿಕವಿ, ದಾರ್ಶನಿಕ ಋಷಿ ವಾಲ್ಮೀಕಿ ಬರೆದ ರಾಮಾಯಣದ ಕತೆಯೂ ಜಗದಗಲಕ್ಕೂ ವ್ಯಾಪಿಸಿ ಧರ್ಮ ಜಾಗೃತಿಯೊಂದಿಗೆ ಮಾನವ ಧರ್ಮವನ್ನು ಎತ್ತಿ ಹಿಡಿದಿದೆ. 'ಹನುಮದಾಸನ ರಾಮಾಯಣ ಮಹಾಕಾವ್ಯ'ದಲ್ಲಿ ರಾಮ-ಲಕ್ಷ್ಮಣ'-ಸೀತೆ ಹೀಗೆ ಪೂರ್ಣ ಅಯೋಧ್ಯೆಯ ಹಿತ ಕಾಯುವ ಹನುಮಂತ ಪ್ರಧಾನವಾದ ಹಾಗೆ, ಇಡೀ ದೇಶವನ್ನು ಕಾಯುವ ಗ್ರೂಪ್ ಕ್ಯಾಪ್ಟನ್ ಸಂಜಯ್ ದೇಸಾಯಿ ಅವರು ಈ ಮಹಾಕಾವ್ಯವನ್ನು ಬರೆದು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದ್ದಾರೆ, ಮಾದರಿಯಾಗಿದ್ದಾರೆ. ಜನನಿ ಹನುಮಂತ ನಾನು, ದೂತ ಶ್ರೀರಾಮನ, ಚರಣ ಕಮಲ ವಂದನೆ, ಸ್ವೀಕರಿಸು ಈ ಕಂದನ, ದೇವಿ-ದೇವ ಸ್ವರೂಪ ನೀವು, ಪ್ರತಿಮೆ ನನ್ನ ಹೃದಯದಲಿ, ಅಪಹರಿಸಿದ ರಾವಣ ನಿಮ್ಮನು, ಕುಲನಾಶ ಅವನದೇ ಲಂಕೆಯಲಿ ಇಲ್ಲಿ ಬಳಸಿರುವ ಭಾಷೆಯನ್ನು ನಾವು ಮುಖ್ಯವಾಗಿ ಗಮನಿಸಬೇಕು. ಸರಳ ಅಥವಾ ದೇಸಿ ಭಾಷೆಯೂ ಕತೆಯನ್ನು ನಮಗೆ ಅರ್ಥೈಸಿರುವ ರೀತಿ, ಬಳಸಿರುವ ಶೈಲಿ ಅನನ್ಯವಾದುದು. ಕಾವ್ಯವನ್ನು ಓದುತ್ತಾ ಹೋದಾಗ ಜೀವನ ಮೌಲ್ಯಗಳನ್ನು ನಮ್ಮಲ್ಲಿ ಪುನರ್‌ಸ್ಥಾಪಿಸಿ ನಮ್ಮ ಚಿತ್ತವನ್ನು ಧರ್ಮ ಮಾರ್ಗದತ್ತ ಕೊಂಡೊಯ್ಯುತ್ತದೆ. ಕಾವ್ಯದ ನಿರೂಪಣೆಯ ನಡುನಡುವೆ ನೀಡಿರುವಂತಹ ಸಾಂದರ್ಭಿಕ ಚಿತ್ರಗಳು ನಮ್ಮ ಓದಿನ ಅರ್ಥ ವಿಸ್ತಾರವನ್ನು ಹೆಚ್ಚಿಸುತ್ತದೆ ಎಂದರು.

ಕೊನೆಗೆ ನೀಡಿರುವ ಪದಕೋಶ ಓದುಗರಿಗೆ ಕಾವ್ಯವನ್ನು ಇನ್ನಷ್ಟು ಸರಳಗೊಳಿಸುತ್ತಾ ಹೋಗುತ್ತದೆ. ಪುರಾಣವನ್ನು ಕನ್ನಡದಲ್ಲಿ ಕಟ್ಟಿದ ಸೊಬಗು ಅನುಕರಣೀಯ. ಬಾಲ್ಯದಲ್ಲಿ ನಾವೆಲ್ಲರೂ ರಾಮಾಯಣ, ಮಹಾಭಾರತದ ಕತೆಗಳನ್ನು ಪಠ್ಯಪುಸ್ತಕದಲ್ಲಿ ಓದಿ ತಿಳಿದಿದ್ದೇವೆ, ಹಿರಿಯರಿಂದ ಕೇಳಿ ತಿಳಿದಿದ್ದೇವೆ, ಟಿವಿಯ ಎದುರು ಕೂತು ನೋಡಿದ್ದೇವೆ. ಹಾಗೇಯೇ ಮುಂದೆ ಕೆಲಸ 'ಕಾರ್ಯದ ಒತ್ತಡಗಳ ನಡುವೆ ಮರೆತು ಬಿಟ್ಟಿದ್ದೇವೆ. ಆದರೆ ಮೈಯೆಲ್ಲ ಕಣ್ಣಾಗಿಸಿ ಮಾತೆಯ ರೂಪದಲ್ಲಿರುವ ಈ ಭರತ ಮಾತೆಯನ್ನು ಕಾಯುವ ಸೇವೆಯಲ್ಲಿದ್ದುಕೊಂಡು, ಮತ್ತೆ ಮತ್ತೆ ರಾಮಾಯಣವನ್ನು ಬಲ್ಲವರಿಂದ ಓದಿ, ಕೇಳಿ, ತಿಳಿದು ಅತ್ಯಂತ ಆಸಕ್ತಿಯಿಂದ, ಭಕ್ತಿ' ಭಾವದಿಂದ ಇಂತಹ ಮಹಾಕಾವ್ಯವನ್ನು ಬರೆದಿರುವ ಶ್ರೀ ಸಂಜಯ್ ದೇಸಾಯಿ ಅವರಿಗೆ ಕನ್ನಡಿಗರೆಲ್ಲರೂ ಅಭಿನಂದನೆಯನ್ನು ಸಲ್ಲಿಸಲೇಬೇಕು. ಪ್ರತಿ ಕ್ಷಣ ಕ್ಷಣವೂ ಕೈ ಬೆರಳುಗಳಲ್ಲಿ ಮೊಬೈಲ್ ಕುಣಿಸಿ ಬ್ಯುಸಿ ಎನ್ನುವ ಎಲ್ಲರಿಗೂ ದೇಸಾಯಿ ಅವರು ಮಾದರಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘವು ಕನ್ನಡ ಭಾಷೆ ಮತ್ತು ಸಾಹಿತ್ಯದ ಪೋಷಣೆಗೆ ಸದಾ ಸಹಕಾರ ನೀಡುತ್ತಿದೆ. ಸಂಘದಲ್ಲಿ ಅಮೃತ ಮಹೋತ್ಸವದ ಸಂದರ್ಭದಲ್ಲಿ ಹಲವಾರು ಪುಸ್ತಕಗಳ ಕೃತಿ ಅವಲೋಕನ ಕಾರ್ಯಕ್ರಮಗಳು ಆಯೋಜನೆಯಾಗಿವೆ. ಇನ್ನು ಮುಂದೆಯೂ ಸಹ ಕನ್ನಡ ಸಾಹಿತ್ಯಿಕ ಬೆಳವಣಿಗೆಗಾಗಿ, ಪುಸ್ತಕಗಳ ಬಿಡುಗಡೆಗಾಗಿ, ವಿವಿಧ ಕಾರ್ಯಕ್ರಮಗಳ ಆಯೋಜನೆಗೆ ಪ್ರೋತ್ಸಾಹಿಸಲಾಗುವುದು. 'ಹನುಮದಾಸನ ರಾಮಾಯಣ ಮಹಾಕಾವ್ಯ' ಕೃತಿಯ ಲೇಖಕರಾದ ಗ್ರೂಪ್ ಕ್ಯಾಪ್ಟನ್ ಸಂಜಯ ದೇಸಾಯಿ ಅವರಿಂದ ಇನ್ನು ಹತ್ತಾರು ಪುಸ್ತಕಗಳು ಹೊರಬಂದು ದೆಹಲಿ ಕರ್ನಾಟಕ ಸಂಘದಲ್ಲಿ ಬಿಡುಗಡೆಯಾಗಲಿ ಎಂದು ಅವರು ಹಾರೈಸಿದರು.

ಸುಮಾರು ಮೂರು ಗಂಟೆಗಳ ಕಾಲ ನಡೆದ ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು ಸ್ವಾಗತ ಭಾಷಣ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಕಾರ್ಯಕ್ರಮದ ವಂದನಾರ್ಪಣೆಯನ್ನು ನಡೆಸಿಕೊಟ್ಟರು. ಆಸಕ್ತ ಸಾಹಿತ್ಯಾಭಿಮಾನಿಗಳು, ದೆಹಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ, ಕೃತಿ ಅವಲೋಕನ ಮಾಡಿದವರಿಗೆ ಮತ್ತು ಕೃತಿ ಲೇಖಕರಿಗೆ ಸಂಘದ ಪರವಾಗಿ ಸ್ಮರಣಿಕೆ, ಸ್ಮರಣಸಂಚಿಕೆ ನೀಡಿ ಗೌರವ ಸಮರ್ಪಣೆ ಮಾಡಲಾಯಿತು.■

***ಅಭಿಮತ ವರದಿ***

## ಅಭಿಮತ ಓದುಗರ ಅನಿಸಿಕೆ

ಅಂದು ಹುಟ್ಟಿದ ನೀನು ಇದೀಗ
ಭಿನ್ನ ವಿಭಿನ್ನ ಮಣಿಗಳ ಮಾಲೆ ಧರಿಸಿ
ಮನಮೋಹಕವಾಗಿ ಅಲಂಕರಿಸಿಕೊಂಡು
ತಂಪು, ಇಂಪು, ಕಂಪು, ಪೆಂಪುಗಳನ್ನು ಪಸರಿಸುತ್ತಾ ಸುಂದವಾಗಿ ಕಾಣುತ್ತಿರುವೆ
ನಿನ್ನ ಭಂಡಾರದಲ್ಲಿ ಕಣ್ಣುಗಳನ್ನು ತೂರಿಸಿ ಮನಸ್ಸಿಗೆ
ಆಹ್ಲಾದವಾಗಿರುವ ವಿಷಯಗಳಲ್ಲಿ ಪಾಲ್ಗೊಳ್ಳುವ ನಾನು
ದೆಹಲಿ ಕನ್ನಡತಿ ! ನೀನು ಶಿಶುವಾಗಿ, ಕಿಶೋರಿಯಾಗಿ, ಕನ್ಯೆಯಾಗಿ
ಈಗ ಪ್ರೌಢಳಾಗಿದ್ದೀಯ. ನಿನ್ನನ್ನು ಕಾಪಾಡುತ್ತಿರುವ
ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿ ಮತ್ತು ಸಂಪಾದಕರಿಗೂ
ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು.
ನಿನ್ನ ಮಡಿಲಲ್ಲಿ ಪಾಲ್ಗೊಂಡ ನಾನು ಎಂದೆಂದೂ ಅನುದಿನವೂ
ಅನವರತ ತ್ರ್ಯಕ್ಷರಿ ಕನ್ನಡ ಮಾತೆ ಗೀರ್ವಾಣಿಯನ್ನು
ಪ್ರಾರ್ಥಿಸಿ ನೀನು ನೂರ್ಕಾಲ ಬದುಕು ಎಂದು
ಹಾರೈಸಿ ನಿನ್ನ ಪೋಷಕರನ್ನು ಅಭಿನಂದಿಸುತ್ತೇನೆ
ನಿನ್ನ ಜ್ಞಾನ ಭಂಡಾರ ಎಲ್ಲರಿಗೂ ಆಪ್ಯಾಯಮಾನವಾಗಿದೆ.
ಇಂತೆಯೇ ಇರಲಿ, ಹೀಗೆಯೇ ನಡೆ ಮುಂದೆ ನಡೆ ಮುಂದೆ...

***ಡಾ. ಅಹಲ್ಯಾಚಿಂತಾಮಣಿ***
ಹಿರಿಯ ದೆಹಲಿ ಕನ್ನಡತಿ

# ಸಂಘದಲ್ಲಿ ಉನ್ನತ ಶಿಕ್ಷಣ, ವೃತ್ತಿಪರ ಕೋರ್ಸುಗಳ ಕುರಿತು ಅಧಿಕಾರಿಗಳು, ವಿಶೇಷಜ್ಞರಿಂದ ಮಾಹಿತಿ ಮತ್ತು ಪೋಷಕರು, ಮಕ್ಕಳೊಂದಿಗೆ ಸಮಾಲೋಚನೆ





ದೆಹಲಿ ಕರ್ನಾಟಕ ಸಂಘವು ತನ್ನ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಸಂಘದ ಸದಸ್ಯರುಗಳಿಗೆ, ದೆಹಲಿ ಕನ್ನಡಿಗರಿಗೆ ಅವರ ಮಕ್ಕಳಿಗೆ ಅನುಕೂಲವಾಗುವಂತಹ ಹಲವಾರು ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಜುಲೈ 2, 2023ರಂದು ಭಾನುವಾರ ಸಂಜೆ 5.00 ಗಂಟೆಗೆ ಸಂಘದ ವಿಚಾರಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾದ ಉನ್ನತ ಶಿಕ್ಷಣ, ವೃತ್ತಿಪರ ಕೋರ್ಸುಗಳ ಕುರಿತು ಗಣ್ಯ ಅಧಿಕಾರಿಗಳು ಹಾಗು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಹಾಗೂ ಪೋಷಕರು, ಮಕ್ಕಳೊಂದಿಗೆ ಸಮಾಲೋಚನೆ ಕಾರ್ಯಕ್ರಮ ಒಂದಾಗಿತ್ತು ಸಂಘದಲ್ಲಿ ಪ್ರಥಮ ಬಾರಿಗೆ ಇಂತಹ ಕಾರ್ಯಕ್ರಮದ ಆಯೋಜನೆ, ಹೊಸ ಶೈಕ್ಷಣಿಕ ವರ್ಷವು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸಾಂದರ್ಭಿಕವಾಗಿದ್ದು, ದೆಹಲಿ ಕನ್ನಡಿಗರ, ಪೋಷಕರ ಮತ್ತು ಮಕ್ಕಳ ಪ್ರಶಂಸೆಗೆ ಪಾತ್ರವಾಗಿದೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ **ಸಿ.ಎಂ. ನಾಗರಾಜ** ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಪೋಲಿಸ್ ಅಧಿಕಾರಿಗಳಾದ ಶ್ರೀ ಎನ್. ರಾಜಶೇಖರ್ ಐ.ಪಿ.ಎಸ್. ಆಗಮಿಸಿದ್ದರು. ನಾಗಾಲ್ಯಾಂಡ್ 'ಕ್ಯಾಡೆರ್ ಐ.ಪಿ.ಎಸ್. ಅಧಿಕಾರಿಯಾದ ಇವರು ಪ್ರಸ್ತುತ ಬ್ಯುರೋ ಆಫ್ ಪೋಲಿಸ್ ರೀಸರ್ಚ್ ಅಂಡ್ ಡೆವಲಪ್ ಮೆಂಟ್ (BPR&D) ನಲ್ಲಿ ಡಿ.ಐ.ಜಿ. ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪೋಷಕರು ಮತ್ತು ಮಕ್ಕಳಿಗೆ ಮಾಹಿತಿ ನೀಡಲು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಿ.ಸಿ. ಮಂಜುನಾಥ್ ಐ.ಎಫ್.ಎಸ್. ಜಂಟಿ ಕಾರ್ಯದರ್ಶಿ (ಗ್ಲೋಬಲ್ ಎಸ್ಟೇಟ್ ಮ್ಯಾನೇಜ್‌ಮೆಂಟ್) ವಿದೇಶಾಂಗ ವ್ಯವಹಾರಗಳ ಸಚಿವಾಲಯ ಭಾರತ ಸರ್ಕಾರ, ಪ್ರೊ. ರಂಗನಾಥ ಎಂ. ಸಿಂಗಾರಿ, ಮುಖ್ಯಸ್ಥರು, ವಿನ್ಯಾಸ ವಿಭಾಗ, ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ (ಡಿ.ಟಿ.ಯು) ನವದೆಹಲಿ, ಡಾ. ಜಿ.ಸಿ. ರಘುನಾಥ್ ರೆಡ್ಡಿ, ವಿಜ್ಞಾನಿ ಹಾಗು ನಿರ್ದೇಶಕರು, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಭಾರತ ಸರ್ಕಾರ, ಡಾ. ಎಸ್.ಎಲ್. ಭಂಡಾರ್‌ಕರ್, ಪರೀಕ್ಷಾ ನಿಯಂತ್ರಕರು, ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯ, ನವದೆಹಲಿ, ಡಾ. ಜಗದೀಶ್ ಆರ್.ಎಸ್, ಡೀನ್ ಅಕಾಡೆಮಿಕ್ಸ್ ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಶನ್, ನೋಯ್ಡಾ, ಡಾ. ತ್ಯಾಗರಾಜು ಬಿ..ಎಂ. ಉಪ ಸಲಹೆಗಾರರು, ನೀತಿ ಆಯೋಗ, ಭಾರತ ಸರ್ಕಾರ ಹಾಗು ಕಾನ್ಸರ್ ತಜ್ಞ ಡಾ. ಬಿ. ನಿರಂಜನ್ ನಾಯ್ಕ್, ನಿರ್ದೇಶಕರು, ಸರ್ಜಿಕಲ್ ಒಂಕಾಲಜಿ ವಿಭಾಗ ಹಾಗು ರೋಬೋಟೆಕ್ ಸರ್ಜನ್, ಫೋರ್ಟೀಸ್ ಮೆಮೋರಿಯಲ್ ರೀಸರ್ಚ್ ಇನ್ಸ್ಟಿಟ್ಯೂಟ್, (FMRI) ಗುರುಗ್ರಾಮ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿಯವರು ನಡೆಸಿಕೊಟ್ಟರು ಹಾಗು ಆಗಮಿಸಿದ್ದ ಮುಖ್ಯ ಅತಿಥಿಗಳ ಹಾಗು ಸಂಪನ್ಮೂಲ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯವನ್ನು ಸಭೆಯಲ್ಲಿ ನೆರೆದಿದ್ದವರಿಗೆ ಮಾಡಿಕೊಟ್ಟರು. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸುತ್ತಾ ಸಂಕ್ಷಿಪ್ತ ವಿವರ ನೀಡಿ, ಪೋಷಕರು ಮತ್ತು ಮಕ್ಕಳಿಗೆ ಉನ್ನತ ಶಿಕ್ಷಣದ ಬಗ್ಗೆ, ಯಾವ ಕೋರ್ಸುಗಳನ್ನು ಆಯ್ಕೆ ಮಾಡಬೇಕೆಂಬ ಸೂಕ್ತವಾದ ಮಾಹಿತಿ ಸರಿಯಾದ ಸಮಯದಲ್ಲಿ ಸಿಗುವುದು ಬಹಳ ಮುಖ್ಯವಾಗುತ್ತದೆ ಎಂಬುದನ್ನು ತಮ್ಮದೇ ನಿದರ್ಶನ ನೀಡುತ್ತಾ, ಆ ನಿಟ್ಟಿನಲ್ಲಿ ಇಂದಿನ ಕಾರ್ಯಕ್ರಮ ಸಮಯೋಚಿತವಾಗಿದೆ ಮತ್ತು ನಮ್ಮ ದೆಹಲಿ ಕನ್ನಡಿಗರ ಮಕ್ಕಳಿಗೆ ಪ್ರಯೋಜನವಾಗಲಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರಾದ ಶ್ರೀ ಆನಂದಮೂರ್ತಿ ಮತ್ತು ಶ್ರೀಮತಿ ಶೀಲಾ ಆನಂದ್ ಅವರ ಪುತ್ರ ಶ್ರೀ ಭೀಮಸೇನ ಜೋಷಿಯವರ ಶಿಷ್ಯ ಪಂಡಿತ್ ಶ್ರೀ ಹರೀಶ್ ತಿವಾರಿಯವರಿಂದ ಹಿಂದುಸ್ತಾನಿ ಗಾಯನ ತರಬೇತಿ ಪಡೆದ ಕುಮಾರ ಪ್ರಭಂಜನ್ ಆನಂದ್ ರವರ ಪುರಂದರ ದಾಸರ ಗೀತೆಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.



ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ವಿಜ್ಞಾನಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಹಾಗು ಕರ್ನಾಟಕ ಸಂಘದ ಉಪಾಧ್ಯಕ್ಷರಾದ **ಡಾ. ಎಂ.ಎಸ್. ಶಶಿಕುಮಾರ್** ಅವರು ಆಗಮಿಸಿದ್ದ ಮುಖ್ಯ ಅತಿಥಿಗಳನ್ನ, ಸಂಪನ್ಮೂಲ ವ್ಯಕ್ತಿಗಳನ್ನು ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘದ ಅಮೃತ ಕಾರ್ಯ ಕಾಲದಲ್ಲಿ, ಮೂಲ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಇಂದಿನ ಕಾರ್ಯಕ್ರಮದ ಆಯೋಜನೆ ಹಿನ್ನೆಲೆಯನ್ನು ವಿವರಿಸುತ್ತಾ, 10 ನೇ ಮತ್ತು 12ನೇ ತರಗತಿಗಳು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖವಾದ ಮತ್ತು ನಿರ್ಣಾಯಕವಾದ ಶೈಕ್ಷಣಿಕ ಘಟ್ಟಗಳಾಗಿವೆ.ಮೃಗತ್ವದಿಂದ ಮಾನವತ್ವದ ಕಡೆಗೆ ಕೊಂಡೊಯ್ಯುವ ಸಾಧನವೇ ಶಿಕ್ಷಣ, ಜೀವನದ ತತ್ವಗಳನ್ನು ತಿಳಿದುಕೊಳ್ಳಲು, ವೃತ್ತಿ ಆಯ್ಕೆ ಮಾಡಲು ಮತ್ತು ಗುರಿಯ ಅನ್ವೇಷಣೆ ಮಾಡಲು ಸಹಕಾರಿಯಾಗುತ್ತದೆ, ವೃತ್ತಿಪರ ಶಿಕ್ಷಣ ಉತ್ತಮ ಕಲಿಕೆಯ ಅನುಭವ ಮತ್ತು ಕೌಶಲ್ಯವನ್ನು ಹೆಚ್ಚಿಸುತ್ತದೆ,

ಆದ್ದರಿಂದ ಈ ಅವಶ್ಯಕತೆಗಳನ್ನು ಮನಗಂಡು ನಮ್ಮ ಸಂಘವು ಪ್ರಸ್ತುತ ಅಧ್ಯಕ್ಷರ ಪರಿಕಲ್ಪನೆಯಂತೆ ಅವರ ನೇತೃತ್ವದಲ್ಲಿ ದೆಹಲಿಯಲ್ಲಿರುವ ಹಿರಿಯ ಐಎಫ್‌ಎಸ್, ಐಪಿಎಸ್ ಅಧಿಕಾರಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು, ಹಿರಿಯ ತಜ್ಞ ವೈದ್ಯರುಗಳೊಂದಿಗೆ ಪ್ರಥಮ ಬಾರಿಗೆ ಪೋಷಕರು ಮತ್ತು ಮಕ್ಕಳಿಗೆ ಅನುಕೂಲವಾಗಲು ಇಂದಿನ ಕಾರ್ಯಕ್ರಮವನ್ನು ಆಯೋಜಿಸಿರುವುದು ವಿಶೇಷ ಪ್ರಯತ್ನ ಮತ್ತು ಔಚಿತ್ಯಪೂರ್ಣವಾಗಿದೆ ಎಂದು ಹೇಳಿದರು.



ಸಂಪನ್ಮೂಲ ವ್ಯಕ್ತಿಗಳಲ್ಲಿ ಮೊದಲಿಗೆ ಮಾತನಾಡಿದ ಐಎಫ್‌ಎಸ್ ಅಧಿಕಾರಿಗಳಾದ **ಶ್ರೀ ಡಿ.ಸಿ. ಮಂಜುನಾಥ್** ಅವರು, ಪ್ರತಿಯೊಬ್ಬ ಪೋಷಕರು ಮತ್ತು ಮಕ್ಕಳಿಗೆ ಉನ್ನತ ಶಿಕ್ಷಣದ ಬಗ್ಗೆ ಗೊಂದಲವಿರುತ್ತದೆ, ಮಕ್ಕಳಿಗೆ ಆರಂಭದಲ್ಲೇ ಸರಿಯಾದ ಮಾರ್ಗದರ್ಶನ ದೊರೆತಲ್ಲಿ, ಮುಂದೆ ಸೂಕ್ತ ಕೋರ್ಸ್ ಆಯ್ಕೆ ಮಾಡಲು ಸಹಾಯವಾಗುತ್ತದೆ. ಈ ನಿಟ್ಟಿನಲ್ಲಿ ಸಂಘವು ಆಯೋಜಿಸಿರುವ ಇಂದಿನ ಕಾರ್ಯಕ್ರಮ ಶ್ಲಾಘನೀಯ. ಅಂಬಿಷನ್ ಇದ್ದರೆ ಹೆಜಿಟೇಶನ್ ಬಿಡಬೇಕು, ಅಡ್ಮಿನಿಸ್ಟ್ರೇಟಿವ್, ಪೊಲೀಸ್, ಫಾರಿನ್ ಮತ್ತು ರೆವೆನ್ಯೂ ಸರ್ವಿಸ್ ಗಳಂತಹ ನಾಗರಿಕ ಸೇವಾ ಹುದ್ದೆಗಳಿಗೆ, ಆಯ್ಕೆಯಾಗಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉತ್ತಮ ತಯಾರಿ ಮತ್ತು ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ ಎಂದರು.




ಡಿಟಿಯುನ **ಪ್ರೊ. ಡಾ. ರಂಗನಾಥ ಎಂ. ಸಿಂಗಾರಿಯವರು** ಮಾತನಾಡಿ. ಮಾತೃದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ ಮತ್ತು ಅತಿಥಿ ದೇವೋ ಭವ ಎನ್ನುವುದು ತಮ್ಮ ತಾಯಿಯಿಂದ ಮೊಟ್ಟಮೊದಲ ಬಾರಿಗೆ ಕಲಿತ ಸಾಲುಗಳು, ಮಕ್ಕಳಿಗಿಂತ ತಂದೆ ತಾಯಿಗಳಿಗೆ ಬುದ್ಧಿ ಹೇಳುವ ದಿನಗಳು ಈಗ ಇವೆ, ಮಕ್ಕಳು ನಮಗಿಂತ ಈಗ ಜಾಣರಾಗಿದ್ದಾರೆ, ನೀನು ನಿನ್ನನ್ನು ಗುರುತಿಸಿಕೊಂಡರೆ ಜನ ನಿನ್ನನ್ನು ಗುರುತಿಸುವರು ಎಂಬ ಸಾಲುಗಳನ್ನು ಉಲ್ಲೇಖಿಸಿ ಪೋಷಕರು ಮತ್ತು ಮಕ್ಕಳು ಉನ್ನತ ಶಿಕ್ಷಣದ ಆಯ್ಕೆಗೆ ಒಟ್ಟಾಗಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಎಂದರು.




ನೋಯಿಡಾ ಜೆಎಸ್‌ಎಸ್ ಸಂಸ್ಥೆಯ ಡೀನ್ ಅಕಾಡೆಮಿಕ್ಸ್ **ಡಾ. ಆರ್. ಎಸ್. ಜಗದೀಶ** ಅವರು. 12ನೇ ತರಗತಿಯ ನಂತರ ವಿಜ್ಞಾನ, ಕಲೆ, ವಾಣಿಜ್ಯ, ಇಂಜಿನಿಯರಿಂಗ್, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿ ಮಕ್ಕಳು ಆರಿಸಿಕೊಳ್ಳಬಹುದಾದ ವಿವಿಧ ಕೋರ್ಸ್‌ಗಳ ಬಗ್ಗೆ ಹಾಗು ನ್ಯಾಷನಲ್ ಡಿಜಿಟಲ್ ಲೈಬ್ರರಿ ಕುರಿತು ವಿವರವಾದ ಮಾಹಿತಿ ನೀಡಿದರು. ಈಗ ಕಂಪ್ಯೂಟರ್ ಸೈನ್ಸ್, ಐಟಿ, ಎಲೆಕ್ಟ್ರಾನಿಕ್ಸ್ ಮುಂತಾದ ಕ್ಷೇತ್ರಗಳಲ್ಲಿ ಮ್ಯಾಡ್ ರಷ್ ಆಗ್ತಾ ಇದೆ, ಆದರೆ ಬೇರೆ ಬೇರೆ ಕ್ಷೇತ್ರಗಳಲ್ಲಿಯೂ ಬಹಳಷ್ಟು ಬೇಡಿಕೆ ಇದೆ, ಪೋಷಕರು ಮಕ್ಕಳಿಗೆ ಜಾಸ್ತಿ ಒತ್ತಡ ಹೇರಬಾರದು, ಯಾವುದಾದರೂ ವಿಷಯವನ್ನು ಮಕ್ಕಳು ಆಯ್ಕೆ ಮಾಡಬಹುದು, ಅದಕ್ಕೆ ಕಠಿಣ ಪರಿಶ್ರಮ ಮಾಡಬೇಕು For achivement Sky is the limit, ಎಂದು ತಿಳಿಸಿದರು.



ಗುರುಗ್ರಾಮದ ಫೋರ್ಟಿಸ್ (FMRI) ಆಸ್ಪತ್ರೆಯ ಕ್ಯಾನ್ಸರ್ ತಜ್ಞರಾದ **ಡಾ. ನಿರಂಜನ್ ನಾಯ್ಕ್** ಅವರು. ವೈದ್ಯಕೀಯ ಕ್ಷೇತ್ರದಲ್ಲಿ ವಿವಿಧ ವೃತ್ತಿಪರ ಕೋರ್ಸ್ ಗಳ ಬಗ್ಗೆ ವಿವರಗಳನ್ನು ತಿಳಿಸಿದರು. ಮಕ್ಕಳಿಗೆ ಜಾಸ್ತಿ ಒತ್ತಡ ಹೇರಬಾರದು, ಕೇವಲ ಮಾರ್ಕ್ಸ್ ಮುಖ್ಯವಲ್ಲ, ಶಾಲೆಗಳಲ್ಲಿ ಮಕ್ಕಳ ಕೌನ್ಸಿಲರ್ಸ್ ಇರಬೇಕು ಮತ್ತು the children should be encouraged to develop never quit attitude, failing is ok, but, failure is the stepping stone for success, life is beautiful and life is precious, our breath is the life ಎಂದರು. ಡಾಕ್ಟರ್ ಆದರೆ ಜೀವನೋಪಾಯಕ್ಕೆ (ರೋಟಿ, ಕಪಡ, ಮಕಾನ್‌ಗೆ) ಏನೂ ಸಮಸ್ಯೆ ಇರುವುದಿಲ್ಲ. ವೈದ್ಯಕೀಯ ಕ್ಷೇತ್ರ ಹೊರತಾಗಿ ಬೇರೆ ಬೇರೆ ವಿಭಾಗಗಳಲ್ಲಿಯೂ ಶಿಕ್ಷಣ ಪಡೆದುಕೊಳ್ಳಬಹುದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಕುಮಾರ ಪ್ರಭಂಜನ್ ಆನಂದ್ ಬಸವಣ್ಣರ ವಚನ ಗಾಯನವನ್ನು ಈ ನಡುವೆ ಪ್ರಸ್ತುತಪಡಿಸಿದರು.



ವಿಜ್ಞಾನಿ **ಡಾ. ಜಿ.ಸಿ. ರಘುನಾಥ್ ರೆಡ್ಡಿ** ಅವರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರದ ನಾನಾ ಫೆಲೋಶಿಪ್ ಪ್ರೋಗ್ರಾಂಗಳ ಬಗ್ಗೆ ವಿವರ ನೀಡಿದರು. ಪೋಷಕರು ಮಕ್ಕಳನ್ನು ಗಮನಿಸಿ ಅವರ ಆಸಕ್ತ ವಿಷಯಗಳಲ್ಲಿ ಅವರ ಉನ್ನತ ಶಿಕ್ಷಣವನ್ನು ಮುಂದುವರಿಸಲು ಉತ್ತೇಜನ ನೀಡಬೇಕು, ಮಕ್ಕಳು ಸಹ ತಮಗೆ ಆಕರ್ಷಕವಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಮುಂದುವರಿಯಬೇಕು, Take informed decision while choosing professional courses. Parents should not put peer pressure on children ಎಂದರು. ಭಾರತ ಸರ್ಕಾರದಿಂದ ನೀಡಲಾಗುವ ವಿವಿಧ ವಿದ್ಯಾರ್ಥಿ ವೇತನಗಳ ಬಗ್ಗೆ ಮಾಹಿತಿ ಹಂಚಿಕೊಂಡರು. **(ಇದರ ವಿವರ ಮುಂದೆ ಪುಟ 27 ರಲ್ಲಿದೆ)**



ನೀತಿ ಆಯೋಗದ ಉಪಸಲಹೆಗಾರರಾದ **ಡಾ. ತ್ಯಾಗರಾಜು ಬಿ.ಎಂ.** ಅವರು ಮಾತನಾಡುತ್ತಾ, ಪ್ರತಿಯೊಬ್ಬರಿಗೂ ಮೊಬೈಲ್ ಎಂಬ ಉತ್ತಮ ಸಾಧನ, ಸಂಪನ್ಮೂಲ ಈಗ ಲಭ್ಯವಾಗಿದೆ. ಫೋನಿನ ಮುಖಾಂತರ ಈ ಯುಗದಲ್ಲಿ, ಶಿಕ್ಷಣದ ಕೋರ್ಸ್‌ಗಳ ಬಗ್ಗೆ ಉತ್ತಮ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ, ದೆಹಲಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಆಗಲು ಉತ್ತಮ ಸೌಕರ್ಯಗಳಿವೆ, ಡಿಫೆನ್ಸ್ ಸರ್ವಿಸಸ್‌ನಲ್ಲಿ, ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಹಾಗು ಫುಡ್ ಟೆಕ್ನಾಲಜಿ ಕ್ಷೇತ್ರಗಳಲ್ಲಿ ಉತ್ತಮ ಬೇಡಿಕೆ ಇರುವುದರಿಂದ ಮಕ್ಕಳು ತಮ್ಮ ಶಿಕ್ಷಣವನ್ನು ಈ ವಿಷಯಗಳಲ್ಲಿ ಮುಂದುವರಿಸಬಹುದು, ಮಾಹಿತಿ ತಂತ್ರಜ್ಞಾನವನ್ನು ಹೆಚ್ಚು ಹೆಚ್ಚು ಬಳಸಬೇಕು ಎಂದು ತಿಳಿಸುತ್ತಾ ಹಾಗು ಅಟಲ್ ಇನ್ನೋವೇಶನ್ ಮಿಷನ್ ಬಗ್ಗೆ ಸಹ ಮಾಹಿತಿ ನೀಡಿದರು.

ನವದೆಹಲಿಯ ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಹಿರಿಯ ದೆಹಲಿ ಕನ್ನಡಿಗ **ಡಾ. ಎಸ್.ಎಲ್.**















**ಭಂಡಾರ್ಕರ್** ಅವರು ಮಾತನಾಡಿ ತಾವು ಕಳೆದ 25 ವರ್ಷಗಳಿಂದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿದ ಅನುಭವದ ಹಿನ್ನೆಲೆ ತಾಂತ್ರಿಕ ಶಿಕ್ಷಣದಲ್ಲಿ ಇರುವ ಮೂರು ಭಾಗಗಳ (10ನೇ ತರಗತಿ ನಂತರ ಐಟಿಐ, ಡಿಪ್ಲೋಮಾ ಎಂಜಿನಿಯರಿಂಗ್ ಮತ್ತು 12ನೇ ತರಗತಿ ನಂತರ ಇಂಜಿನಿಯರಿಂಗ್ ಡಿಗ್ರಿ) ಬಗ್ಗೆ ತಿಳಿಸಿದರು. ಪೋಷಕರು ತಮ್ಮ ಕನಸನ್ನ ಮಕ್ಕಳಲ್ಲಿ ನೋಡುವ ಪ್ರಯತ್ನ ಮಾಡಬಾರದು, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ, CET, NEET, CAT, CLAT ಪರೀಕ್ಷೆಗಳು, ಬೇರೆ ಬೇರೆ ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆ ನಡೆಯುವ ಬಗ್ಗೆ ಮಾಹಿತಿಯನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಬೇಕು ಇಲ್ಲವಾದರೆ, ಅವುಗಳನ್ನು ಮಿಸ್ ಮಾಡಿಕೊಳ್ಳಬೇಕಾಗುತ್ತದೆ, ಅವುಗಳ ಮಾಹಿತಿಗಳನ್ನು ಕಾಲ ಕಾಲಕ್ಕೆ, ಇಂಟರ್‌ನೆಟ್ ಮತ್ತು ಇತರ ಮಾಧ್ಯಮಗಳ ಮೂಲಕ ಪೋಷಕರು ಮತ್ತು ಮಕ್ಕಳು ಪಡೆದುಕೊಳ್ಳಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಮುಖ್ಯ ಅತಿಥಿಗಳಾದ ಹಿರಿಯ ಐಪಿಎಸ್ ಅಧಿಕಾರಿ **ಶ್ರೀ ಎನ್. ರಾಜಶೇಖರ್** ಅವರು ಮಾತನಾಡಿ,ಪ್ರಥಮವಾಗಿ ಇಂತಹ ಉತ್ತಮ ಕಾರ್ಯಕ್ರಮವನ್ನು ಏರ್ಪಡಿಸಿದ್ದಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ಮಕ್ಕಳು 7ನೇ ತರಗತಿಯಲ್ಲಿ ನವೋದಯ ಶಾಲೆಗಳಿಗೆ ನಡೆಯುವ ಪರೀಕ್ಷೆ, 10ನೇ ತರಗತಿಯವರಿಗೆ ನ್ಯಾಷನಲ್ ಟ್ಯಾಲೆಂಟ್ ಸರ್ಚ್ ಪರೀಕ್ಷೆ, ಎನ್‌ಸಿಸಿ, ಕಂಬೈಂಡ್ ಡಿಫೆನ್ಸ್ ಸರ್ವಿಸಸ್ ಪರೀಕ್ಷೆ ಮುಂತಾದವುಗಳನ್ನು ತೆಗೆದುಕೊಳ್ಳಬಹುದು. ಮನೆಯಲ್ಲಿ ಕುಳಿತುಕೊಂಡು ನ್ಯಾಷನಲ್ ವೊಕೇಷನಲ್ ಕೋರ್ಸ್‌ಗಳನ್ನು ಮಾಡಬಹುದು, ತಾವು ಪ್ರತಿಯೊಂದು ಪದವಿಯನ್ನು ಇಗ್ನೋ (IGNOU) ಇಂದ, ಕೆರೆಸ್‌ಪಾಂಡೆನ್ಸ್ ಮೂಲಕ ಪಡೆದಂತೆ, ಮಕ್ಕಳು ಸಹಾ ಅಲ್ಲಿಂದ ಶಿಕ್ಷಣ ಪಡೆಯಬಹುದು, ಆಟೋಟ ಮತ್ತು ಸಂಗೀತ ಕ್ಷೇತ್ರಗಳನ್ನು ಸಹಾ ಆಯ್ಕೆ ಮಾಡಿಕೊಳ್ಳಬಹುದು, ಪ್ರತಿದಿನ ಒಂದು ಗಂಟೆ ಟಿವಿ ನೋಡುವ ಮೂಲಕ ಮತ್ತು ಕನಿಷ್ಠ ಪಕ್ಷ ಅರ್ಧ ಗಂಟೆ ದಿನ ಪತ್ರಿಕೆಗಳನ್ನು ಓದುವ ಮೂಲಕ, ಯೂಟ್ಯೂಬ್, ಗೂಗಲ್ ವೀಕ್ಷಿಸುವ ಮೂಲಕ ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದು. ಮಕ್ಕಳಿಗೆ ಸೋಮಾರಿತನ ಕಲಿಸಬಾರದು, ಕೃಷಿ ಮತ್ತು ಫಾರ್ಮಿಂಗ್ ಕ್ಷೇತ್ರಗಳನ್ನು ಸಹಾ ಆಯ್ಕೆ ಮಾಡಿಕೊಳ್ಳಬಹುದು. ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಹೆಚ್ಚು ಭಾಗವಹಿಸಬೇಕು, ಇದರಿಂದ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ, ರಕ್ಷಣಾಪಡೆಗಳ ಕ್ಷೇತ್ರದಲ್ಲಿಯೂ




ಸಹಾ ಶಿಕ್ಷಣವನ್ನು ಮುಂದುವರಿಸಬಹುದು, ಮಕ್ಕಳು ಹೆಚ್ಚು ಬರೆಯುವ ಅಭ್ಯಾಸ ಮಾಡಬೇಕು, ಪ್ರಚಲಿತ ವಿದ್ಯಮಾನಗಳ ವಿಷಯಗಳನ್ನು ಟಿವಿ ಮಾಧ್ಯಮ, ದಿನಪತ್ರಿಕೆಗಳ ಮೂಲಕ ಪಡೆದುಕೊಳ್ಳಬೇಕು, ನಾಗರಿಕ ಸೇವಾ ಪರೀಕ್ಷೆಗಳಿಗೆ ಸ್ಪರ್ಧಿಸುವವರು, ಹಿಸ್ಟರಿ, ಜಿಯೋಗ್ರಾಫಿ, ಎಕನಾಮಿಕ್ಸ್ ಮತ್ತು ಪೊಲಿಟಿಕಲ್ ಸೈನ್ಸ್ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಅವಕಾಶ, ಇಂಜಿನಿಯರಿಂಗ್ ಪಡೆದವರು ಸಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ ಎಂದು ಸವಿಸ್ತಾರವಾಗಿ ವಿಷಯಗಳನ್ನು ತಿಳಿಸುತ್ತಾ ತಮ್ಮ ಅಭಿಪ್ರಾಯಗಳನ್ನು ಕಾರ್ಯಕ್ರಮದಲ್ಲಿ ಹಂಚಿಕೊಳ್ಳಲು ಅವಕಾಶ ನೀಡಿದ್ದಕ್ಕೆ ಸಂಘದ ಅಧ್ಯಕ್ಷರಿಗೆ ಧನ್ಯವಾದಗಳನ್ನು ತಿಳಿಸಿದರು.

ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಎನ್.ಎ. ಮಾಧವ ಅವರು, ಭೂಮಿಯ ಮೂರನೇ ಎರಡು ಭಾಗದಷ್ಟು ನೀರು ಇರುವುದನ್ನು ಉಲ್ಲೇಖಿಸಿ ಮೆರೈನ್ ಟೆಕ್ನಾಲಜಿ ಮತ್ತು ಓಷನ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಇರುವ ಕೋರ್ಸ್‌ಗಳು ಮತ್ತು ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು. ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ ಮತ್ತು ಶ್ರೀ ಎಸ್. ದತ್ತ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಚನ್ನರಾಯಪಟ್ಟಣದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಕೇಂದ್ರ ಘಟಕದಿಂದ ಆಗಮಿಸಿದ್ದ ಶ್ರೀ ಮನೋಹರ್ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಮಕ್ಕಳ ಪರವಾಗಿ ಕುಮಾರಿ ನಂದಿತಾ ಉಭಾಳೆ ಮತ್ತು ಕುಮಾರ ಸುಮಂತ್ ಆಚಾರ್ಯ ತಮಗೆ ಆಸಕ್ತಿ ಇರುವ ವಿಷಯದ ಬಗ್ಗೆ ತಿಳಿಸಿದರು. ಪೋಷಕರ ಪರವಾಗಿ ಶ್ರೀರಾಮಚಂದ್ರ ಉಭಾಳೆ ಮತ್ತು ಶ್ರೀ ಕೃಷ್ಣರಾಜ್ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಪ್ರಶ್ನೋತ್ತರ ಮತ್ತು ವಿಚಾರ ವಿಮರ್ಶೆಯಲ್ಲಿ ಸಂಘದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಸರವು ಕೃಷ್ಣ ಭಟ್ ಉಪಸ್ಥಿತರಿದ್ದರು. ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ ಸಂಘದ ಮತ್ತು ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು, ದೆಹಲಿ ಕರ್ನಾಟಕ ಸಂಘವು ಸದಾ ಸಂಘದ ಸದಸ್ಯರಿಗೆ ಮತ್ತು ಅವರ ಮಕ್ಕಳಿಗೆ









ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ, ಈ ನಿಟ್ಟಿನಲ್ಲಿ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಮೊಟ್ಟ ಮೊದಲ ಬಾರಿಗೆ ಸಂಘದಲ್ಲಿ ಏರ್ಪಡಿಸಲಾದ ಈ ವಿಚಾರ ಸಂಕಿರಣ ಒಂದು ಉತ್ತಮ ನಿದರ್ಶನ. ನಮ್ಮೊಂದಿಗೆ ಇಂದು ಸಮಯ ನೀಡಿ ಪೋಷಕರು ಮತ್ತು ಮಕ್ಕಳಿಗೆ ವಿಶೇಷ ಮಾಹಿತಿ ಕೊಟ್ಟು ಅವರೊಂದಿಗೆ ವಿಚಾರ ವಿಮರ್ಶೆ ಮಾಡಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಹಾಗು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮದ ಹಿರಿಮೆಯನ್ನು ಹೆಚ್ಚಿಸಿರುವ ಹಿರಿಯ ಐಪಿಎಸ್ ಅಧಿಕಾರಿ ಶ್ರೀ ಎನ್.ದ್ ರಾಜಶೇಖರ್ ಅವರಿಗೆ ಮತ್ತು ಭಾಗಿಯಾದ ಎಲ್ಲಾ ದೆಹಲಿ ಕನ್ನಡಿಗರಿಗೆ ಸಂಘದ ಪರವಾಗಿ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದರು.

ಸಂಘದ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಪ್ರಸ್ತಾಪಿಸುತ್ತಾ, ಇನ್ನೊಂದು ಜಾಗ ಪಡೆಯುವ ಮತ್ತು ದಾಸೋಹ ಕಾರ್ಯಕ್ರಮವನ್ನು ಆರಂಭಿಸುವ ಬಗ್ಗೆ ವಿವರ ನೀಡಿದರು. ಕನ್ನಡಿಗರ ಮಕ್ಕಳಿಗಾಗಿ ಉದ್ಯೋಗ ಮೇಳವನ್ನು ಈಗಾಗಲೇ ಸಂಘದಲ್ಲಿ ಪ್ರಥಮ ಬಾರಿ ಕಳೆದ ವರ್ಷ ಆಯೋಜನೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮ ಕನ್ನಡ ಮಕ್ಕಳಿಗೆ, ಸದಸ್ಯರಿಗೆ ಅನುಕೂಲವಾಗುವಂತಹ ಈ ರೀತಿಯ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ನಾವು ಏರ್ಪಡಿಸುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ, ದೆಹಲಿ ಕರ್ನಾಟಕ ಸಂಘದ ಪರವಾಗಿ ಮುಖ್ಯ ಅತಿಥಿಗಳಿಗೆ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಶಾಲು ಹೊದಿಸಿ, ಸ್ಮರಣಿಕೆ ಮತ್ತು ಸ್ಮರಣಸಂಚಿಕೆ ನೀಡಿ ಗೌರವ ಸಮರ್ಪಣೆ ಮಾಡಲಾಯಿತು. ಪ್ರಾರ್ಥನೆ ಮಾಡಿದ ಕುಮಾರ ಪ್ರಭಂಜನ್ ಆನಂದ್ ಅವರನ್ನು ಅಭಿನಂದಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ಅವರು ಆಗಮಿಸಿದ್ದ ಅತಿಥಿಗಳಿಗೆ ಮತ್ತು ಭಾಗಿಯಾಗಿದ್ದ ಪೋಷಕರು ಮತ್ತು ಮಕ್ಕಳಿಗೆ ವಂದನೆಗಳನ್ನು ಅರ್ಪಿಸಿದರು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು. ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿದ್ದು ಸಂಘದ ಮುಂದಿನ ಉತ್ತಮ ಕಾರ್ಯಗಳಿಗೆ ಉತ್ತೇಜನ ನೀಡಲಿದೆ.

***ಅಭಿಮತ ವರದಿ***

# ದೆಹಲಿ ಕನ್ನಡಿಗರನ್ನು ಅಗಲಿದ ಶ್ರೀ ಹರಿಶ್ಚಂದ್ರ ಬಂಟ್ವಾಳ ಮತ್ತು ಶ್ರೀ ಶಿವಾನಂದ ಹೆಬ್ಬಾರ್ ರವರಿಗೆ ಸಂಘದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಮರ್ಪಣೆ



ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ, ಕ್ರೀಡಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಸಂಘದ ಆಜೀವ ಸದಸ್ಯರಾದ ಶ್ರೀ ಹರಿಶ್ಚಂದ್ರ ಬಂಟ್ವಾಳರು ದಿನಾಂಕ 09.05.2023ರಂದು ಬೆಂಗಳೂರಿನಲ್ಲಿ ನಿಧನರಾದ ಸುದ್ದಿ ರಾಜಧಾನಿ ದೆಹಲಿಯ ಕನ್ನಡಿಗರಿಗೆಲ್ಲ ಅತ್ಯಂತ ದುಃಖದಾಯಕವಾಗಿತ್ತು. ಅದರ ಬೆನ್ನ ಹಿಂದೆಯೇ ಇತ್ತೀಚೆಗೆ, ದಿನಾಂಕ 20.06.2023 ರಂದು ಕೆನರಾ ಬ್ಯಾಂಕಿನ ಹಿರಿಯ ಅಧಿಕಾರಿಗಳೂ ಹಾಗು ಸಂಘದ ಆಜೀವ ಸದಸ್ಯ ಮತ್ತು ಚುನಾವಣೆ ಅಧಿಕಾರಿಯಾಗಿದ್ದ ಶ್ರೀ ಶಿವಾನಂದ ಹೆಬ್ಬಾರ್‌ರವರು ಮೃತರಾಗಿದ್ದು ಅವರುಗಳ ಅಗಲಿಕೆ ಇಲ್ಲಿನ ಕನ್ನಡಿಗರಿಗೆ ತುಂಬಲಾರದ ನಷ್ಟವಾಗಿದೆ.

ಈ ಇಬ್ಬರೂ ಹಿರಿಯ ಕನ್ನಡಿಗರು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ ನಿಸ್ವಾರ್ಥ ಸೇವೆ,ಸಹಕಾರಗಳು ಶ್ಲಾಘನೀಯ ಹಾಗೂ ಪ್ರೇರಣಾದಾಯಕ . ಅಗಲಿದ ಈರ್ವರ ಸ್ಮರಣಾರ್ಥ ದಿ. 02.07.2023 ರಂದು ಭಾನುವಾರ ಸಂಜೆ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಮರ್ಪಿಸಲಾಯಿತು.

ಶ್ರದ್ಧಾಂಜಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು, ಶ್ರೀ ಹರಿಶ್ಚಂದ್ರ ಬಂಟ್ವಾಳ್‌ರವರು ಏರ್‌ಫೋರ್ಸ್‌ನಲ್ಲಿ ಒಬ್ಬ ಸಮರ್ಥ ಆದಾಯ ತೆರಿಗೆ ಅಧಿಕಾರಿಯಾಗಿದ್ದರಲ್ಲದೇ, ಉತ್ತಮ ಕ್ರೀಡಾಪಟುವೂ ಸಹ ಆಗಿದ್ದರು. ಅವರು ಈ ಹಿಂದೆ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ಕ್ರೀಡಾ ಸಮಿತಿ ಅಧ್ಯಕ್ಷರಾಗಿ ಸಂಘದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹೊಸ ಆಯಾಮ ತಂದಿದ್ದರಲ್ಲದೇ, ನಿರಂತರವಾಗಿ ವಾರ್ಷಿಕ ಆಟೋಟ ಸ್ಪರ್ಧೆಗಳನ್ನು, ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸುವಲ್ಲಿ ಮುಖ್ಯ ಭೂಮಿಕೆ ವಹಿಸಿದ್ದರು, ಅವರ ಅಗಲಿಕೆಯಿಂದ ಇಲ್ಲಿನ ಕ್ರೀಡಾಪ್ರೇಮಿಗಳಿಗೆ ಅಪಾರ ನಷ್ಟವಾಗಿದೆ, ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತ ಕುಟುಂಬದವರಿಗೆ ಅವರ ಅಗಲಿಕೆಯ ದುಃಖ ಸಹಿಸುವ ಶಕ್ತಿ ಸಿಗಲೆಂದು ಪ್ರಾರ್ಥಿಸಿದರು.

ಅಗಲಿದ ಇನ್ನೋರ್ವ ಹಿರಿಯರಾದ ಶ್ರೀ ಶಿವಾನಂದ ಹೆಬ್ಬಾರ್‌ರವರನ್ನು ಸ್ಮರಿಸುತ್ತಾ ಶ್ರೀ ಹೆಬ್ಬಾರ್‌ರವರು ಕೆನರಾ ಬ್ಯಾಂಕಿನಲ್ಲಿ ಹಿರಿಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸಂಘದೊಂದಿಗೆ ಇದ್ದ ಬ್ಯಾಂಕಿನ ವಿವಾದವನ್ನು ಸುಸೂತ್ರವಾಗಿ ಪರಿಹರಿಸುವಲ್ಲಿ ಅವರು ನೀಡಿದ ಸಹಕಾರವನ್ನು ಪ್ರಶಂಶಿಸುತ್ತಾ, ಅವರ ಕಾಲದಲ್ಲಿ ಕೆನರಾ ಬ್ಯಾಂಕಿನಿಂದ ಸುಮಾರು 1.27 ಕೋಟಿ ರೂಪಾಯಿಗಳು ಕೋರ್ಟಿನ ಆದೇಶಾನುಸಾರ ಸಂಘಕ್ಕೆ ಸಂದಿದ್ದನ್ನು ಹಾಗೂ ಅವರು ಸಂಘದಲ್ಲಿ ಚುನಾವಣಾಧಿಕಾರಿಯಾಗಿ ಸಮರ್ಪಕ ಕಾರ್ಯನಿರ್ವಹಿಸಿ ನೀಡಿದ ಸೇವೆಯನ್ನು ಸ್ಮರಿಸಿಕೊಂಡರು. ಹಾಗೇನೇ, ರಾಜೇಂದ್ರನಗರ ಕನ್ನಡ ಬಳಗ, ಹವ್ಯಕ ಸಂಘ ಹಾಗೂ ದೆಹಲಿ ಕರ್ನಾಟಕ ಸಂಘದೊಂದಿಗೆ ಸಕ್ರೀಯವಾಗಿ ಒಡನಾಟ ಇಟ್ಟುಕೊಂಡಿದ್ದ ಶ್ರೀ ಶಿವಾನಂದ ಹೆಬ್ಬಾರರಂತಹ ಮಹಾನುಭಾವರ ಕೊಡುಗೆ ಶ್ಲಾಘನೀಯ. ಅವರ ಆತ್ಮಕ್ಕೆ ಮೋಕ್ಷ ಕರುಣಿಸಲೆಂದು ಹಾಗೂ ಅವರ ಕುಟುಂಬದವರಿಗೆ ಅವರ ಅಗಲಿಕೆಯ ದುಃಖ ಸಹಿಸುವ ಶಕ್ತಿ ಭಗವಂತನು ನೀಡಲೆಂದು ಪ್ರಾರ್ಥಿಸುತ್ತಾ ಶ್ರೀ ಸಿ.ಎಂ. ನಾಗರಾಜರು ತಮ್ಮ ನುಡಿನಮನ ಅರ್ಪಿಸಿದರು. ಶ್ರದ್ಧಾಂಜಲಿ ಸಭೆಯಲ್ಲಿ ಆಗಮಿಸಿದ್ದ ಎಲ್ಲರೂ ಶ್ರೀ ಹರಿಶ್ಚಂದ್ರ ಬಂಟ್ವಾಳ್ ಹಾಗು ಶ್ರೀ ಶಿವಾನಂದ ಹೆಬ್ಬಾರ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರ ಗೌರವಾರ್ಥ ಒಂದು ನಿಮಿಷ ಮೌನಾಚರಿಸಿದರು.

ನಂತರ, ದೆಹಲಿ ಕರ್ನಾಟಕ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಸರವು ಕೃಷ್ಣ ಭಟ್ ಅವರು ಶ್ರೀ ಹರಿಶ್ಚಂದ್ರ ಬಂಟ್ವಾಳರ ಬಗ್ಗೆ ಮಾತನಾಡುತ್ತಾ ಅವರೊಬ್ಬ Good opinion maker, a good sports person and a good supporter of activities of Delhi Karnataka Sangha ಎಂದರು. ಏರ್‌ಫೋರ್ಸ್‌ನಲ್ಲಿ, ಇನ್‌ಕಮ್ ಟ್ಯಾಕ್ಸ್ ವಿಭಾಗದಲ್ಲಿ ಅಧಿಕಾರಿಯಾಗಿದ್ದ ಅವರದ್ದು ವಿಶೇಷವಾದ ವ್ಯಕ್ತಿತ್ವ. ಅವರ ಬಳಿ ಏನಾದರೂ ಸಮಸ್ಯೆಗೆ ಪರಿಹಾರ ಅಥವಾ ಸಲಹೆ ಕೇಳಲು ಹೋದಾಗಲೆಲ್ಲಾ 'ನೋಡುವಾ' ಎಂದು ಭರವಸೆಯ ಮಾತು ಹೇಳುತ್ತಿದ್ದದನ್ನು ನೆನಪಿಕೊಂಡು, ಸದಾ ಸಕಾರಾತ್ಮಕ ಧೋರಣೆ ಹೊಂದಿದ್ದ ಅವರು ಯಾವಾಗಲೂ ಎಲ್ಲದರಲ್ಲೂ ಸಾಮರಸ್ಯ ಹುಡುಕಲು ಪ್ರಯತ್ನ ಪಡುತ್ತಿದ್ದರು. ಸಂಘದ ಕ್ರೀಡಾ ಚಟುವಟಿಕೆಗಳಲ್ಲಿ ಅವರು ನೀಡಿದ ಕೊಡುಗೆ ಅಮೂಲ್ಯವಾದುದು ಎಂದು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು. ಹಾಗೇನೇ, ದಿವಂಗತರಾದ ಶ್ರೀ ಶಿವಾನಂದ ಹೆಬ್ಬಾರರು ಹವ್ಯಕ ಸಂಘ ಹಾಗು ಇತರ ಸಂಘ ಸಂಸ್ಥೆಗಳಿಗೆ, ದೆಹಲಿ ಕರ್ನಾಟಕ ಸಂಘಕ್ಕೆ ಉತ್ತಮ ಸೇವೆ ಸಲ್ಲಿಸಿದ್ದಾರೆ. ಇವರಿಬ್ಬರಿಗೂ ನನ್ನ ನಮನಗಳನ್ನು ಅರ್ಪಿಸುತ್ತೇನೆ ಎಂದರು. ತಾವು ಕಳೆದ 48 ವರ್ಷಗಳಿಂದ ದೆಹಲಿ ಕರ್ನಾಟಕ ಸಂಘವನ್ನು ಅನುಸರಿಸಿಕೊಂಡು ಬಂದಿದ್ದೇನೆ, 10 ಹಿಂದಿನ ಅಧ್ಯಕ್ಷರನ್ನು ನೋಡಿದ ನನಗೆ ಪ್ರಸ್ತುತ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರು ಉತ್ತಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಸಂಘಕ್ಕೆ ಸೇವೆ ಸಲ್ಲಿಸಿದವರು ಅಗಲಿದಾಗ ಅವರನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯವನ್ನು ಶ್ರದ್ಧೆಯಿಂದ ಅವರು ಮಾಡುತ್ತಿದ್ದಾರೆ, ಅವರ ಸೇವೆ ದೆಹಲಿ ಕನ್ನಡಿಗರಿಗೆ ಹೀಗೇ ಮುಂದುವರಿಯಲಿ ಎಂದು ಆಶಿಸಿದರು.

ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ ಶ್ರೀ ಹರಿಶ್ಚಂದ್ರ ಬಂಟ್ವಾಳರ ಮುಗುಳ್ನಗೆ ಸದಾ ನೆನಪಿಗೆ ಬರುತ್ತದೆ. ಅವರ ಕಾರ್ಯ ವೈಖರಿ ಮಾಜಿ ಅಧ್ಯಕ್ಷ ದಿ. ಕೆ.ಆರ್. ನಾಗರಾಜರನ್ನು ನೆನಪಿಸುತ್ತದೆ. ಶ್ರೀ ಶಿವಾನಂದ ಹೆಬ್ಬಾರ್ ಅವರು ದೆಹಲಿ ಕನ್ನಡಿಗರಿಗೆ ನೀಡಿದ ಸೇವೆಯೂ ಸ್ತುತ್ಯಾರ್ಹ. ನಮ್ಮೆಲ್ಲರನ್ನೂ ಅಗಲಿದ ಈ ಇಬ್ಬರಿಗೆ ನನ್ನ ನುಡಿನಮನ ಸಲ್ಲಿಸುತ್ತೇನೆ ಎಂದು ಹೇಳಿದರು.

ಮತ್ತೋರ್ವ ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಎನ್.ಎ. ಮಾಧವರವರು ಮಾತನಾಡಿ ದಿ. ಶ್ರೀ ಹರಿಶ್ಚಂದ್ರ ಬಂಟ್ವಾಳರವರು ಒಬ್ಬ ಉತ್ತಮ ಕ್ರೀಡಾಪಟುವಾಗಿದ್ದು Real Sportsman Spirit ಹೊಂದಿದ್ದರು. ಅವರ ವೈಶಿಷ್ಟ್ಯಪೂರ್ಣ ಆಟದ ಶೈಲಿ, ಕುತೂಹಲಕಾರಿಯಾಗಿ ತಾಂಬೋಲ ಆಟವನ್ನು ಆಡಿಸುತ್ತಿದ್ದ ರೀತಿ ಇವೆಲ್ಲವೂ ಮೆಚ್ಚುವಂತಹದ್ದಾಗಿದ್ದವು. ದಿ. ಶ್ರೀ ಶಿವಾನಂದ ಹೆಬ್ಬಾರ್‌ರವರು ಸಹ ಒಬ್ಬ Nobel Soul. ಈ ಇಬ್ಬರನ್ನು ಕಳೆದುಕೊಂಡಿದ್ದು ತಮ್ಮ ಮನಸ್ಸಿಗೆ ಬಹಳ ದುಃಖವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸಿದರು.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್‌ರವರು ದಿ. ಹರಿಶ್ಚಂದ್ರ ಬಂಟ್ವಾಳ್ ರವರ ಧರ್ಮಪತ್ನಿ ಶ್ರೀಮತಿ ಯಶೋಧ ಬಂಟ್ವಾಳ್‌ರವರು ಕಳುಹಿಸಿದ ಸಂದೇಶವನ್ನು ಓದಿ, ಅವರಿಗೆ ಸಂಘದ ಪರವಾಗಿ ಸಾಂತ್ವನ ಮತ್ತು ಧನ್ಯವಾದಗಳನ್ನು ತಿಳಿಸಿದರು.

ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀಮತಿ ಪೂಜಾ ರಾವ್, ನವದೆಹಲಿಯ ನೀತಿ ಆಯೋಗದ ಉಪ ಸಲಹೆಗಾರರಾದ ಡಾ. ತ್ಯಾಗರಾಜು ಜೆ.ಎಂ., ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜ್ಯುಕೇಷನ್‌ನ ಅಕಾಡೆಮಿಕ್ಸ್ ವಿಭಾಗದ ಡೀನ್ ಆದ ಡಾ. ಆರ್.ಎಸ್. ಜಗದೀಶ್ ರವರು ಸೇರಿದಂತೆ ಹಲವಾರು ದೆಹಲಿ ಕನ್ನಡಿಗರು, ಹಿರಿಯರು, ಸಂಘದ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿ ಅಗಲಿದ ಶ್ರೀ ಹರಿಶ್ಚಂದ್ರ ಬಂಟ್ವಾಳ್ ಹಾಗು ಶ್ರೀ ಶಿವಾನಂದ ಹೆಬ್ಬಾರ್‌ರವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ ಅರ್ಪಿಸಿದರು.

***ಅಭಿಮತ ವರದಿ***

## ದೆಹಲಿ ಕನ್ನಡ ಶಾಲೆಯ ಗಣಿತ ಶಿಕ್ಷಕಿ

### ಶ್ರೀಮತಿ ಅಕ್ಕಮಹಾದೇವಿ ಅವರಿಗೆ ಆತ್ಮೀಯ ಬೀಳ್ಕೊಡುಗೆ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 27 ವರ್ಷ ಗಣಿತ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದು ತಾಯ್ನಾಡಿಗೆ ತೆರಳುತ್ತಿರುವ ಶ್ರೀಮತಿ ಅಕ್ಕಮಹಾದೇವಿ ಅವರನ್ನು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ಗೌರವಿಸಿ, ನಿವೃತ್ತಿ ಜೀವನಕ್ಕೆ ಶುಭ ಹಾರೈಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಮಾಜಿ ಅಧ್ಯಕ್ಷರು, ಶಾಲೆಯ ಮಾಜಿ ಪ್ರಾಂಶುಪಾಲರು, ಸಂಸ್ಥೆಯ ಆಡಳಿತ ಮಂಡಳಿ ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಗೌರವ ವ್ಯವಸ್ಥಾಪಕರು, ಸದಸ್ಯರು, ಶಾಲಾ ಉಪ ಪ್ರಾಂಶುಪಾಲೆ ಹಾಗೂ ಶಿಕ್ಷಕ–ಶಿಕ್ಷಕೇತರ ವೃಂದದವರು, ಪೋಷಕರು ಮತ್ತು ಮಕ್ಕಳು ಉಪಸ್ಥಿತರಿದ್ದರು.

**ಶ್ರೀಮತಿ ಅಕ್ಕಮಹಾದೇವಿ ಅವರಿಗೆ ದೆಹಲಿ ಕರ್ನಾಟಕ ಸಂಘವು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಕೋರುತ್ತಾ ಅವರ ನಿವೃತ್ತ ಜೀವನ ಆರೋಗ್ಯಕರ ಹಾಗು ಸುಖಕರವಾಗಿರಲೆಂದು ಹಾರೈಸುತ್ತದೆ.**

## ತುಳುನಾಡಿನ ಆಟಿ ಅಮಾವಾಸ್ಯೆಯ

### ಕಷಾಯ/ಮದ್ದು ಸವಿದ ದೆಹಲಿ ಕನ್ನಡಿಗರು



ಜುಲೈ 17, 2023 ರಂದು ಆಟಿ ಅಮಾವಾಸ್ಯೆಯ ದಿನ ಬೆಳಿಗ್ಗೆ ದೆಹಲಿ ಕರ್ನಾಟಕ ಸಂಘದ ಬಳಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಉಚಿತವಾಗಿ ನೀಡಲಾದ ಹಾಳೆ ಮರದ ತೊಗಟಿನ ಔಷಧರೂಪಿ ಕಷಾಯ ಮತ್ತು ಮೆಂತ್ಯೆ ಗಂಜಿಯನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿ ಸೇವಿಸಿದ ಹಲವಾರು ದೆಹಲಿ ಕನ್ನಡಿಗರು ತಮ್ಮ ಆರೋಗ್ಯ ವರ್ಧನೆಯನ್ನು ಮಾಡಿಕೊಂಡರು.

ಕಷಾಯ ಸೇವಿಸುವ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ ಗುರುಗ್ರಾಮದ ಪೋರ್ಟಿಸ್ ಆಸ್ಪತ್ರೆಯ ಆಂಕಾಲಜೀ ವಿಭಾಗದ ಮುಖ್ಯಸ್ಥರಾದ, ಕ್ಯಾನ್ಸರ್ ಸರ್ಜನ್ ಡಾ. ಬಿ. ನಿರಂಜನ್ ನಾಯ್ಕ್ ಅವರು ಈ ಕಷಾಯದ ಉಪಯೋಗಗಳನ್ನು ನೆರೆದಿದ್ದವರಿಗೆ ತಿಳಿಸಿಕೊಟ್ಟರು. ಮಂಗಳೂರು ಮೂಲದ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ಶ್ರೀ ಉಸ್ಮಾನ್ ಅಬ್ದುಲ್ ಷರೀಫ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ದೆಹಲಿಯ ಹಲವು ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಸದಸ್ಯರು ಭಾಗವಹಿಸಿದ್ದರು.

## ಅಭಿನಂದನೆ



ಡಾ. ಸಂಗಮೇಶ



ಡಾ. ರಮೇಶ್ ಸಾಲಿಯಾನ್



ಡಾ. ಸುಧಾ ಕುಮಾರಿ ಕೆ

ನವದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆ.ಎನ್.ಯು)ದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ನಮ್ಮ ಕನ್ನಡಿಗ ಡಾ. ಸಂಗಮೇಶ ಅವರು ನೇಮಕವಾಗಿದ್ದಾರೆ.

ಜೆ.ಎನ್.ಯು.ನ ಸೆಂಟರ್ ಫಾರ್ ಎಕನಾಮಿಕ್ ಸ್ಟಡೀಸ್ ಅಂಡ್ ಪ್ಲಾನಿಂಗ್‌ನಲ್ಲಿ ಅರ್ಥಶಾಸ್ತ್ರ ಪ್ರೊಫೆಸರ್ ಆಗಿ ಇನ್ನೊರ್ವ ಕನ್ನಡಿಗ ಡಾ. ರಮೇಶ್ ಸಾಲಿಯಾನ್ ಅವರು ನೇಮಕವಾಗಿದ್ದಾರೆ.

ಜೆ.ಎನ್.ಯು.ನಲ್ಲಿ ಪ್ರಾಧ್ಯಾಪಕರಾಗಿ ಈ ಈರ್ವರೂ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯ.

ಡಾ. ಸುಧಾ ಕುಮಾರಿ ಕೆ. ಅವರು ದೆಹಲಿ ವಿಶ್ವವಿದ್ಯಾಲಯದಲ್ಲಿ ಮಾಡರ್ನ್ ಇಂಡಿಯನ್ ಲ್ಯಾಂಗ್ವೇಜ್ ಅಂಡ್ ಲಿಟರೇಚರ್ ಸ್ಟಡೀಸ್‌ನಲ್ಲಿ ಸಹಾಯಕ ಪ್ರಾಧ್ಯಾಪಕರು (ಕನ್ನಡ) ಆಗಿ ಸೇವೆ ಸಲ್ಲಿಸುತ್ತಿದ್ದಾರೆ. **ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಇವರೆಲ್ಲರಿಗೂ ಹಾರ್ದಿಕ ಅಭಿನಂದನೆಗಳು.**

ಯೋಗ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ಅಮೇರಿಕಾದ ಚಿಕಾಗೋ ನಗರದಲ್ಲಿ ಜರುಗಿದ ವಿಶ್ವ ವೈದಿಕ ಪ್ರತಿಷ್ಠಾನ ಹಾಗು ನಿರ್ವಹಣಾ ವಿಜ್ಞಾನ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 'ಸ್ವಾಮಿ ವಿವೇಕಾನಂದ ಲೀಡರ್‌ಶಿಪ್ ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ವೈಸೂರು ವೇದವ್ಯಾಸ ಯೋಗ ಪ್ರತಿಷ್ಠಾನದ ಯೋಗ ಗುರು ಡಾ. ಕೆ. ರಾಘವೇಂದ್ರ ಪೈ ಅವರು 30.07.2023 ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಸಂದರ್ಭ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.





ಸಂಘವು ಜುಲೈ 23, 2023 ರಂದು ಆಯೋಜಿಸಿದ 'ಆರೋಗ್ಯ ಮೇಳ' ಕಾರ್ಯಕ್ರಮದಲ್ಲಿ ಸೇವಾ ನಿವೃತ್ತಿ ತರುವಾಯ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಶಕುಂತಲಾ ನಾಯ್ಕ್ ಮತ್ತು ಶ್ರೀ ಸುಧಾಕರ್ ನಾಯ್ಕ್ ದಂಪತಿಗಳನ್ನು ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

## ಅಭಿನಂದನೆ

ಆಧುನಿಕ ಶ್ರವಣಕುಮಾರ ಎಂದೇ ಪ್ರಖ್ಯಾತರಾಗಿರುವ ಶ್ರೀ ಕೃಷ್ಣ ಕುಮಾರ್ ಹಾಗೂ ಅವರ ಮಾತಾಶ್ರೀಯವರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಮಕ್ಕಳ ಕಾರ್ಯಾಗಾರ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರುಗಳು ಭೇಟಿ ನೀಡಿದ ಸಂದರ್ಭ, ಸಂಘದ ವತಿಯಿಂದ ಅವರಿಗೆ ಗೌರವ ಸಮರ್ಪಣೆ ಮಾಡಲಾಯಿತು.




## List of Important Scholarships and Awards available for School Students

| Sl No. | Scholarship | Discipline | Eligibility | Application Process | Reward Details | Deadline |
|---|---|---|---|---|---|---|
| 1 | Kishore Vaigyanik Protsahan Yojana (KVPY) | Maths & Science | Class 11 &12 | Online Aptitude Test & Interview | Monthly Stipend Rs 5000/- & Rs 20000/- grant during Graduation | August |
| 2 | Innovation in Science Pursuit for Inspired Research (INSPIRE) | Science | Class 6 to 10 | School to nominate | Winner to get Rs 5000/- for Project exhibit | Depends |
| 2a | INSPIRE Internship | Science | Class 11 | School to nominate | Internhip in Science camps | Depends |
| 2b | Scholarship for Higher Education (SHE) | For Graduation | Class 12th (passed) | Students in top 1% in Board exam, pursuing BSc & MSc, | Winners to get Rs 10000/- to 100000/- & certificate | Depends |
| 3 | CSIR Innovation Award for School Children (by CSIR, Govt of India) | Exhibition of Project | Age Below 18 | Student's Project writeup (to forward by school) by post | Rs 80000/- per year | September |
| 4 | Youva Master Stroke All India Drawing Competion | Drawing Competion | Nursery to Class 10 | Online | Attractive Prize (TV, Ipad, laptop etc) | August |
| 5 | Google India Code to Learn Contest (by Google) | Coding in Computers | Class 5 to 10 | Online (througn School's Computer Teacher) | Chromebook laptop by Google | August |
| 6 | HDFC Educational Crisis Scholarship (by HDFC Bank) | Finance Assistance | Class 6 to 12 | Online | Rs 10000/- assistance for economically disadvantaged | August |
| 7 | All India Art Competition (by Shankar Art Foundation) | Drawing Competion | Nursery to Class12 | Online (School/Student) | Medal & Certificate | August |
| 8 | Mahindra All India Talent Scholarship ( by KC Mahindra Education Trust) | Scholarship Award | Class 10th & 12th (passed) | Online (School/Student) | Rs 10000/- per year for three years | August |
| 9 | Korea-India Friendship Essay Competition ( By Korean Cultural Center Indai Embassy, Korea) | Essay Writing | Class 6 to 12 | Download essay topic from webpage & to submit by email | Free Trip to Korea (6D/5N) | August |
| 10 | Dr APJ Abdul Kalam IGNITE Awards (by National Innovation Foundation , Govt. of India) | Exhibition of Project | Up to Class 12 (17 Years) | Student to submit Project writeup (Online/Email) | Winners to present at NIF Gujarath (all expenses paid) | August |
| 11 | National Scholarship Exam (by National Institute of Career Education Foundation , Govt. of India) | Scholarship Exam | Class 5 to 12 | Student to download form from web site , fill and submit by post | Winner to get Prize money | September |
| 12 | **Pre -Metric Scholarships Exam** (by Ministry of Minority Affairs , Govt. of India) - Scheme for Minorities | Financial support | Class 1to 10 | Online (for Students from Minority Community with annual family income not more than Rs 1 lac) | Financial support | September |
| 12a | **Pre -Metric Scholarships Exam** (by Ministry of Minority Affairs , Govt. of India) - Scheme for Students with Disabilities | Financial support | Class 9 & 10 | Online (for Students with 40% disability with annual family income not more than Rs 2.5 lac) | Financial support | September |
| 13 | **OIL Awards & OIL Merit Scholarships** (by OIL India Limiited Govt. of India) | Cash Award based on academic score | Class 10 & 12 | Online | Scholarship Money | August |
| 14 | **Science Olympiad Foundation Scholarships**- For Girl Child Schoalarship scheme | Financial assistance to girls from economically weaker section | Class 1 to 10 (Girls only) | Submit online the Hard copy & documents in link | Rs 5000/- | October |
| 15 | **National Science Concours Exam** (by Foundation for Innovation & Experimental Learning) | Many Awards & Benefits to students | Class 6 to 12 | Online | Get to enroll to summer science camps , will get Junior Scientist award, wnter kit & certificate | October |
| 16 | **National Competition for Green GrassrootsExam** (by National Innovation Foundation , Govt. of India) | Award to encourage innovation & hidden creative talent | Class 1 to 12 | By post | Winners : Rs 5 lac , Rs 3 Lac & Rs 1Lac (National First , second & third) NIF also can give lifetime Acchievement Award Rs 7.5 Lac for oustanding Innovator | March |

Delhi Karnataka Sangha Abhimata
Aug -2023, Vol. No.33, Issue No. 11, Price Rs.1/-
RNI Regn. No. 53405/91, DL-SW-01/4016/22-24
Date of Publication : Aug 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P



ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಸಂಘದ ಕಾರ್ಯಕ್ರಮಗಳ ಬಗ್ಗೆ ವಿವರ ತಿಳಿಸಿ ಸಂಘದ ಮುಖಪತ್ರಿಕೆ ಅಭಿಮತವನ್ನು ನೀಡಲಾಯಿತು.



ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಶಿವರಾಜ್ ಎಸ್. ತಂಗಡಗಿಯವರನ್ನು ಭೇಟಿ ಮಾಡಿ ಸಂಘದ ಮುಂಬರುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಲು ಆಹ್ವಾನಿಸಿ ಅಭಿಮತ ಸಂಚಿಕೆ ನೀಡಿದ ಸಂದರ್ಭ.




ಕೇಂದ್ರ ಮಂತ್ರಿಗಳಾದ ಶ್ರೀ ಎ. ನಾರಾಯಣ ಸ್ವಾಮಿಯವರನ್ನು ದೇಶದ ಪ್ರಥಮ ವಚನ ಸಂಸ್ಕೃತಿ ಅಭಿಯಾನದ ಭಾಗವಾಗಿ ದಿ. 30.07.2023 ರಂದು ಸಂಘದಲ್ಲಿ ನಡೆದ ಸಂವಾದ ಮತ್ತು ನೃತ್ಯರೂಪಕ ಪ್ರಸ್ತುತಿ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರ ದಿವ್ಯ ಸಾನಿಧ್ಯದಲ್ಲಿ, ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಅಭಿನಂದಿಸಿದ ಕ್ಷಣ